# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಸೆಪ್ಟೆಂಬರ್ 04, 2020

ಸಂಪುಟ : 47 ಸಂಚಿಕೆ : 115 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com


**ಭದ್ರಾ ಜಲಾಶಯ**

ಇಂದಿನ ಮಟ್ಟ : 182 ಅಡಿ 10 ಇಂಚು

ಒಳ ಹರಿವು : 3848 ಕ್ಯೂಸೆಕ್ಸ್
ಹೊರ ಹರಿವು : 2668 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 185.8 ಅಡಿ

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ 1965 - ನಿಧನ 31-08-2020

ದಾವಣಗೆರೆ ತಾ॥
ಐಗೂರು ಗ್ರಾಮದ ವಾಸಿ
**ಶ್ರೀ ಎಂ.ಬಿ. ಬಸವರಾಜಪ್ಪ**
ಮಾಜಿ ಅಧ್ಯಕ್ಷರು,
ಗ್ರಾ.ಪಂ. ಐಗೂರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 31-08-2020ರ ಸೋಮವಾರ
ಬೆಳಿಗ್ಗೆ 8 ಗಂಟೆಗೆ ನನ್ನ ಧರ್ಮಪತ್ನಿಯಾದ
**ಶ್ರೀಮತಿ ಸಾಕಮ್ಮನವರು**
(ಶ್ರೀ ಎಂ.ಬಿ. ಬಸವರಾಜಪ್ಪ ಗ್ರಾ.ಪಂ. ಮಾಜಿ ಅಧ್ಯಕ್ಷರು ಇವರ ಧರ್ಮಪತ್ನಿ)

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 04-09-2020ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಐಗೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಲಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ತಮ್ಮಲ್ಲಿ ಪ್ರಾರ್ಥನೆ.

ಇಂತಿ ದುಃಖತಪ್ತರು : ಶ್ರೀ ಎಂ.ಬಿ. ಬಸವರಾಜಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷರು, ಐಗೂರು.
ಶ್ರೀ ಎಂ.ಬಿ. ರಾಜಶೇಖರ್ ಬೆಸ್ಕಾಂ ಇಂಜಿನಿಯರ್, ಬೆಂಗಳೂರು, ಶ್ರೀಮತಿ ಮೇಘ ಮತ್ತು ಮಕ್ಕಳು.
ಶ್ರೀಮತಿ ಎಂ.ಬಿ, ಜ್ಯೋತಿ, ಶ್ರೀ ಮಹೇಶ್, ಎಸ್.ಬಿ.ಐ ಮ್ಯಾನೇಜರ್, ಮೂಡಿಗೆರೆ ಮತ್ತು ಮಕ್ಕಳು.
ಶ್ರೀ ಎಂ.ಬಿ.ಕೆಂಚವೀರಪ್ಪ ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು,
ಶ್ರೀ ಎಂ.ಬಿ. ನಾಗರಾಜಪ್ಪ ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು ಮಾವಂದಿರು, ಅಳಿಯಂದಿರು
ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು ಹಾಗೂ ಐಗೂರು ಗ್ರಾಮಸ್ಥರು.

॥ ಶ್ರೀ ಹಂಪಿ ವಿರುಪಾಕ್ಷೇಶ್ವರ ಸ್ವಾಮಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ವಾಸಿ
**ಶ್ರೀಮತಿ ಪ್ರೇಮಲೀಲ ಡಿ. ಚಂದ್ರಶೇಖರಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 31.08.2020ರಂದು
ಸೋಮವಾರ ರಾತ್ರಿ 11.30ಕ್ಕೆ
ನನ್ನ ಪತಿಯವರಾದ
**ಶ್ರೀ ಡಿ. ಚಂದ್ರಶೇಖರಪ್ಪ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 4.9.2020ರಂದು ಶುಕ್ರವಾರ ಬೆಳಿಗ್ಗೆ 12 ಗಂಟೆಗೆ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಪ್ರೇಮಲೀಲ ಡಿ. ಚಂದ್ರಶೇಖರಪ್ಪ ಮತ್ತು ಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಫೋ. :9632504434, 87928 18359


## ಶ್ರೀ ಬಿ.ಪಿ. ಮಾದೇವ್ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್ ವಾಸಿ,
ದಾವಣಗೆರೆ ಜಿಲ್ಲಾ ಕಬ್ಬಿಣ ಮತ್ತು
ಸಿಮೆಂಟ್ ವರ್ತಕರಾದ ಸಂಘದ ಅಧ್ಯಕ್ಷರಾದ
**ಶ್ರೀ ಬಿ.ಪಿ. ಮಾದೇವ್** ಅವರು
ದಿನಾಂಕ 03.09.2020ರ ಗುರುವಾರ ರಾತ್ರಿ 9.45ಕ್ಕೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 60 ವರ್ಷ ವಯಸ್ಸಾಗಿತ್ತು.
ತಾಯಿ, ಸಹೋದರರು, ಸಹೋದರಿಯರು
ಹಾಗೂ ಅಪಾರ ಬಂಧು-ಬಳಗವನ್ನು
ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ 04.09.2020ರ ಶುಕ್ರವಾರ
ಮಧ್ಯಾಹ್ನ 12 ಗಂಟೆಗೆ ಎಲೆಬೇತೂರು ಗ್ರಾಮದ
ಅವರ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಎಲೆಬೇತೂರು ಮಾಳಗಿ ವಂಶಸ್ಥರು, ನಂದಿ ಸಿಮೆಂಟ್ಸ್, ನಂದಿ ಸ್ಟೀಲ್ಸ್
ಕಂದಗಲ್ಲು ಗೌಡ್ರು ವಂಶಸ್ಥರು ಮೊ. : 94481 18189

## ಬಿ. ಕಲ್ಪನಹಳ್ಳಿ ಗ್ರಾಮದ ದೊಡ್ಡಗೌಡ್ರು ಕೆ.ಜಿ. ಪರಮೇಶ್ವರಗೌಡ್ರು ನಿಧನ



**ಶ್ರೀ ದೊಡ್ಡಗೌಡ್ರು ಕೆ.ಜಿ. ಪರಮೇಶ್ವರಗೌಡ್ರು**
ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್ ಮಾಲೀಕರು,
ಬಿ. ಚಿತ್ತಾನಹಳ್ಳಿ, ದಾವಣಗೆರೆ ತಾಲ್ಲೂಕು.

ದಾವಣಗೆರೆ ತಾಲ್ಲೂಕು ಬಿ. ಕಲ್ಪನಹಳ್ಳಿ ಗ್ರಾಮದ ವಾಸಿ
ದೊಡ್ಡಗೌಡ್ರು ಕೆ.ಜಿ. ಬಸವನಗೌಡ್ರು ಇವರ ಪುತ್ರರೂ,
ಬಿ. ಚಿತ್ತಾನಹಳ್ಳಿಯ ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್ ಮಾಲೀಕರೂ ಆದ
**ಶ್ರೀ ದೊಡ್ಡಗೌಡ್ರು ಕೆ.ಜಿ. ಪರಮೇಶ್ವರಗೌಡ್ರು**
ಅವರು, ದಿನಾಂಕ 03.09.2020ರ ಗುರುವಾರ ಸಂಜೆ 6 ಗಂಟೆಗೆ ನಿಧನರಾದರೆಂದು
ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 76 ವರ್ಷ ವಯಸ್ಸಾಗಿತ್ತು.
ಕೆ.ಜಿ. ಪರಮೇಶ್ವರಗೌಡ್ರು ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ,
ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು
ದಿನಾಂಕ 03.09.2020ರ ಗುರುವಾರ ರಾತ್ರಿ ಬಿ.ಚಿತ್ತಾನಹಳ್ಳಿಯ ಮೃತರ ಜಮೀನಿನಲ್ಲಿರುವ
ಶ್ರೀ ಬಸವೇಶ್ವರ ರೈಸ್ ಮಿಲ್ ಆವರಣದಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**

- ಧರ್ಮಪತ್ನಿ : ಶ್ರೀಮತಿ ಪಾರ್ವತಮ್ಮ ಪರಮೇಶ್ವರಗೌಡ್ರು
- ಸೊಸೆ-ಪುತ್ರ : ಶ್ರೀಮತಿ ಸಂಧ್ಯಾರಾಣಿ ಮತ್ತು ಕೆ.ಜಿ. ಧನ್ಯಕುಮಾರ್, ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್
- ಪುತ್ರಿ-ಅಳಿಯ : ಶ್ರೀಮತಿ ಲೀಲಾ ಮತ್ತು ಕೆ. ವಿಜಯಕುಮಾರ್, ಚಿ॥ ಸಂಕೇತ್ ಶಿರಮಗೊಂಡನಹಳ್ಳಿ
- ಮೊಮ್ಮಕ್ಕಳು : ನಂದೀಶ್, ಕಾರ್ತಿಕ್

ಸಹೋದರರಾದ :

- ಕೆ.ಜಿ. ಮಂಜುನಾಥಪ್ಪ ಮತ್ತು ಮಕ್ಕಳು, ಶ್ರೀ ಬಸವೇಶ್ವರ ಪ್ರಾವಿಜನ್ ಸ್ಟೋರ್ಸ್
- ಕೆ.ಜಿ. ಮಹೇಶ್ವರಪ್ಪ ಮತ್ತು ಮಕ್ಕಳು, ಶ್ರೀ ಬಸವೇಶ್ವರ ಕಿರಾಣಿ ಮರ್ಚಂಟ್, ಶ್ರೀ ಬಸವೇಶ್ವರ ಎಂಟರ್‌ಪ್ರೈಸಸ್
- ಕೆ.ಜಿ. ಚನ್ನಪ್ಪಗೌಡ್ರು ಮತ್ತು ಮಕ್ಕಳು, ಶ್ರೀ ಬಸವೇಶ್ವರ ಜನರಲ್ ಸ್ಟೋರ್ಸ್
- ದಿ॥ ಕೆ.ಜಿ. ಶಿವಾನಂದಪ್ಪನವರ ಮಕ್ಕಳು, ಶ್ರೀ ಶಿವಬಸವೇಶ್ವರ ಪ್ರಾವಿಜನ್ ಸ್ಟೋರ್ಸ್
- ಕೆ.ಜಿ. ಚಂದ್ರಶೇಖರಗೌಡ್ರು, ಭೂ ನ್ಯಾಯ ಮಂಡಳಿ ಮಾಜಿ ಅಧ್ಯಕ್ಷರು ಮತ್ತು ಮಕ್ಕಳು
- ದಿ॥ ಎಸ್. ನಾಗಪ್ಪ, ಶ್ರೀಮತಿ ಶಾರದಮ್ಮ ಹಾಗೂ ಮಕ್ಕಳು
- ಎ.ಬಿ. ಮಂಜುನಾಥ ಮತ್ತು ಶ್ರೀಮತಿ ನಾಗರತ್ನ ಹಾಗೂ ಮಕ್ಕಳು
- ದೊಡ್ಡಗೌಡ್ರು ವಂಶಸ್ಥರು, ಬಿ. ಕಲ್ಪನಹಳ್ಳಿ ಹಾಗೂ ಗ್ರಾಮಸ್ಥರು
- ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್ ನೌಕರರ ಬಳಗ, ಬಿ. ಚಿತ್ತಾನಹಳ್ಳಿ.

# ಕೋವಿಡ್ ಖಾಸಗಿ ಆಸ್ಪತ್ರೆ ಉದ್ಘಾಟನೆ




**ರಾಣೇಬೆನ್ನೂರಿನದ್ದೇ ಜಿಲ್ಲೆಗೆ ಪ್ರಥಮ**

ರಾಣೇಬೆನ್ನೂರು, ಸೆ.3- ಕೊರೊನಾ ಸೋಂಕು ತಡೆಗಟ್ಟಲು ಸ್ಯಾನಿಟೈಜರ್ ಬಳಕೆ, ಸಾಮಾಜಿಕ ಅಂತರ, ಮಾಸ್ಕ್ ಬಳಕೆ ಇದು ಪ್ರತಿಯೊಬ್ಬರ ಪ್ರತಿನಿತ್ಯದ ಜವಾಬ್ದಾರಿಯಾಗಬೇಕು ಎಂದು ಜಿಲ್ಲಾಧಿಕಾರಿ ಎಸ್.ಬಿ. ಶೆಟ್ಟೆಣ್ಣನವರ ಹೇಳಿದರು.

ಅವರು ಇಂದು ಇಲ್ಲಿನ ಓಂ ಆಸ್ಪತ್ರೆಯಲ್ಲಿ ಜಿಲ್ಲೆಯಲ್ಲಿಯೇ ಪ್ರಥಮ ಕೋವಿಡ್ ಆಸ್ಪತ್ರೆಯನ್ನು ಉದ್ಘಾಟಿಸಿ ಮಾತನಾಡಿದರು.

ಜನರ ಬೇಜವಾಬ್ದಾರಿಯಿಂದಾಗಿ ರೋಗ ಉಲ್ಬಣಗೊಳ್ಳುತ್ತಿದೆ. ಸರ್ಕಾರ ಸಾಕಷ್ಟು ಕ್ರಮ ಕೈಗೊಂಡರೂ ಸಹ ಜನರ ಸಹಕಾರ ಇಲ್ಲದೆ ಯಾವ ಕಾರ್ಯ ಸಾಧಿಸಲು ಆಗುವುದಿಲ್ಲ. ಜನರ ವರ್ತನೆಗೆ ಬೇಸರ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ಈ ಬಗ್ಗೆ ಕಠಿಣ ಕ್ರಮ ಜರುಗಿಸುವಂತೆ ಪೊಲೀಸರಿಗೆ ಆದೇಶಿಸಲಾಗಿದೆ ಎಂದು ತಿಳಿಸಿದರು.

ಮುಂದಿನ ತಿಂಗಳೊಳಗೆ ಸುಮಾರು 8 ಸಾವಿರ ಸೋಂಕು ಪ್ರಕರಣಗಳು ದಾಖಲಾಗಲಿವೆ ಎಂದು ತಿಳಿಸಿದ ಜಿಲ್ಲಾಧಿಕಾರಿಗಳು, ಈ ದಿಶೆಯಲ್ಲಿ ಇನ್ನೂ ಹೆಚ್ಚು ಖಾಸಗಿ ವೈದ್ಯರುಗಳು ರೋಗದ ವಿರುದ್ಧ ಹೋರಾಟ ನಡೆಸಬೇಕಿದೆ ಎಂದು ಮನವಿ ಮಾಡಿದರು. ಜಿಲ್ಲೆಯಲ್ಲಿ ಪ್ರಥಮವಾಗಿ ರಾಣೇಬೆನ್ನೂರಿನಲ್ಲಿ ಆಸ್ಪತ್ರೆ ಪ್ರಾರಂಭಿಸಿದ ಬಗ್ಗೆ ಜಿಲ್ಲಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿ ಈ ದಿಶೆಯಲ್ಲಿ ಉಳಿದ ವೈದ್ಯರು ಕೈ ಜೋಡಿಸಲು ಮನವಿ ಮಾಡಿದರು.

ಓಂ ಆಸ್ಪತ್ರೆಯ ಡಾ. ಮನೋಜ ಸಾಹುಕಾರ, ಡಾ. ನಾಗರಾಜ ದೊಡ್ಮನಿ, ಡಾ.ರವಿ. ಕುಲ್ಕರ್ಣಿ, ರುಕ್ಮಿಣಿ ಸಾಹುಕಾರ ಮತ್ತಿತರರಿದ್ದರು.

# ಆನ್‌ಲೈನ್‌ನಿಂದ ದೂರ ಶಿಕ್ಷಣ ಹತ್ತಿರ

**ಕರಾಮುವಿ ಕುಲಪತಿ ಪ್ರೊ.ವಿದ್ಯಾಶಂಕರ್**

ದಾವಣಗೆರೆ, ಸೆ. 3 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಚಟುವಟಿಕೆಗಳು ಆನ್‌ಲೈನ್ ಮೂಲಕ ನಡೆಯುವಂತಾಗಿವೆ ಎಂದು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ಹೇಳಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಯು 25ನೇ ವರ್ಷಕ್ಕೆ ಕಾಲಿಟ್ಟಿರುವ ಈ ಸಂದರ್ಭದಲ್ಲಿ ಸರ್ಕಾರ ನಮ್ಮ ವಿವಿಗೆ ಮಾತ್ರ ದೂರ ಶಿಕ್ಷಣ ನೀಡಲು ಅನುವು ಮಾಡಿಕೊಟ್ಟಿದೆ. ಇದನ್ನು ಸವಾಲಾಗಿ ಸ್ವೀಕರಿಸಿ ಗುಣಮಟ್ಟದ ಶಿಕ್ಷಣ ನೀಡಲು ಅನೇಕ ಬದಲಾವಣೆ ತಂದಿರುವುದಾಗಿ ಅವರು ಹೇಳಿದರು. ವಿದ್ಯಾರ್ಥಿಗಳೊಂದಿಗೆ ನೇರ ಸಂಪರ್ಕ ಸಾಧಿಸಲು ಕೆಎಸ್‌ಒಯು ಮೊಬೈಲ್ ಆಪ್ ರಚಿಸಲಾಗಿದೆ. ಇಲ್ಲಿ ಎಲ್ಲಾ ವಿವರಗಳೂ ದೊರೆಯಲಿವೆ. ಭಾರತದಲ್ಲಿಯೇ ಮೊದಲ ಬಾರಿಗೆ ನಮ್ಮ ವಿವಿಯಿಂದ ವೆಬ್ ರೇಡಿಯೋ ಲೈವ್ ನೀಡಲಾಗುತ್ತಿದೆ. ವಿದ್ಯಾರ್ಥಿ ಬಳಿ ಒಂದು ಸ್ಮಾರ್ಟ್ ಫೋನ್ ಇದ್ದರೆ ಆತ ಸುಲಭವಾಗಿ ಪದವಿ ಪಡೆಯಬಹುದಾಗಿದೆ ಎಂದರು.

ರಾಜ್ಯದಲ್ಲಿ 75 ಸ್ಟಡಿ ಸೆಂಟರ್‌ಗಳಿರುವುದಾಗಿ ಹೇಳಿದ ಅವರು, ಪ್ರಸಕ್ತ ವರ್ಷದ ಶೈಕ್ಷಣಿಕ ಸಾಲಿಗೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಆರಂಭವಾಗಿದ್ದು ದಂಡ ರಹಿತ ಪ್ರವೇಶಾತಿಗೆ ಅಕ್ಟೋಬರ್ 10 ಹಾಗೂ ದಂಡ ಸಹಿತ ಪ್ರವೇಶಾತಿಗೆ ಅ.29 ಕೊನೆಯ ದಿನವಾಗಿರುವುದಾಗಿ ಹೇಳಿದರು.

ದೂರ ಶಿಕ್ಷಣಕ್ಕೆ ಮೌಲ್ಯವಿಲ್ಲ ಎನ್ನುವ ಮಾತುಗಳಿಗೆ ಕಿವಿಗೊಡದಿರಲು ಅವರು ವಿದ್ಯಾರ್ಥಿಗಳಿಗೆ ಸಲೆ ನೀಡಿದ ಅವರು, ದೂರ ಶಿಕ್ಷಣದ ಪಡೆದ 18 ಜನರು ಕೆಎಎಸ್ ಪರೀಕ್ಷೆ ಉತ್ತೀರ್ಣರಾಗಿದ್ದಾರೆ ಎಂದರು.

ಪ್ರಾದೇಶಿಕ ಕೇಂದ್ರ ನಿರ್ದೇಶಕ ಡಾ.ಸುಧಾಕರ್ ಹೊಸಳ್ಳಿ ಪತ್ರಿಕಾಗೋಷ್ಠಿಯಲ್ಲಿದ್ದರು.

## ಹರಿಹರ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕರಾಗಿ ಜೆ.ಡಿ. ಗಂಗಾಧರನ್

ಹರಿಹರ, ಸೆ.3- ಹರಿಹರ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕರಾಗಿ ನಿನ್ನೆ ಜೆ.ಡಿ. ಗಂಗಾಧರನ್ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಈ ಹಿಂದೆ ಬಿ. ಲಕ್ಷ್ಮೀಪತಿ ಅವರು ಕಾರ್ಯನಿರ್ವಹಿಸುತ್ತಿದ್ದು, ಆಗಸ್ಟ್ 31 ರಂದು ಗಂಗಾಧರ್ ಅವರಿಗೆ ಹುದ್ದೆ ನಿರ್ವಹಿಸಿಕೊಳ್ಳುವಂತೆ ಆದೇಶ ಬಂದಿರುವ ಹಿನ್ನೆಲೆಯಲ್ಲಿ ಕಚೇರಿಗೆ ಆಗಮಿಸಿ ಕರ್ತವ್ಯದಲ್ಲಿ ನಿರತರಾಗಿದ್ದಾರೆ. ಲಕ್ಷ್ಮೀಪತಿ ಅವರು ಅನಾರೋಗ್ಯ ನಿಮಿತ್ತ ಕಚೇರಿಗೆ ಕೆಲಸಕ್ಕೆ ಬರದೇ ಇರುವುದರಿಂದ ಇನ್ನೂ ಅಧಿಕಾರ ಹಸ್ತಾಂತರ ಮಾಡಿರುವುದಿಲ್ಲ. ಆದೇಶ ಬಂದ ಹಿನ್ನೆಲೆಯಲ್ಲಿ ಗಂಗಾಧರನ್ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಕಳೆದ 8 ತಿಂಗಳಿಂದ ಈ ಇಬ್ಬರು ಅಧಿಕಾರಿಗಳ ನಡುವೆ ಜಟಾಪಟಿ ನಡೆಯುತ್ತಿದ್ದು, ಮುಂದೆ ಇದು ಯಾವ ತಿರುವು ಪಡೆಯುತ್ತದೆ ಕಾದು ನೋಡಬೇಕಿದೆ.

## ಬಸವರಾಜ ಸಂಗಪ್ಪನವರ್‌ಗೆ ಸನ್ಮಾನ




ಹರಪನಹಳ್ಳಿ, ಸೆ.3- ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯ ಶಿಕ್ಷಕ ಹಾಗೂ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಸವರಾಜ ಸಂಗಪ್ಪನವರ್‌ಗೆ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಬಹುಮಾನ ನೀಡಿ ಸನ್ಮಾನಿಸಿ, ಗೌರವಿಸಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಲಾಕ್‌ಡೌನ್ ಸಮಯದಲ್ಲಿ ಶಿಕ್ಷಕರಿಗೆ 'ಸರ್ಕಾರಿ ಶಾಲೆಗಳು ಹಾಗೂ ಶಾಲಾ ಮಕ್ಕಳ ಗುಣಾತ್ಮಕ ಶಿಕ್ಷಣದ ಸಬಲೀಕರಣಕ್ಕಾಗಿ ಶಿಕ್ಷಕರು, ಪಾಲಕರು ಹಾಗೂ ಇಲಾಖೆ ಕೈಗೊಳ್ಳಬಹುದಾದ ಮಾರ್ಗೋಪಾಯಗಳು' ಎಂಬ ವಿಷಯದ ಬಗ್ಗೆ ರಾಜ್ಯ ಮಟ್ಟದಲ್ಲಿ ಏರ್ಪಡಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಟಾಪ್-10 ಶಿಕ್ಷಕರ ಪೈಕಿ ಹರಪನಹಳ್ಳಿಯ ಬಸವರಾಜ ಸಂಗಪ್ಪನವರ್ ಒಬ್ಬರಾಗಿದ್ದಾರೆ. ಹಾಗಾಗಿ ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಬಸವರಾಜ್ ಸಂಗಪ್ಪನವರ್‌ಗೆ ಬಹುಮಾನ ನೀಡಿ ಗೌರವಿಸಿ, ಸನ್ಮಾನಿಸಿದ್ದಾರೆ.

## ವಿದ್ಯಾಲಕ್ಷ್ಮಿ ಪ್ರೌಢಶಾಲೆಗೆ ಶೇ. 100

ಚನ್ನಗಿರಿ, ಸೆ.3- ಕಬ್ಬಳ ಗ್ರಾಮದ ಶ್ರೀ ವಿದ್ಯಾಲಕ್ಷ್ಮಿ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಲಭಿಸಿದೆ. ಸಿ.ಆರ್. ಲಾವಣ್ಯ ಶೇ. 93.96 ಅಂಕಗಳನ್ನು ಗಳಿಸಿ, ಶಾಲೆಗೆ ಮೊದಲ ಸ್ಥಾನ ಗಳಿಸಿ ದ್ದಾಳೆ. ಉಳಿದಂತೆ 17 ಮಕ್ಕಳು ಎ ಶ್ರೇಣಿಯಲ್ಲಿ 3 ಮಕ್ಕಳು ಬಿ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಶಾಲೆಯು ಸತತ ನಾಲ್ಕು ವರ್ಷಗಳಿಂದ ಶೇ. 100 ಫಲಿತಾಂಶ ಪಡೆದಿರುವುದಕ್ಕೆ ಆಡಳಿತ ಮಂಡಳಿ ಅಧ್ಯಕ್ಷೆ ನಾಗರತ್ನ ನರಸಪ್ಪ ಅಭಿನಂದಿಸಿದ್ದಾರೆ.

# ರಾಜನಹಳ್ಳಿ ವಾಲ್ಮೀಕಿ ಪೀಠದಲ್ಲಿ ನಾಡಿದ್ದು ರಾಜ್ಯ ಮಟ್ಟದ ಸಭೆ



**ಹರಪನಹಳ್ಳಿ ತಾಲ್ಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ**

ಹರಪನಹಳ್ಳಿ, ಸೆ.3- ಹರಿಹರ ತಾಲ್ಲೂಕಿನ ರಾಜನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ದಿನಾಂಕ 6ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಜಗದ್ಗುರು ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಸಾನಿಧ್ಯದಲ್ಲಿ ರಾಜ್ಯ ಮಟ್ಟದ ಸಭೆ ಕರೆಯಲಾಗಿದೆ.

ಸಭೆಯಲ್ಲಿ ಶೇ. 7.5 ಮೀಸಲಾತಿ ಹೆಚ್ಚಳ. ಪರಿಶಿಷ್ಟ ಪಂಗಡದವರಿಗೆ ಪ್ರತ್ಯೇಕ ಸಚಿವಾಲಯ, ರಾಜ್ಯದಲ್ಲಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಠ ಜಾತಿ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣ ಪತ್ರ ಪಡೆಯುವವರ ವಿರುದ್ಧ ಮತ್ತು ಸಹಕಾರ ನೀಡಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದು.

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣದ ಜೊತೆಗೆ ಶ್ರೀ ಮಹರ್ಷಿ ವಾಲ್ಮೀಕಿ ಮಂದಿರ ನಿರ್ಮಾಣ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲು ರಾಜ್ಯದಿಂದ ನಿಯೋಗ ಹೋಗುವುದು ಮತ್ತು ಶ್ರೀಮಠದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಮಂದಿರ ನಿರ್ಮಾಣ ಹಂತದಲ್ಲಿದ್ದು ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುವುದು ಸೇರಿದಂತೆ, ಸಭೆಯಲ್ಲಿ ಶ್ರೀಗಳ ಅಪ್ಪಣೆಯ ಮೇರೆಗೆ ಬರುವ ಇನ್ನಿತರೆ ವಿಷಯಗಳ ಬಗ್ಗೆ ಚರ್ಚಿಸಲಾಗುವುದು.

ಶ್ರೀ ಮಠಕ್ಕೆ ಸೇರಿದ ಸರ್ವೋದಯ ಶಿಕ್ಷಣ ಟ್ರಸ್ಟ್ (ಧಾರವಾಡ), ಇದರ ಅಂಗ ಸಂಸ್ಥೆಗಳಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಬಸವರಾಜ ಹೊರಟ್ಟಿ ಅಕ್ರಮಗಳನ್ನು ನ್ಯಾಯಾಂಗ ತನಿಖೆಗೆ ಆದೇಶಿಸುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸುವುದು.

ರಾಜ್ಯದಲ್ಲಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣ ಪತ್ರ ಪಡೆಯುವವರ ವಿರುದ್ಧ ಮತ್ತು ಸಹಕಾರ ನೀಡಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದು ಸೇರಿದಂತೆ, ಅನೇಕ ವಿಷಯಗಳನ್ನು ಚರ್ಚಿಸಲಾಗವುದು.

ಸಭೆಗೆ ತಾಲ್ಲೂಕಿನ ವಾಲ್ಮೀಕಿ ನಾಯಕ ಸಮಾಜದ ಪದಾಧಿಕಾರಿಗಳು, ಪರಿಶಿಷ್ಟ ಪಂಗಡದ ನೌಕರರ ಸಂಘದ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತಮ್ಮ ಸಲಹೆ-ಸೂಚನೆಗಳನ್ನು ನೀಡಿ ಸಭೆ ಯಶಸ್ವಿಗೊಳಿಸಬೇಕು ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ತಿಳಿಸಿದ್ದಾರೆ.

# ಒಂದೇ ರೈತ ಸಂಘ ರಚನೆಗೆ ತೀರ್ಮಾನ : ಕುಂದೂರು ಹನುಮಂತಪ್ಪ



**ಹೊನ್ನಾಳಿ**

ಹೊನ್ನಾಳಿ, ಸೆ.3- ಹಿರೇಕಲ್ಮಠದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳ ಮಾರ್ಗದರ್ಶನದಂತೆ ತಾಲ್ಲೂಕಿನ ಅನೇಕ ರೈತ ಬಣಗಳ ರೈತ ಮುಖಂಡರುಗಳು ಹಾಗೂ ಪದಾಧಿಕಾರಿಗಳು ಸೇರಿ ಒಂದೇ ರೈತ ಸಂಘ ರಚನೆಗೆ ಮುಂದಾಗಿರುವುದಾಗಿ ರೈತ ಮುಖಂಡ ಕುಂದೂರು ಹನುಮಂತಪ್ಪ ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಇತ್ತೀಚೆಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇತ್ತೀಚೆಗೆ ನಡೆದ ಹೊನ್ನಾಳಿ ಕೃಷಿ ಮೇಳದ ಪೂರ್ವಭಾವಿ ಸಭೆಯಲ್ಲಿ ಹಿರೇಕಲ್ಮಠದ ಶ್ರೀಗಳು ಎಲ್ಲಾ ರೈತ ಸಂಘಗಳು ಒಮ್ಮತದಿಂದ ಒಂದು ಸದೃಢ ರೈತ ಸಂಘ ರಚನೆಯಾಗಿ ಕೃಷಿಮೇಳದ ಯಶಸ್ಸಿಗೆ ಮುಂದಾಗಬೇಕೆಂದು ಕರೆ ನೀಡಿದ ಹಿನ್ನೆಲೆಯಲ್ಲಿ ಒಮ್ಮತದಿಂದ ಈ ತೀರ್ಮಾನಕ್ಕೆ ಬರಲಾಗಿದೆ ಎಂದರು.

ಅಂದು ಅಧ್ಯಕ್ಷರು ಸೇರಿದಂತೆ, ಕೆಲವೇ ಪದಾಧಿಕಾರಿಗಳ ರಚನೆಯಾಗಿದ್ದು, ಮುಂದಿನ ದಿನಗಳಲ್ಲಿ ಪೂರ್ಣ ಪ್ರಮಾಣದ ಸಮಿತಿ ರಚನೆಗೊಂಡು ಸ್ವಾಮೀಜಿಗಳ ಬಳಿ ತೆರಳುವುದಾಗಿ ಹೇಳಿದರು. ಹೊನ್ನಾಳಿ ತಾಲ್ಲೂಕು ನೂತನ ರೈತ ಸಂಘದ ಅಧ್ಯಕ್ಷರಾಗಿ ಅರಬಗಟ್ಟೆ ಕೆ.ಸಿ. ಬಸಪ್ಪ ಮಾಸ್ತರ್, ಗೌರವಾಧ್ಯಕ್ಷ ಹಿರೇಮಠದ ಬಸವರಾಜಪ್ಪ, ಕಾರ್ಯಾಧ್ಯಕ್ಷರಾಗಿ ಸಾಸ್ವೆಹಳ್ಳಿ ಬಸವರಾಜಪ್ಪ, ಸಲಹಾ ಸಮಿತಿ ಅಧ್ಯಕ್ಷ ಹಿರೇಗೋಣಿಗೆರೆ ಕುಬೇರಪ್ಪ ನೇಮಕಗೊಂಡರು.

ರೈತ ಮುಖಂಡರಾದ ಬಿದರಗಡ್ಡೆ ಡಿ.ಕೆ. ಭರಮಪ್ಪ, ಮಾಚೇನಳ್ಳಿ ಎಂ.ಪಿ. ಕರಿಬಸಪ್ಪಗೌಡ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಜಿ. ಮುರಿಗೆಪ್ಪ, ಅರಬಗಟ್ಟೆ ಬಸವನಗೌಡ, ಬಸವನಹಳ್ಳಿ ಆನಂದಪ್ಪ, ನಾರಾಯಣ ಸ್ವಾಮಿ, ಗೋಪಗೊಂಡನಹಳ್ಳಿ ಕೃಷ್ಣಾನಾಯ್ಕ, ಮಾದೇನಹಳ್ಳಿ ಶಿವಪ್ಪ, ನ್ಯಾಮತಿ ಮಲ್ಲಿಕಣ್ಣ, ಬೆಳಗುತ್ತಿ ಉಮೇಶಣ್ಣ ಉಪಸ್ಥಿತರಿದ್ದರು.

## ಐಎಎಸ್/ ಕೆಎಎಸ್ ಪರೀಕ್ಷೆ ತರಬೇತಿಗೆ ಅರ್ಜಿ


ದಾವಣಗೆರೆ, ಸೆ.3- ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿಯ ಐಎಎಸ್ ಮತ್ತು ಕೆಎಎಸ್ ಇತ್ಯಾದಿ ಪರೀಕ್ಷೆಗಳಿಗೆ ತರಬೇತಿ ನೀಡಲು ಜ್ಞಾನಪ್ರಕಾಶ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ (ಜೆಎಸಿಇ) ವತಿಯಿಂದ ಎಲ್ಲಾ ಜನಾಂಗದ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು.

ಅರ್ಜಿ ಸಲ್ಲಿಸಲು ಅಕ್ಟೋಬರ್ 5 ಕೊನೆಯ ದಿನವಾಗಿದ್ದು, ಕೆವಿವಿಎಸ್ ಸಂಸ್ಥೆಯಿಂದ ಅತಿ ಕಡಿಮೆ ಶುಲ್ಕದೊಂದಿಗೆ ಜೆಎಸಿಇ ಅಕಾಡೆಮಿಯ ಪಕ್ಕದ ಹಾಸ್ಟೆಲ್‌ನಲ್ಲಿ ಊಟ ಮತ್ತು ವಸತಿ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜೆಎಸಿಇ ಕಚೇರಿ, ಸಿದ್ಧಗಂಗಾ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ಜ್ಞಾನಪ್ರಕಾಶ ಮಂಟಪ 3ನೇ ಮಹಡಿ, ಸಿ.ಎ. ನಂ. 3/ಎ, 17ನೇ ಕ್ರಾಸ್, ಜ್ಞಾನಭಾರತಿ ಬಡಾವಣೆ, 2ನೇ ಹಂತ, ಮರಿಯಪ್ಪನ ಪಾಳ್ಯ, ನಾಗರಬಾವಿ ರಸ್ತೆ, ಜಗಳೂರು-560056 ಸಂಪರ್ಕಿಸುವುದು. ಫೋನ್: 080-23241071.

## ಗ್ರಾಮಾಂತರದಲ್ಲಿ ಇಂದು-ನಾಳೆ ವಿದ್ಯುತ್ ವ್ಯತ್ಯಯ

ಎಫ್-03 ಮಾಗಾನಹಳ್ಳಿ, ಎಫ್-04 ಓಬಜ್ಜಿಹಳ್ಳಿ ಮತ್ತು ಎಫ್-05 ವಾಟರ್ ಸಪ್ಲೈ ಮಾರ್ಗಗಳ ಜಂಗಲ್ ಕಟ್ಟಿಂಗ್ ಮಾಡುವುದರಿಂದ ಮಾಗಾನಹಳ್ಳಿ, ಓಬಜ್ಜಿಹಳ್ಳಿ, ಕಡಲೇಬಾಳು ಹಾಗೂ ಅರಸಾಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಇಂದು ಮತ್ತು ನಾಳೆ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಈ ಹಿನ್ನೆಲೆಯಲ್ಲಿ ಗ್ರಾಹಕರು ಸಹಕರಿಸಬೇಕೆಂದು ಬೆಸ್ಕಾಂನ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಜಿ.ಎಮ್. ನಾಯಕ ಕೋರಿದ್ದಾರೆ.


## ಪಿ.ಎಂ. ಜಗನ್ನಾಥಸ್ವಾಮಿ ಮೂಲಿಮಠ ನಿಧನ



ಹರಿಹರ ನಗರದ ತೆಗ್ಗಿನಕೇರಿ 2ನೇ ಕ್ರಾಸ್ ವಾಸಿಯಾದ **ಪಿ.ಎಂ. ಜಗನ್ನಾಥಸ್ವಾಮಿ ಮೂಲಿಮಠ** ಅವರು ದಿನಾಂಕ 03.09.2020ರ ಗುರುವಾರ ರಾತ್ರಿ 8.15 ಕ್ಕೆ ದೈವಾಧೀನರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.09.2020ರ ಶುಕ್ರವಾರ ಮಧ್ಯಾಹ್ನ 12.30 ಕ್ಕೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

## ಎಸ್.ಸಿದ್ದೇಶ್ ನಿಧನ



ದಾವಣಗೆರೆ ತಾಲ್ಲೂಕು ಪುಟಗನಾಳ್ ಗ್ರಾಮದ ವಾಸಿ, ದಿ.ಕೆ.ಎಂ. ಶಿವಪ್ಪ ಇವರ ಪುತ್ರ (ಸಿರಿಗೆರೆ ರೇವಮ್ಮ ಇವರ ಮೊಮ್ಮಗ) ಶ್ರೀ ರೇವಣ್ಣ ಸಿದ್ದೇಶ್ವರ ಸ್ಟೋರ್ಸ್ ಮಾಲೀಕರಾದ ಎಸ್.ಸಿದ್ದೇಶ್ (50) ಅವರು ದಿನಾಂಕ: 3.09.2020 ರಂದು ಗುರುವಾರ ಸಂಜೆ 5.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಸಹೋದರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.09.2020ರ ಗುರುವಾರ ರಾತ್ರಿ ನೆರವೇರಿಸಲಾಯಿತು.

# ಜಿ. ಪರಮೇಶ್ವರ್ ಯುವ ಸೈನ್ಯದ ಜಿಲ್ಲಾ ಘಟಕ ಉದ್ಘಾಟನೆ



ದಾವಣಗೆರೆ, ಸೆ.3- ಅಖಿಲ ಕರ್ನಾಟಕ ಡಾ. ಜಿ. ಪರಮೇಶ್ವರ್ ಯುವ ಸೈನ್ಯದ ಜಿಲ್ಲಾ ಘಟಕವನ್ನು ಇತ್ತೀಚಿಗೆ ನಗರದ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಉದ್ಘಾಟಿಸಿ, ಪದಾಧಿಕಾರಿಗಳ ಆಯ್ಕೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಸಂಘಟನೆ ರಾಜ್ಯಾಧ್ಯಕ್ಷ ರಂಗನಾಥ್ ಸೇರಿದಂತೆ ಸಂಘಟನೆಗೆ ಆಯ್ಕೆ ಮಾಡಲಾದ ಜಿಲ್ಲಾಧ್ಯಕ್ಷ ಎಂ. ಹಾಲೇಶ್ ಬಸವನಾಳ್, ಉಪಾಧ್ಯಕ್ಷರುಗಳಾದ ಹಾಲೇಶ್ ತ್ಯಾವಣಗಿ, ಪ್ರಕಾಶ್ ಮಂಡಲೂರು, ಹನುಮಂತಪ್ಪ ಐಗೂರು, ಪ್ರಧಾನ ಕಾರ್ಯದರ್ಶಿ ಗುರುರಾಜ್, ಖಜಾಂಚಿ ಹೆಚ್. ನವೀನ್‌ಕುಮಾರ್, ಸಹ ಕಾರ್ಯದರ್ಶಿ ಮಂಜುನಾಥ್, ಸಂಘಟನಾ ಕಾರ್ಯದರ್ಶಿ ಫಕ್ಕೀರಪ್ಪ ಬಾತಿ, ಜಿಲ್ಲಾ ಸಂಚಾಲಕ ನಾಗರಾಜ್ ಶಾಮನೂರು, ನಿರ್ದೇಶಕರುಗಳಾದ ಪರಶುರಾಮ್, ತಿಪ್ಪೇಶ್, ಕೊಟ್ರೇಶ್, ಮಾರುತಿ, ರಘು, ಸುರೇಶ್ ಜಾಧವ್, ಪ್ರಶಾಂತ್, ತಾಲ್ಲೂಕು ಅಧ್ಯಕ್ಷ ಹನುಮಂತಪ್ಪ ಕಕ್ಕರಗೊಳ್ಳ ಇದ್ದರು.

## ಕೈಲಾಸ ಶಿವಗಣಾರಾಧನೆ



ಜನನ 13.06.1942 ಮರಣ 31.08.2020

ದಾವಣಗೆರೆ ಸಿಟಿ ಮೌನೇಶ್ವರ ಬಡಾವಣೆ 4ನೇ ಕ್ರಾಸ್ ವಾಸಿ, **ಶ್ರೀಮತಿ ಎಂ.ಟಿ.ಗುರುಶಾಂತಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.**

ದಿನಾಂಕ 31.08.2020ನೇ ಸೋಮವಾರ ರಾತ್ರಿ 10.40 ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ರುದ್ರಪ್ಪ ಕರಿನಾಗ ಶೆಟ್ರು**

ಇವರು ಕೈಲಾಸ ವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 4.9.2020ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಮೌನೇಶ್ವರ ಬಡಾವಣೆಯ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ :

ಪತ್ನಿ : ಶ್ರೀಮತಿ ಎಂ.ಟಿ.ಗುರುಶಾಂತಮ್ಮ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ಕರಿನಾಗ ಶೆಟ್ರು ವಂಶಸ್ಥರು.
ಮೊ : 94484 80770

## ಎ.ಎಸ್. ಪದ್ಮಾವತಿ ನಿಧನ



ದಾವಣಗೆರೆ ಕೆ.ಬಿ.ಬಡಾವಣೆ ವಾಸಿ, ಅತ್ತಿಗೆರೆ ನಿವೃತ್ತ ಶಿಕ್ಷಕ ದಿ.ಎ.ಎನ್ ಶ್ರೀ ನಿವಾಸ ಮೂರ್ತಿ ಇವರ ಧರ್ಮಪತ್ನಿ **ಶ್ರೀಮತಿ ಎ.ಎಸ್. ಪದ್ಮಾವತಿ** (74) ಅವರು ದಿನಾಂಕ 3.09.2020ನೇ ಗುರುವಾರ ಮಧ್ಯಾಹ್ನ 3.20ಕ್ಕೆ ನಿಧನರಾದರು. ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 04.09.2020ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ. 94489 15666

## ಪಿಂಜಾರ ವಿದ್ಯಾರ್ಥಿಗಳಿಗೆ ಸಹಾಯಧನ

ದಾವಣಗೆರೆ, ಸೆ.3- ಕರ್ನಾಟಕ ರಾಜ್ಯ ನದಾಫ್/ ಪಿಂಜಾರ ರಾಜ್ಯ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿಯಲ್ಲಿ ಶೇ. 60 ಕ್ಕಿಂತ ಹೆಚ್ಚು ಅಂಕ ಪಡೆದು ಪಿಯುಸಿಯಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಓದುವ ಸಮಾಜದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮತ್ತು ಪುಸ್ತಕಗಳಿಗೆ ಸಹಾಯ ನೀಡಲಾಗುವುದು.(ಸರ್ಕಾರಿ/ ಅನುದಾನಿತ ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) ಅರ್ಜಿಯನ್ನು, ನಜೀರ್ ಪಾಷ, 64/19 ನೇ ವಾರ್ಡ್, ಅಮ್ಮ ಕಿಂಡರ್ ಗಾರ್ಟನ್, 5ನೇ ಕ್ರಾಸ್, ರಾಮಯ್ಯ ಕಾಲೋನಿ, ಬಳ್ಳಾರಿ ಜಿಲ್ಲೆ-583101. ಇಲ್ಲಿಗೆ ಕಳುಹಿಸಬೇಕು (ಮೊಬೈಲ್ : 8951867860, 9880565722) ಎಂದು ಜಿಲ್ಲಾಧ್ಯಕ್ಷ ಜೆ.ಹೆಚ್. ಉಕ್ಕಡಗಾತ್ರಿ ಹಾಗೂ ಕಾರ್ಯದರ್ಶಿ ಪಿ.ಸಿ. ನಯಾಜ್ ತಿಳಿಸಿದ್ದಾರೆ.

## ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಸೆ.3- 2019-20 ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ವಿವಿಧ ಕಾಲೇಜುಗಳಲ್ಲಿನ ಮೆಟ್ರಿಕ್ ನಂತರದ ವಿವಿಧ ಕೋರ್ಸ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವ (ಮಾರ್ಚ್-2020) ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಸೆ.30 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಇಲಾಖೆ ವೆಬ್‌ಸೈಟ್ www.tw.kar.nic.in ಸಂಪರ್ಕಿಸುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

## ಶತಾಯುಷಿ ಗೋಣೆಪ್ಪ ಹನುಮಮ್ಮ ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ, ದಿ.ಗೋಣೆಪ್ಪ ಸಿದ್ದಪ್ಪ ಇವರ ಧರ್ಮಪತ್ನಿ **ಶತಾಯುಷಿ ಗೋಣೆಪ್ಪ ಹನುಮಮ್ಮ**(102) ಅವರು ದಿನಾಂಕ 03.09.2020ನೇ ಗುರುವಾರ ರಾತ್ರಿ 8.20 ಕ್ಕೆ ನಿಧನರಾದರು. ಮೂವರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.09.2020ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಎಲೆಬೇತೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
83106 35957

## ಸಿ.ಕೆ.ಷಣ್ಮುಖ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ ವಾಸಿ ಇ.ಎಸ್.ಐ ಆಸ್ಪತ್ರೆಯ ನಿವೃತ್ತ ನೌಕರರಾದ **ಸಿ.ಕೆ.ಷಣ್ಮುಖ** (66) ಅವರು ದಿನಾಂಕ 03.09.2020ರ ಗುರುವಾರ ಬೆಳಿಗ್ಗೆ 6.20ಕ್ಕೆ ನಿಧನರಾಗಿದ್ದಾರೆ.

ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.09.2020ರ ಗುರುವಾರ ಸಂಜೆ ನೆರವೇರಿತು.

ಇಂತಿ ದುಃಖತಪ್ತ ಕುಟುಂಬ ವರ್ಗ
ಮೊ. : 94490 66015, 91640 26418

## ಹೊಸಕುಂದುವಾಡ ಗ್ರಾಮದ ಬಿ.ಎನ್. ನಾಗೇಂದ್ರಚಾರ್ ನಿಧನ



ದಾವಣಗೆರೆ ತಾಲ್ಲೂಕು ಹೊಸಕುಂದುವಾಡ ಗ್ರಾಮದ ವಾಸಿ **ಶ್ರೀ ಬಿ.ಎನ್. ನಾಗೇಂದ್ರಚಾರ್** ಅವರು ದಿನಾಂಕ 03.09.2020ರ ಗುರುವಾರ ರಾತ್ರಿ 9.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 75 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.09.2020ರ ಶುಕ್ರವಾರ ಮಧ್ಯಾಹ್ನ 1.30 ಕ್ಕೆ ಹೊಸ ಕುಂದುವಾಡ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಅನಸೂಯಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಮೊ. : 91138 96963, 91649 16588

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಸೆಪ್ಟೆಂಬರ್ 04, 2020


## ಕೊರೊನಾ ಸಾವಿನಲ್ಲಿ ರಾಜ್ಯ ಮುಂಚೂಣಿ

ನವದೆಹಲಿ, ಸೆ. 3- ಕೊರೊನಾ ಸಾವುಗಳಲ್ಲಿ ಮುಂ ಚೂಣಿ ರಾಜ್ಯಗಳ ಪೈಕಿ ಕರ್ನಾಟಕ ಸಹ ಒಂದಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ದೇಶದ ಒಟ್ಟು ಕೊರೊನಾ ಸಾವುಗಳ ಪೈಕಿ ಶೇ.70ರಷ್ಟು ಕರ್ನಾಟಕ ಸೇರಿದಂತೆ, ಐದು ರಾಜ್ಯಗಳಲ್ಲೇ ಸಂಭವಿಸುತ್ತಿವೆ ಎಂದು ಸಚಿವಾಲಯ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, ಮೊದಲ ಐದು ರಾಜ್ಯಗಳ ಪೈಕಿ ಕರ್ನಾಟಕ ಹಾಗೂ ದೆಹಲಿಗಳಲ್ಲಿ ಮಾತ್ರ ಕೊರೊನಾ ಸಾವುಗಳ ದರ ಏರಿಕೆಯಾಗುತ್ತಿದೆ ಎಂದು ಹೇಳಿದ್ದಾರೆ.

ಪ್ರತಿ ವಾರದ ವಿಶ್ಲೇಷಣೆಯನ್ನು ಗಮನಿಸಿದಾಗ ಪ್ರತಿದಿನ ಸಂಭವಿಸುವ ಸಾವುಗಳ ದರದಲ್ಲಿ ಕರ್ನಾಟಕ ಶೇ.9.6ರ ಏರಿಕೆ ಕಾಣುತ್ತಿದೆ ಎಂದವರು ತಿಳಿಸಿದ್ದಾರೆ. ಆರೋಗ್ಯ ಕಾರ್ಯಕರ್ತರಲ್ಲಿ ಕೊರೊನಾ ಸೋಂಕು ಕಂಡು (6ನೇ ಪುಟಕ್ಕೆ)

### ದೇಶಕ್ಕಿಂತ ರಾಜ್ಯದಲ್ಲೇ ಹೆಚ್ಚು : ಪಾಟೀಲ್



ಬೆಂಗಳೂರು, ಸೆ. 3 - ಕೊರೊನಾದಿಂದ ರಾಜ್ಯದಲ್ಲಿ ಮೃತಪಡುತ್ತಿರುವ ಪ್ರಮಾಣವು ದೇಶಕ್ಕಿಂತಲೂ ಹೆಚ್ಚಾಗಿದೆ ಎಂದು ಕಾಂಗ್ರೆಸ್ ಶಾಸಕ ಹೆಚ್.ಕೆ. ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಸಚಿವರಿಗೆ ಸರಣಿ ಟ್ವೀಟ್ ಮಾಡಿರುವ ಅವರು, ರಾಜ್ಯದಲ್ಲಿ ಕೊರೊನಾದಿಂದ ಸಾವಿನ ಪ್ರಮಾಣ ಹೆಚ್ಚಾಗುತ್ತಿದ್ದು, ಈ ಬಗ್ಗೆ ಎಚ್ಚರ ವಹಿಸಿ, ಜನರಿಗೆ ತಪ್ಪು ಮಾಹಿತಿ ನೀಡಬೇಡಿ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಸಾವಿನ ಪ್ರಮಾಣ ಹತ್ತು ಲಕ್ಷಕ್ಕೆ 83 ಇದೆ. ಇದು ದೇಶದಲ್ಲಿ ಇದರ ಪ್ರಮಾಣ 42 (4ನೇ ಪುಟಕ್ಕೆ)

## ಈ ವರ್ಷವೇ ಸರ್ಕಾರಿ ಶಾಲೆಗಳಲ್ಲಿ ಎಲ್.ಕೆ.ಜಿ.

### 276 ಪಬ್ಲಿಕ್ ಶಾಲೆಗಳಲ್ಲಿ ಪ್ರಾಥಮಿಕವಾಗಿ ಕ್ರಮ : ಸಚಿವ ಮಾಧುಸ್ವಾಮಿ

ಬೆಂಗಳೂರು, ಸೆ. 3 - ರಾಜ್ಯದ ಎಲ್ಲಾ ಪ್ರಾಥಮಿಕ ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಶಿಕ್ಷಣವನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಆರಂಭಿಸಲು ಗುರುವಾರ ನಡೆದ ಸಂಪುಟ ಸಭೆಯಲ್ಲಿ ಸಮ್ಮತಿಸಲಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಮಾಧುಸ್ವಾಮಿ, ಪ್ರಥಮ ಹಂತದಲ್ಲಿ ರಾಜ್ಯದ 276 ಪಬ್ಲಿಕ್ ಶಾಲೆಗಳಲ್ಲಿ ಈ ತರಗತಿಯನ್ನು ಆರಂಭಿಸಲಾಗುವುದು ಎಂದು ಹೇಳಿದ್ದಾರೆ.

ಇದಕ್ಕಾಗಿ ನರ್ಸರಿ ತರಬೇತಿ ಹೊಂದಿದ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಇವರಿಗೆ ಗೌರವ ಸಂಭಾವನೆಯನ್ನು 7500 ರೂ. ಮತ್ತು 5000 ರೂ. ಗಳನ್ನು ನಿಗದಿ ಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಎಲ್ಲಾ ಸರ್ಕಾರಿ ಶಾಲೆಗಳಲ್ಲು ಈ ತರಗತಿಗಳನ್ನು ಆರಂಭಿಸಲಾಗುವುದು. ಇದಕ್ಕೆ ಅಗತ್ಯವಿರುವ ಸಿಬ್ಬಂದಿ ನೇಮಕಾತಿಗಳ ಜೊತೆಗೆ ಮೂಲ ಸೌಕರ್ಯಗಳನ್ನು ಕಲ್ಪಿಸುವುದಾಗಿ ತಿಳಿಸಿದ್ದಾರೆ.

ಕೊರೊನಾ ಸಂದರ್ಭದಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳಿಗೆ ಅಡ್ಡಿಪಡಿಸಿ, ಸಾರ್ವಜನಿಕ ಆಸ್ತಿ ನಷ್ಟವುಂಟು ಮಾಡಿದವರಿಂದ ದುಪ್ಪಟ್ಟು ದಂಡ ವಸೂಲಿ ಮಾಡಲು ಸಭೆ ಅನುಮತಿ ನೀಡಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ. ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಯನ್ನು ಮತ್ತಷ್ಟು ವಿಸ್ತರಿಸಲು ಸಂಪುಟ ಸಮ್ಮತಿಸಿದೆ.

ಇದರಿಂದ ಪಾಲಿಕೆಯ ಸದಸ್ಯರ ಸಂಖ್ಯೆ 198 ರಿಂದ 225ಕ್ಕೆ ಹೆಚ್ಚಳವಾಗಲಿದೆ. ಈಗಿರುವ ನಾಲ್ಕು ವಲಯಗಳನ್ನು ಎಂಟು ವಲಯಗಳನ್ನಾಗಿ ವಿಂಗಡಿಸುವುದು, ಪ್ರತಿ 40 ರಿಂದ 45 ಸಾವಿರ ಜನಸಂಖ್ಯೆಗೆ ಒಂದು ವಾರ್ಡ್ ಎಂದು ನಿಗದಿಪಡಿಸಲು ಸರ್ಕಾರ ಮುಂದಾಗಿದೆ.

ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತಕ್ಕೆ ಮೂಲಸೌಕರ್ಯ ಕಲ್ಪಿಸಲು 120 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಇದಕ್ಕೆ ತಗಲುವ ವೆಚ್ಚವನ್ನು ಕರ್ನಾಟಕ ವಿದ್ಯುತ್ ನಿಗಮದ ವತಿಯಿಂದಲೇ ಯೋಜನೆ ಕೈಗೆತ್ತಿಕೊಳ್ಳಲು ಸಂಪುಟ ಅನುಮತಿ ನೀಡಿದೆ ಎಂದರು.

ಕೇಂದ್ರ ಪುರಸ್ಕೃತ ಯೋಜನೆಯಡಿ ಹಾವೇರಿ ಮತ್ತು ಯಾದಗಿರಿಯಲ್ಲಿ ಹೊಸ ವೈದ್ಯಕೀಯ ಕಾಲೇಜು ಕಟ್ಟಡ ನಿರ್ಮಾಣ ಮತ್ತು ಇತರೆ ಸೌಲಭ್ಯ ಕಲ್ಪಿಸಲು 600 ಕೋಟಿ ರೂ. ವೆಚ್ಚ ಮಾಡಲು ಸಂಪುಟ ಅನುಮತಿ ನೀಡಿದೆ. ಕೇಂದ್ರ ಶೇ. 80 ರಷ್ಟು ವೆಚ್ಚ ಭರಿಸಲಿದ್ದು, ಉಳಿದ ಹಣವನ್ನು ರಾಜ್ಯ ಭರಿಸಲಿದೆ ಎಂದು ಸಚಿವ ಮಾಧುಸ್ವಾಮಿ ತಿಳಿಸಿದ್ದಾರೆ.

ಬರುವ ಮಳೆಗಾಲದ ಅಧಿವೇಶನದಲ್ಲಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ವಿಧೇಯಕಕ್ಕೆ ಅನುಮೋದನೆ ಪಡೆಯಲು ವಿಧೇಯಕವನ್ನು ಮಂಡಿಸಲಾಗುವುದು. ಇದೇ ಸಂದರ್ಭದಲ್ಲಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕಕ್ಕೂ ಅನುಮತಿ ಪಡೆದುಕೊಳ್ಳಲು ಸಂಪುಟ ಸಮ್ಮತಿಸಿದೆ ಎಂದರು.

## ಎನ್.ಪಿ.ಎ. ಘೋಷಣೆಗೆ ಸುಪ್ರೀಂ ಕೋರ್ಟ್ ತಡೆ

### ಕೊರೊನಾ ಒತ್ತಡಕ್ಕೆ ಸಿಲುಕಿರುವ ಸಾಲಗಾರರಿಗೆ ನೆರವು

ನವದೆಹಲಿ, ಸೆ. 3 – ಕೊರೊನಾ ಹಿನ್ನೆಲೆಯಲ್ಲಿ ಒತ್ತಡಕ್ಕೆ ಸಿಲುಕಿರುವ ವಲಯಕ್ಕೆ ನೆರವಾಗಿರುವ ಸುಪ್ರೀಂ ಕೋರ್ಟ್, ಒತ್ತಡಕ್ಕೆ ಸಿಲುಕಿರುವ ಸಾಲಗಳನ್ನು ಮುಂದಿನ ಆದೇಶದವರೆಗೆ ಎನ್.ಪಿ.ಎ. ಎಂದು ಘೋಷಿಸಬಾರದು ಎಂದು ನಿರ್ಬಂಧಿಸಿದೆ. ಆಗಸ್ಟ್ 31ರವರೆಗೆ ಎನ್.ಪಿ.ಎ. ಆಗದ ಸಾಲಗಳಿಗೆ ಈ ಆದೇಶ ಅನ್ವಯವಾಗಲಿದೆ.

ಮುಂದೂಡಿಕೆಯಾಗಿರುವ ಸಾಲದ ಕಂತುಗಳ ಮೇಲೂ ಬಡ್ಡಿ ವಿಧಿಸುವುದನ್ನು ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರ ನೇತೃತ್ವದ ಪೀಠ ಈ ಬಗ್ಗೆ ಆದೇಶ ಹೊರಡಿಸಿದೆ.

ಬ್ಯಾಂಕುಗಳ ಒಕ್ಕೂಟದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರು, ಯಾವುದೇ ಖಾತೆಯನ್ನು ಕನಿಷ್ಠ ಎರಡು ತಿಂಗಳವರೆಗೆ ಎನ್.ಪಿ.ಎ. ಎಂದು ಘೋಷಿಸುವುದಿಲ್ಲ ಎಂದು ಹೇಳಿದರು. ಸಾಳ್ವೆ ಅವರ ಈ (5ನೇ ಪುಟಕ್ಕೆ)


## ಮಳೆ : ಭತ್ತದ ಗದ್ದೆಗಳು ಜಲಾವೃತ



ಮಲೇಬೆನ್ನೂರು, ಸೆ.3- ಬುಧವಾರ ಸಂಜೆ ಸುರಿದ ಮಳೆಯಿಂದಾಗಿ ಹಳ್ಳಗಳು ತುಂಬಿ ಹರಿದ ಪರಿಣಾಮ, ಭತ್ತ ನಾಟಿ ಮಾಡಿದ್ದ ಗದ್ದೆಗಳು ನೀರಿನಲ್ಲಿ ಜಲಾವೃತಗೊಂಡಿವೆ.

ಜಿಗಳಿ, ಕುಂಬಳೂರು, ಯಲವಟ್ಟಿ, ಸಂಕ್ಲೀಪುರ, ಮುಕ್ತೇನಹಳ್ಳಿ, ಕೆಂಗಲಹಳ್ಳಿ ಸೇರಿದಂತೆ ಮತ್ತಿತರೆ ಹಳ್ಳಿಗಳಲ್ಲಿ ನೂರಾರು ಎಕರೆ ಗದ್ದೆಯಲ್ಲಿ ನೀರು ಹರಿದು ಭತ್ತದ ನಾಟಿ ಹಾಳಾಗಿದೆ. ಇದರಿಂದಾಗಿ ರೈತರು ಕಣ್ಣೀರಿಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ನೀರಿಲ್ಲದೆ ಬತ್ತುವ ಹಂತದಲ್ಲಿದ್ದ ಮೆಕ್ಕೆಜೋಳಕ್ಕೆ ಈ ಮಳೆ ಜೀವಕಳೆ ತಂದಿದೆ. ಅನೇಕ ರೈತರು ಪಂಪ್‌ಸೆಟ್ ಹಾಗೂ ಟ್ಯಾಂಕರ್ ಮೂಲಕ ಜೋಳಕ್ಕೆ ನೀರು ಹಾಯಿಸುವ ತಯಾರಿಯಲ್ಲಿದ್ದರು. ಸಕಾಲಕ್ಕೆ ಸುರಿದ ಹುಬ್ಬಿ ಮಳೆ ಮೆಕ್ಕೆಜೋಳ ಬೆಳೆದ ರೈತರಿಗೆ ಹರ್ಷ ತಂದಿದೆ.




## ಮಳೆ, ಪ್ರವಾಹದಿಂದ 4,800 ಕೋ. ರೂ. ನಷ್ಟ

ಬೆಂಗಳೂರು, ಸೆ. 3 - ರಾಜ್ಯದಲ್ಲಿ ಮಳೆ ಮತ್ತು ಪ್ರವಾಹದಿಂದ 4800 ಕೋಟಿ ರೂ. ನಷ್ಟವುಂಟಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಕೋರಿಕೆ ಮೇರೆಗೆ ಕೇಂದ್ರ ಇದೇ 7 ರಂದು ಪ್ರವಾಹದಿಂದ ಆಗಿರುವ ನಷ್ಟದ ಅಧ್ಯಯನ ನಡೆಸಲು ತಂಡವನ್ನು ರಾಜ್ಯಕ್ಕೆ ಕಳುಹಿಸುತ್ತಿದೆ ಎಂದು ಹೇಳಿದ್ದಾರೆ.

ಹಿರಿಯ ಅಧಿಕಾರಿ. ಕೆ.ವಿ. ಪ್ರತಾಪ್ ಅವರ ನೇತೃತ್ವದಲ್ಲಿ ಆರು ಮಂದಿ ಅಧಿಕಾರಿಗಳು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಲಿದ್ದಾರೆ.



ಮಳೆ ಮತ್ತು ಪ್ರವಾಹದಿಂದ ಅತೀ ಹೆಚ್ಚು ಕೊಡಗಿನಲ್ಲಿ ಹಾನಿಯಾಗಿದೆ. ಈ ಜಿಲ್ಲೆಯಲ್ಲದೆ, ವಿಜಾಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಿಗೆ ಈ ತಂಡ ಭೇಟಿ ನೀಡಲಿದೆ ಎಂದರು.

ಈಗಾಗಲೇ 4 ಸಾವಿರ ಕೋಟಿ ರೂ. ಪರಿಹಾರ ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದೇವೆ. ಆದರೆ ಇದೀಗ ನಂತರದ ನಷ್ಟವನ್ನು ಕ್ರೋಢೀಕರಿಸಿ, 4800 ಕೋಟಿ ರೂ.ಗೆ ಮನವಿ ಸಲ್ಲಿಸುತ್ತಿದ್ದೇವೆ.

ಕೇಂದ್ರ ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿ, 395 ಕೋಟಿ ಹಣವನ್ನು ಬಿಡುಗಡೆ ಮಾಡಿದೆ. ಎನ್‌ಡಿಆರ್‌ಎಫ್‌ನ 9 ತಂಡ ಗಳನ್ನು ಕಳುಹಿಸಿದ್ದು, ಇವುಗಳನ್ನು ಪ್ರವಾಹ ಪೀಡಿತ ವಿವಿಧ ಜಿಲ್ಲೆಗಳಲ್ಲಿ ನಿಯೋ ಜನೆ ಮಾಡಲಾಗಿದೆ. ಇದಲ್ಲದೆ 4 ಹೆಲಿ ಕ್ಯಾಪ್ಟರ್‌ಗಳನ್ನು ರಾಜ್ಯಕ್ಕೆ ನೀಡಿದೆ ಎಂದರು.

ಕೇಂದ್ರ ತಂಡ ಅಧ್ಯಯನಕ್ಕೆ ತೆರಳುವ ದಕ್ಕೂ ಮುನ್ನ ಮುಖ್ಯಮಂತ್ರಿಗಳೊಟ್ಟಿಗೆ ಸಮಾಲೋಚನೆ ನಡೆಸಲಿದ್ದಾರೆ. ಅಧ್ಯಯನದ ನಂತರ ಸೆಪ್ಟೆಂಬರ್ 9 ರಂದು ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಿದ್ದಾರೆ.

ಈ ಸಂದರ್ಭದಲ್ಲಿ ಸಂಪೂರ್ಣ ಮಾಹಿತಿಯನ್ನು ಕೇಂದ್ರಕ್ಕೆ ಸಲ್ಲಿಸಲಾಗುವುದು ಎಂದು ಅಶೋಕ್ ತಿಳಿಸಿದರು.

## ಜಿಲ್ಲೆಯಲ್ಲಿ 222 ಪಾಸಿಟಿವ್, 3 ಸಾವು

ದಾವಣಗೆರೆ, ಸೆ. 3 - ಜಿಲ್ಲೆಯಲ್ಲಿ ಗುರುವಾರ 222 ಕೊರೊನಾ ಪಾಸಿಟಿವ್ ಪ್ರಕರಣಗಳು ದೃಢಪಟ್ಟಿವೆ. ಮೂವರು ಸಾವನ್ನಪ್ಪಿದ್ದು, 139 ಜನರು ಕೊರೊನಾ ಸೋಂಕಿನಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಇಲ್ಲಿಯವರೆಗೆ ಜಿಲ್ಲೆಯಲ್ಲಿ 10319 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 7623 ಜನರು ಸೋಂಕು ಮುಕ್ತರಾಗಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ 2497 ಸಕ್ರಿಯ ಪ್ರಕರಣಗಳಿವೆ. (6ನೇ ಪುಟಕ್ಕೆ)


### ರಾಜ್ಯದಲ್ಲಿ ಕೊರೊನಾ ಸಾವಿನ ಸಂಖ್ಯೆ 6 ಸಹಸ್ರ

ಬೆಂಗಳೂರು, ಸೆ. 3 – ರಾಜ್ಯದಲ್ಲಿ ಕೊರೊನಾದಿಂದ ಮೃತರ ಸಂಖ್ಯೆ 6 ಸಾವಿರದ ಗಡಿ ದಾಟಿದೆ. ರಾಜ್ಯದಲ್ಲಿ ಗುರುವಾರ ಒಂದೇ ದಿನ 8,865 ಸೋಂಕಿತರು ಕಂಡು ಬಂದಿದ್ದು, 104 ಜನ ಸಾವನ್ನಪ್ಪಿದ್ದಾರೆ. ರಾಜ್ಯದ ಒಟ್ಟು ಸೋಂಕಿತರ ಸಂಖ್ಯೆ 3.70 ಲಕ್ಷದ ಗಡಿ ದಾಟಿದೆ.

ಇದೇ ದಿನದಂದು 7,122 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ರಾಜ್ಯದಲ್ಲಿ ಈಗ 96,098 ಸಕ್ರಿಯ ಸೋಂಕಿತರಿದ್ದಾರೆ. ಇವರಲ್ಲಿ 735 ಜನರು ಐಸಿಯುನಲ್ಲಿದ್ದಾರೆ.

ಗುರುವಾರದವರೆಗೆ 6,054 ಜನರು ಸಾವನ್ನಪ್ಪಿದ್ದಾರೆ ಮತ್ತು 2.68 ಲಕ್ಷ ಜನರು ಗುಣವಾಗಿ ಬಿಡುಗಡೆಯಾಗಿದ್ದಾರೆ ಎಂದು ಆರೋಗ್ಯ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಡ್ರಗ್ ಮಾಫಿಯಾದಲ್ಲಿ ರಾಜಕಾರಣಿಗಳು, ಪೊಲೀಸ್ ಇಲಾಖೆ ಭಾಗಿ



ದಾವಣಗೆರೆ, ಸೆ. 3-ರಾಜ್ಯದಲ್ಲಿ ಡ್ರಗ್ ಮಾಫಿಯಾ ಇಂದು ನಿನ್ನೆಯದಲ್ಲ. ಪ್ರತಿ ಬಾರಿಯೂ ಮಾಫಿಯಾ ಮಟ್ಟ ಹಾಕುವುದಾಗಿ, ಬೇರು ಸಹಿತ ಕಿತ್ತು ಹಾಕುವುದಾಗಿ ಹೇಳುವ ಪೊಲೀಸರಿಗೆ ಇದುವರೆಗೂ ಸಾಧ್ಯವಾಗಿಲ್ಲ ಎಂದು ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಹೇಳಿದರು.

ಯುವಕ, ಯುವತಿಯರನ್ನು ದುರ್ಬಲ ಗೊಳಿಸುವ ವ್ಯವಸ್ಥಿತ ಷಡ್ಯಂತ್ರ ಡ್ರಗ್ ಮಾಫಿಯಾದಲ್ಲಿ ನಡೆಯುತ್ತಿದೆ. ರಾಜಕಾರಣಿಗಳು ಮತ್ತು ಪೊಲೀಸ್ ಇಲಾಖೆಯವರು ಮಾಫಿಯಾದಲ್ಲಿ ಭಾಗಿಯಾಗಿದ್ದಾರೆ.

ಮಾಫಿಯಾದ ಇಂಚಿಂಚೂ ಮಾಹಿತಿ ಪೊಲೀಸರಿಗೆ ತಿಳಿದಿದೆ. ಆದರೆ ರಾಜಕರಾಣಿಗಳ ಕೈ ಅವರನ್ನು ಹಿಡಿದಿಟ್ಟಿದೆ. ಕಾರಣ ಸಾವಿರಾರು ಕೋಟಿ ರೂ. ವ್ಯವಹಾರ ಡ್ರಗ್ ಮಾಫಿಯಾದಲ್ಲಿ ನಡೆಯುತ್ತಿದೆ ಎಂದರು.

ಕಳೆದ ಹತ್ತು ವರ್ಷಗಳಿಂದ ಬೆಳೆದಿರುವ ಮಾಫಿಯಾ ಬಗ್ಗೆ ಬೇಹುಗಾರಿಕೆಗೆ ತಿಳಿದಿಲ್ಲವೇ? ಅದರ ಬೇರು ಎಲ್ಲಿದೆ ಎಂದು ಗೊತ್ತಿಲ್ಲವೇ ಎಂದು ಮುತಾಲಿಕ್ ಪ್ರಶ್ನಿಸಿದರು.

2009ರಲ್ಲಿ ಮಂಗಳೂರು ಪಬ್ ಘಟನೆಯಾದಾಗಲೇ ಕ್ಲಬ್ಬು, ಪಬ್ಬುಗಳಲ್ಲಿ ಡ್ರಗ್ಸ್, ಸೆಕ್ಸ್ ಮಾಫಿಯಾ ನಡೆಯುತ್ತಿದೆ ಎಂದು ಆರೋಪಿಸಿದ್ದೆ. ಆಗ ಇದೇ ಬಿಜೆಪಿ ಸರ್ಕಾರ ಮುತಾಲಿಕ್ ಹಾಗೂ ಶ್ರೀರಾಮ ಸೇನೆಯನ್ನು ಟಾರ್ಗೆಟ್ ಮಾಡಿ 15 ದಿನ ಜೈಲಿಗೆ ಹಾಕಿದ್ದರು. ಆಗಲೇ ಈ ಬಗ್ಗೆ ಕ್ರಮ ಕೈಗೊಂಡಿದ್ದರೆ ಇಷ್ಟು ಬೆಳವಣಿಗೆ ಆಗುತ್ತಿರಲಿಲ್ಲ ಎಂದರು. ಸಿದ್ದರಾಮಯ್ಯನ ಪುತ್ರ ರಾಕೇಶ್ ಸಿದ್ದರಾಮಯ್ಯ ಸಾವನ್ನಪ್ಪಿದ್ದೂ ಡ್ರಗ್ಸ್ ನಿಂದಾಗಿಯೇ. ಆಗಲೇ ಸಿದ್ದರಾಮಯ್ಯನವರಿಗೆ ಜನತೆ ಬಗ್ಗೆ ಕಳಕಳಿ ಇದ್ದರೆ ಮಾಫಿಯಾವನ್ನು ಬೇರು ಸಹಿತ ಕಿತ್ತು ಹಾಕಬಹುದಿತ್ತು ಎಂದು ಮುತಾಲಿಕ್ ಹೇಳಿದರು.

**ಶಿವಾಜಿ-ರಾಯಣ್ಣನ ನಡುವೆ ಹುಳಿ ಹಿಂಡುವುದು ಬೇಡ:** ಛತ್ರಪತಿ ಶಿವಾಜಿ, ಸಂಗೊಳ್ಳಿ ರಾಯಣ್ಣ ಅವರ ಜಾತಿಗಾಗಿ ಹೋರಾಡದೆ, ಸಮಾಜಕ್ಕಾಗಿ, ದೇಶಕ್ಕಾಗಿ, ಜಾತಿ ಮೀರಿ ಹೋರಾಡಿದವರು. ಅವರಿಗೆ ಜಾತಿ, ಭಾಷೆ, ಗಡಿಯ ಪಟ್ಟ ಕಟ್ಟುವುದು ಬೇಡ ಎಂದು ಮುತಾಲಿಕ್ (5ನೇ ಪುಟಕ್ಕೆ)

### 24 ಗಂಟೆಯೊಳಗೆ ಸನಾವುಲ್ಲಾ ಬಂಧಿಸದಿದ್ದರೆ ಉಗ್ರ ಹೋರಾಟ

ದಾವಣಗೆರೆ, ಸೆ. 3- ಸಾಮಾಜಿಕ ಜಾಲ ತಾಣದಲ್ಲಿ ಪವರ್ ಆಫ್ ಪಾಕಿಸ್ತಾನ್ ಪೋಸ್ಟ್ ಶೇರ್ ಮಾಡಿದ್ದ ದೇಶ ದ್ರೋಹಿ ನಗರದ ಪೊಲೀಸ್ ಕಾನ್‌ಸ್ಟೇಬರ್ ಸನಾವುಲ್ಲಾನನ್ನು 24 ತಾಸಿನೊಳಗೆ ಬಂಧಿಸಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಪ್ರಮೋದ್ ಮುತಾಲಿಕ್ ಹೇಳಿದ್ದಾರೆ.

ಪೊಲೀಸರು ತಮ್ಮಿಂದ ಸನಾವುಲ್ಲಾನನ್ನು ಬಂಧಿಸಲು ಸಾಧ್ಯವಾಗುತ್ತಿಲ್ಲ ಎಂದರೆ ನಾವೇ ದೇಶ ಭಕ್ತರನ್ನು (5ನೇ ಪುಟಕ್ಕೆ)

### ಇಂದ್ರಜಿತ್ ಮಾದರಿಯಲ್ಲಿ ಹೆಚ್ಡಿಕೆಯನ್ನೂ ವಿಚಾರಣೆ ಮಾಡಲಿ

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರ ಸ್ವಾಮಿಯವರು ತಮ್ಮ ಸರ್ಕಾರ ಬೀಳಿಸಲು ಬಿಜೆಪಿ ಸರ್ಕಾರ ಡ್ರಗ್ಸ್ ಹಣವನ್ನು ಬಳಸಿಕೊಂಡಿದೆ ಎಂದು ಆರೋಪಿಸಿದ್ದಾರೆ.

ಇದೊಂದು ಗಂಭೀರ ಆರೋಪವಾಗಿದ್ದು, ಇಂದ್ರಜಿತ್ ಲಂಕೇಶ್ ಅವರನ್ನು ಕರೆದು ವಿಚಾರಣೆ ನಡೆಸಿದಂತೆ ಕುಮಾರ ಸ್ವಾಮಿ ಅವರನ್ನೂ ಸಹ ಕರೆದು ವಿಚಾರಿಸಬೇಕು ಎಂದು ಮುತಾಲಿಕ್ ಆಗ್ರಹಿಸಿದರು.

### ಇಎಸ್‌ಡಿಎಂಗೆ ವಿಶೇಷ ವಿನಾಯಿತಿ

ಬೆಂಗಳೂರು, ಸೆ. 3 – ಎಲೆಕ್ಟ್ರಾನಿಕ್ ಉಪಕರಣಗಳ ವಿನ್ಯಾಸ ಹಾಗೂ ಉತ್ಪಾದನೆ (ಇ.ಎಸ್.ಡಿ.ಎಂ.) ವಲಯಕ್ಕೆ ವಿಶೇಷ ವಿನಾಯಿತಿಗಳನ್ನು ನೀಡುವ ಯೋಜನೆಗೆ ರಾಜ್ಯ ಸಂಪುಟ ಒಪ್ಪಿಗೆ ನೀಡಿದೆ. ಇದರಿಂದಾಗಿ 5 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಹೂಡಿಕೆ ಬರಲಿದೆ ಎಂದು ರಾಜ್ಯ ಸರ್ಕಾರ ಅಂದಾಜಿಸಿದೆ.

ಇ.ಎಸ್.ಡಿ.ಎಂ. ವಲಯಕ್ಕೆ ಬಂಡವಾಳ ಹೂಡಿಕೆ ಮಾಡುವಾಗ ಜಮೀನಿನ ಮೇಲೆ ಶೇ.25ರ ಸಬ್ಸಿಡಿ ಹಾಗೂ ಯಂತ್ರಗಳ ಮೇಲೆ ಶೇ.20ರ ಸಬ್ಸಿಡಿ, ಸ್ಟಾಂಪ್ ಡ್ಯೂಟಿಯಲ್ಲಿ ಶೇ.100ರ (4ನೇ ಪುಟಕ್ಕೆ)

## ಅತಿ ಮಳೆಯಿಂದ ಈರುಳ್ಳಿ ಬೆಳೆ ರೋಗ : ರೈತರಲ್ಲಿ ಆತಂಕ

### ಜಗಳೂರು ತಾಲ್ಲೂಕು : ತೋಟಗಾರಿಕೆ ಇಲಾಖೆ ಅಧಿಕಾರಿಗಳಿಂದ ಪರಿಶೀಲನೆ ಪರಿಶೀಲನೆ

ಜಗಳೂರು, ಸೆ. 3- ತಾಲ್ಲೂಕಿನಲ್ಲಿ ಕಳೆದ 15 ದಿನಗಳಿಂದ ಉತ್ತಮ ಮಳೆಯಾಗಿದ್ದು, ಮೋಡ ಮುಸುಕಿದ ವಾತಾವರಣ ಇದೆ. ಇದರಿಂದಾಗಿ ಈರುಳ್ಳಿ ಬೆಳೆಗೆ ರೋಗ ಕಾಣಿಸಿಕೊಂಡಿದ್ದು, ರೈತರು ಆತಂಕಗೊಂಡಿದ್ದಾರೆ.

ತಾಲ್ಲೂಕಿನಾದ್ಯಂತ 1300 ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ರೈತರು ಈರುಳ್ಳಿ ಬೆಳೆ ಬೆಳೆದಿದ್ದಾರೆ. ಫಸಲು ಉತ್ತಮವಾಗಿದ್ದರೂ ರೋಗ ಕಾಣಿಸಿಕೊಂಡಿದ್ದು, ರೈತರು ಸಹಜವಾಗಿ ಆತಂಕಗೊಂಡಿದ್ದಾರೆ.

ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ವೆಂಕಟೇಶಮೂರ್ತಿ ಮತ್ತು ದಾವಣಗೆರೆ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನಿ ಎಂ.ಜಿ. ಬಸವನಗೌಡ ಅವರುಗಳು ಇಂದು ತಾಲ್ಲೂಕಿನ ತೋರಣಗಟ್ಟೆ, ಜಮ್ಮಾಪುರ, ಗೌರಮ್ಮನಹಳ್ಳಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಭೇಟಿ ನೀಡಿ, ಈರುಳ್ಳಿ ತಾಕುಗಳಿಗೆ ರೋಗ ಮತ್ತು ಕೀಟ ಸಮೀಕ್ಷೆ ನಡೆಸಿದರು.



ಅತಿಯಾದ ಮಳೆ ಮತ್ತು ಮೋಡ ಕವಿದ ವಾತಾವರಣದಿಂದಾಗಿ ಈರುಳ್ಳಿ ಬೆಳೆಗೆ ಎಲೆ ಮಚ್ಚೆರೋಗ ಹಾಗೂ ಲಘು ಪೋಷಕಾಂಶದ ಕೊರತೆಯುಂಟಾಗಿ ಎಲೆ ತಿರುಗುಣಿ ರೋಗದ ಲಕ್ಷಣಗಳು ಕಂಡು ಬಂದಿವೆ ಎಂದು ವಿಜ್ಞಾನಿ ಎಂ.ಜಿ. ಬಸವನಗೌಡ ತಿಳಿಸಿದರು.


ತಾಲ್ಲೂಕಿನಲ್ಲಿ ಈರುಳ್ಳಿ ಬೆಳೆ 90 ದಿವಸದ ಹಂತದಲ್ಲಿದ್ದು, ಬಹಳಷ್ಟು ಈರುಳ್ಳಿ ತಾಕುಗಳಲ್ಲಿ ನೇರಳೆ ಎಲೆ ಮಚ್ಚೆ ರೋಗದ ಲಕ್ಷಣಗಳು ಕಂಡು ಬಂದಿವೆ. ಕೆಲವು ಕಡೆ ಬೆಳವಣಿಗೆ ಹಂತ ಮುಗಿದಿರುವ ಕಡೆ ರೈತರು ಈಗಾಗಲೇ ಗಡ್ಡೆಗಳನ್ನು ಕಿತ್ತು ಮಾರಾಟಕ್ಕೆ ಅನುವಾಗುತ್ತಿದ್ದಾರೆ.

ಇನ್ನು ಕೆಲವು ಪ್ರದೇಶಗಳಲ್ಲಿ ಬೆಳೆ ಬೆಳವಣಿಗೆಯ ಹಂತದಲ್ಲಿದ್ದು, ಅಂತಹ ತಾಕುಗಳಲ್ಲಿ ನೇರಳೆ ಎಲೆ ಮಚ್ಚೆ ರೋಗದ ಲಕ್ಷಣಗಳಿದ್ದಲ್ಲಿ ರೈತರು, ಹೆಕ್ಸಾಕೋನ್ ಓಜೋಲ್ 1 ಮಿ.ಲೀ. ಅಥವಾ ಪ್ರೋವಿ ಕೋನೋಜೋಲ್ 1 ಮೀ ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿ, ಜೊತೆಗೆ ಲಘು ಪೋಷಕಾಂಶ ಮಿಶ್ರಣ 5 ಗ್ರಾಂ ಮತ್ತು ನೀರಿನಲ್ಲಿ ಕರಗುವ ಪೊಟ್ಯಾಷ್ 5 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿದರೆ ಗಡ್ಡೆ ಉತ್ತಮ ಗುಣಮಟ್ಟದ್ದಾಗಿರುತ್ತದೆ ಎಂದು ತಿಳಿಸಿದರು.

ರೈತರು ರೋಗ ಮತ್ತು ಕೀಟಬಾಧೆ ಬಂದಂತಹ ಸಂದರ್ಭದಲ್ಲಿ ಇಲಾಖೆಗೆ ಭೇಟಿ ನೀಡಿ, ವೈಜ್ಞಾನಿಕ ಮಾಹಿತಿ ಪಡೆದು, ತಜ್ಞರ ಶಿಫಾರಸ್ಸಿನಂತೆ ಸಿಂಪರಣಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ವೆಂಕಟೇಶಮೂರ್ತಿ ರೈತರಲ್ಲಿ ಮನವಿ ಮಾಡಿದ್ದಾರೆ.

ಸಮೀಕ್ಷೆಯ ಸಂದರ್ಭದಲ್ಲಿ ಸಹಾಯಕ ತೋಟಗಾರಿಕಾ ಅಧಿಕಾರಿಗಳಾದ ಅನಂತ್‌ಕುಮಾರ್, ಜಿ.ಹೆಚ್. ಪ್ರಸನ್ನಕುಮಾರ್ ಮತ್ತು ಶಿವಣ್ಣ, ರೈತರಾದ ಗಿರೀಶ್, ಮಹೇಶ್, ಚಂದ್ರಪ್ಪ, ಶಿವಕುಮಾರ್, ಅಜ್ಜಯ್ಯ, ಈಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದರು.

## 23 ಶಿಕ್ಷಕರಿಗೆ ಉತ್ತಮ ಜಿಲ್ಲಾ ಪ್ರಶಸ್ತಿ



ದಾವಣಗೆರೆ,ಸೆ.3-ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನಾಚರಣೆ ಮತ್ತು ಶಿಕ್ಷಕರ ದಿನಾಚರಣೆ ಅಂಗವಾಗಿ ಪ್ರತಿ ವರ್ಷ ಶಿಕ್ಷಕರಿಗೆ ಕೊಡಮಾಡುವ 'ಜಿಲ್ಲಾ ಉತ್ತಮ ಶಿಕ್ಷಕ' ಪ್ರಶಸ್ತಿಯನ್ನು 2020-21ನೇ ಸಾಲಿಗೆ ಜಿಲ್ಲೆಯ 23 ಶಿಕ್ಷಕರಿಗೆ ನೀಡಲಾಗಿದೆ ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸಿ.ಆರ್. ಪರಮೇಶ್ವರಪ್ಪ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ವತಿಯಿಂದ ನೀಡಲ್ಪಡುವ ಈ ಪ್ರಶಸ್ತಿಗೆ ಜಿಲ್ಲೆಯ ಪ್ರಾಥಮಿಕ ಮತ್ತು ಹಿರಿಯ ಶಾಲಾ ವಿಭಾಗದಿಂದ 16 ಹಾಗೂ ಪ್ರೌಢಶಾಲಾ ವಿಭಾಗದಿಂದ 7 ಶಿಕ್ಷಕರು ಭಾಜನರಾಗಿದ್ದಾರೆ ಎಂದು ಪರಮೇಶ್ವರಪ್ಪ ಅವರು ಪತ್ರಿಕಾ ಹೇಳಿಕೆಯಲ್ಲಿ ಪುರಸ್ಕೃತರ ವಿವರವನ್ನು ನೀಡಿದ್ದಾರೆ.

ಭಾಜನರಾಗಿರುವ ಎಲ್ಲಾ ಪುರಸ್ಕೃತರನ್ನು ನಾಡಿದ್ದು ದಿನಾಂಕ 5ರ ಶನಿವಾರ ಬೆಳಿಗ್ಗೆ 10.30ಕ್ಕೆ ನಗರದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಏರ್ಪಾಡಾಗಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಅವರು ವಿವರಿಸಿದ್ದಾರೆ.

ಪುರಸ್ಕೃತರ ವಿವರ ಹೀಗಿದೆ ; **ಕಿರಿಯ ಪ್ರಾಥಮಿಕ ಶಾಲಾ ವಿಭಾಗ :** (4ನೇ ಪುಟಕ್ಕೆ)

## ಒಂಟಿಯಾಗಿ ಕಾರು, ಸೈಕಲ್ ಮೇಲೆ ಹೋಗುವವರಿಗೆ ಮಾಸ್ಕ್ ವಿಧಿಸಿಲ್ಲ : ಕೇಂದ್ರ

ನವದೆಹಲಿ, ಸೆ. 3 – ಯಾರಾದರೂ ಒಂಟಿಯಾಗಿ ಕಾರು ಚಲಾಯಿಸುತ್ತಿದ್ದರೆ ಇಲ್ಲವೇ ಸೈಕಲ್ ಮೇಲೆ ಹೋಗುತ್ತಿದ್ದರೆ ಮಾಸ್ಕ್ ಧರಿಸಬೇಕು ಎಂಬ ಮಾರ್ಗಸೂಚಿ ಹೊರಡಿಸಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆದರೆ, ಯಾರಾದರೂ ಮೈದಾನದಲ್ಲಿ ಕಸರತ್ತು ಮಾಡುತ್ತಿದ್ದರೆ, ಸೈಕಲ್ ಇಲ್ಲವೇ ಜಾಗಿಂಗ್ ಮಾಡುತ್ತಿದ್ದರೆ ಮಾಸ್ಕ್ ಧರಿಸಬೇಕು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಎಂದು ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ. (4ನೇ ಪುಟಕ್ಕೆ)

# ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸಾ ಕ್ರಮದ ನೂತನ ತಂತ್ರಜ್ಞಾನ ಬಳಕೆ

ಭರವಸೆಯ ಆಸ್ಪತ್ರೆ ಎಂದು ಪ್ರಸಿದ್ಧಿ ಪಡೆದ ಮಣಿಪಾಲದ ಕಸ್ತೂರ ಬಾ ಆಸ್ಪತ್ರೆ ನೂತನ ತಾಂತ್ರಿಕತೆ ಅಳವಡಿಸಿ ತನ್ನ ಭರವಸೆಯನ್ನು ಹೆಚ್ಚು ಮಾಡಿಕೊಂಡಿದೆ. ಮಣಿಪಾಲ್ ಹೆಲ್ತ್‌ಮ್ಯಾಪ್ ಡಯಾಗ್ನೋಸ್ಟಿಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಅತ್ಯಾಧುನಿಕ ಪಾಸಿಟ್ರಾನ್ ಎಮಿಷನ್ ಟೊಮೊಗ್ರಫಿ ಸೌಲಭ್ಯವನ್ನು ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಲ್ಲಿ 22 ಆಗಸ್ಟ್ 2020, ಶನಿವಾರದಿಂದ ಆರಂಭಿಸಲಾಯಿತು.


**ನ್ಯೂಕ್ಲಿಯರ್ ಮೆಡಿಸಿನ್ ಅಂದರೆ ಏನು ?**

ನ್ಯೂಕ್ಲಿಯರ್ ಮೆಡಿಸಿನ್, ವೈದ್ಯಕೀಯ ಕ್ಷೇತ್ರದ ವಿಶೇಷ ಶಾಖೆಯಾಗಿದ್ದು, ಇದು ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಸೂಕ್ತವಾದ ವಿಕಿರಣಶೀಲ ಅಣುಗಳನ್ನು ಉಪಯೋಗಿಸಿ, ರೋಗದ ನಿಖರ ತಪಾಸಣೆ ಹಾಗೂ ಚಿಕಿತ್ಸೆ ಒದಗಿಸುತ್ತದೆ. ರೋಗ ನಿರ್ಣಯಕ್ಕಾಗಿ ಸೂಕ್ತವಾದ ವಿಕಿರಣಶೀಲ ಅಣುಗಳು ಹೊರಸೂಸುವ ಕಿರಣಗಳನ್ನು ನಿರ್ದಿಷ್ಟ ಇಮೇಜಿಂಗ್ ಉಪಕರಣದಿಂದ ಸೆರೆಹಿಡಿಯಲಾಗುತ್ತದೆ.

**ನ್ಯೂಕ್ಲಿಯರ್ ಮೆಡಿಸಿನ್‌ನಲ್ಲಿ ಲಭ್ಯವಿರುವ ವಿವಿಧ ರೀತಿಯ ಇಮೇಜಿಂಗ್ ಉಪಕರಣಗಳು:** ಗಾಮಾ ಕ್ಯಾಮೆರಾ, ಸ್ಪೆಕ್ಟ್/ಸಿಟಿ, ಪೆಟ್‌ಸಿಟಿ ಸ್ಪೆಕ್ಟ್-ಎಂಆರ್, ಪೆಟ್-ಎಂಆರ್. ಈಗ ಸ್ಪೆಕ್ಟ್-ಸಿಟಿ ಮತ್ತು ಪೆಟ್-ಸಿಟಿಗಳಂತಹ ಎರಡು ಸುಧಾರಿತ ಇಮೇಜಿಂಗ್ ಸಾಧನಗಳನ್ನು ರೋಗನಿರ್ಣಯದ ಉದ್ದೇಶಕ್ಕಾಗಿ ಬಳಸಲಾಗುತ್ತದೆ. ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ್ ಈಗ ಈ ಹೊಸ ಯಂತ್ರದೊಂದಿಗೆ ಅತ್ಯಾಧುನಿಕ ಸ್ಪೆಕ್ಟ್/ಸಿಟಿ ಮತ್ತು ಪೆಟ್/ಸಿಟಿ ಎರಡನ್ನೂ ಹೊಂದಿದೆ.

**ಪೆಟ್ -ಸಿಟಿ ಎಂದರೇನು?**

ಪಾಸಿಟ್ರಾನ್ ಎಮಿಷನ್ ಟೊಮೊಗ್ರಫಿ ಮತ್ತು ಕಂಪ್ಯೂಟರೀಕೃತ ಟೊಮೊಗ್ರಫಿ (ಪೆಟ್ ಸಿಟಿ) ಒಂದು ಆಣ್ವಿಕ ಮತ್ತು ಕ್ರಿಯಾತ್ಮಕ ಇಮೇಜಿಂಗ್ ವಿಧಾನವಾಗಿದೆ ಪೆಟ್ ಭಾಗವು ರೋಗದ ಕ್ರಿಯಾತ್ಮಕ ಅಂಶವನ್ನು, ರೋಗಪೀಡಿತ ಜೀವಕೋಶದ ಯಾವುದೇ ಅಸಹಜ ಕ್ರಿಯೆ, ರೋಗ ಲಕ್ಷಣ ಮತ್ತು ಮಾನವ ದೇಹದೊಳಗಿನ ಅನೇಕ ಕಾರ್ಯ ಚಟುವಟಿಕೆಗಳನ್ನು ಪತ್ತೆ ಮಾಡುತ್ತದೆ. ಸಿಟಿ ಭಾಗವು ರೋಗಪೀಡಿತ ಭಾಗದ ಅಂಗರಚನಾ ಗುಣಲಕ್ಷಣಗಳನ್ನು ನೀಡುತ್ತದೆ. ಒಟ್ಟಾಗಿ ಇದು ಪ್ರಬಲವಾದ ಇಮೇಜಿಂಗ್ (ಚಿತ್ರಣ) ಸಾಧನವಾಗಿ ಆಂಕೊಲಾಜಿ, ನರವಿಜ್ಞಾನ, ಹೃದ್ರೋಗ ಅಲ್ಲದೇ ಹಲವು ಅಜ್ಞಾತ ಮೂಲದ ಕಾಯಿಲೆಗಳಲ್ಲಿನ ರೋಗದ ವ್ಯಾಪ್ತಿ ಮತ್ತು ಚಿಕಿತ್ಸೆಯ ಪ್ರತಿಕ್ರಿಯೆಯನ್ನು



ನಿರ್ಣಯಿಸಲು ವೈದ್ಯರಿಗೆ ಸಹಾಯಕವಾಗುವುದು. ಪೆಟ್-ಸಿಟಿಯ ಉಪಯೋಗಗಳು ಆಂಕೋಲಜಿಯಲ್ಲಿ-ಕ್ಯಾನ್ಸರ್ ಕಾಯಿಲೆಯ ಹಂತ, ಪ್ರತಿಕ್ರಿಯೆ ಮೌಲ್ಯಮಾಪನ ಮತ್ತೆ ಮರುಕಳಿಸುವಿಕೆಯ ಸಾಧ್ಯತೆಯ ಪತ್ತೆಗಾಗಿ ಬಳಸಲಾಗುತ್ತದೆ. ನರವಿಜ್ಞಾನದಲ್ಲಿ – ಬುದ್ಧಿಮಾಂದ್ಯತೆ, ಅಲ್ಜೈಮರ್ ಪಾರ್ಕಿನ್ಸನ್ ನಂತಹ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಲು ಸಹಾಯ ಮಾಡುತ್ತದೆ. ಹೃದ್ರೋಗದಲ್ಲಿ-ಹೃದಯಾಘಾತದ ನಂತರ ಹೃದಯದ ಸ್ನಾಯುವಿನ ಕಾರ್ಯಸಾಧ್ಯತೆಯ ಮೌಲ್ಯಮಾಪನ, ಪರಿಧಮನಿಯ ಕಾಯಿಲೆಯಲ್ಲಿ ಅಪಾಯದ ಶ್ರೇಣೀಕರಣ (ಹೃದಯದ ರಕ್ತ ಕೊರತೆಯ ಆಕ್ರಮಣಶೀಲ ಮತ್ತು ಆಕ್ರಮಣಶೀಲವಲ್ಲದ ನಿರ್ವಹಣೆಯ ನಿರ್ಧಾರ ತೆಗೆದುಕೊಳ್ಳುವಲ್ಲಿ ಸಹಾಯಗಳು), ಹೃದಯ ಸಾರ್ಕೊಯಿಡೋಸಿಸ್ ಮತ್ತು ಸೋಂಕಿತ ಎಂಡೋಕಾರ್ಡಿಟಿಸ್‌ಗಾಗಿ ಬಳಸಲಾಗುತ್ತದೆ.

ಪಾಸಿಟ್ರಾನ್ ಎಮಿಸನ್‌ನ ಟೊಮೊಗ್ರಫಿ ಮತ್ತು ಕಂಪ್ಯೂಟರೀಕೃತ ಟೊಮೊಗ್ರಫಿಯನ್ನು ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ ಅಧ್ಯಕ್ಷರಾದ ಡಾ.ರಂಜನ್ ಆರ್. ಪೈ ಅವರು ಆಗಸ್ಟ್ 22 ರಂದು ಉದ್ಘಾಟಿಸಿದರು. ಮಣಿಪಾಲ ಉನ್ನತ ಶಿಕ್ಷಣ ಅಕಾಡೆಮಿ (ಮಾಹೆ)ಯ ಸಹ ಕುಲಾಧಿಪತಿಗಳಾದ ಡಾ.ಎಚ್.ಎಸ್. ಬಲ್ಲಾಳ್ ಅಧ್ಯಕ್ಷತೆ, ಉಪಕುಲಪತಿಗಳಾದ ಲೆ. ಜ. ಡಾ. ವೆಂಕಟೇಶ್ ಗೌರವ ಅತಿಥಿಗಳಾಗಿ, ಕುಲಸಚಿವರಾದ ಡಾ. ನಾರಾಯಣ ಸಭಾಹಿತ್, ಕೆಎಂಸಿ ಡೀನ್ ಡಾ. ಶರತ್ ಕೆ. ರಾವ್, ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ



ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ ಮತ್ತು ವೈದ್ಯಕೀಯ ಅಧೀಕ್ಷಕರಾದ ಡಾ. ಅವಿನಾಶ್ ಶೆಟ್ಟಿ, ಹೆಲ್ತ್‌ಮ್ಯಾಪ್ ಡಯಾಗ್ನೋಸ್ಟಿಕ್ಸ್ ಪ್ರೈವೇಟ್ ಲಿಮಿಟೆಡ್‌ನ ಪ್ರಾದೇಶಿಕ ಮುಖ್ಯಸ್ಥ ಡಾ. ಸಂದೀಪ್ ಬಲ್ಲಾಳ್ ಉಪಸ್ಥಿತರಿದ್ದರು.

**- ಅ.ನಾ.ವಿಜಯೇಂದ್ರ ರಾವ್**

ಮಾಹಿತಿ: **ಡಾ.ಅವಿನಾಶ್ ಶೆಟ್ಟಿ**
ಮುಖ್ಯ ಸಂಯೋಜಕ, ಮಣಿಪಾಲ್ ಆರೋಗ್ಯ ಕಾರ್ಡ್, ವೈದ್ಯಕೀಯ ಅಧೀಕ್ಷಕರು, ಶಿವಮೊಗ್ಗ., 9448790127

# ಡ್ರಗ್ಸ್ ದಂಧೆ: ದೇಶದ್ರೋಹ ಪ್ರಕರಣ ದಾಖಲಿಸಲು ಎಬಿವಿಪಿ ಆಗ್ರಹ



ದಾವಣಗೆರೆ, ಸೆ.3- ಡ್ರಗ್ಸ್ ದಂಧೆಯಲ್ಲಿ ತೊಡಗಿರುವವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕೆಂದು ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿ ತಹಶೀಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸ್ಯಾಂಡಲ್‌ವುಡ್‌ನೊಂದಿಗೆ ನಂಟಿರುವ ಬೃಹತ್ ಡ್ರಗ್ಸ್ ಜಾಲವನ್ನು ಎನ್‌ಸಿಬಿ ಅಧಿಕಾರಿಗಳು ಭೇದಿಸಿರುವ ಬಗ್ಗೆ ಮತ್ತು ಡ್ರಗ್ಸ್ ಜಾಲದ ಹಿಂದೆ ಸಮಾಜದಲ್ಲಿ ಇರುವಂಥ ಪ್ರತಿಷ್ಠಿತ ಪ್ರಭಾವಿ ಶ್ರೀಮಂತ ಕುಟುಂಬಗಳ ವ್ಯಕ್ತಿಗಳು, ಸಿನಿಮಾ ನಟ-ನಟಿಯರು, ರಾಜಕಾರಣಿಗಳ ಮಕ್ಕಳು ಇರುವ ಮಾಹಿತಿಗಳು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದೆ. ಸಮಾಜಕ್ಕೆ ಮಾದರಿ ಆಗಬೇಕಾದವರೆಲ್ಲ ಇಂತಹ ಚಟಗಳಿಗೆ ಅಂಟಿಕೊಂಡಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಇತ್ತೀಚಿಗೆ ಪೊಲೀಸರ ತನಿಖೆಯಲ್ಲಿ ಬೆಚ್ಚಿ ಬೀಳಿಸುವ ಹಲವು ಮಾಹಿತಿಗಳು ಹೊರಬಿದ್ದ ವಿಷಯ ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳು, ಯುವಕರು ಮಾದಕ ವ್ಯಸನ ಜಾಲದ ಗ್ರಾಹಕರಾಗಿದ್ದಾರೆ ಎಂಬ ಆಘಾತಕಾರಿ ಅಂಶಗಳು ವಿಷಾದನೀಯ. ಬೆಂಗಳೂರಿನ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಇಲಾಖೆ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಬೇಕಾಗಿದೆ ಮತ್ತು ಈ ಜಾಲದಲ್ಲಿ ಪ್ರಭಾವಿಗಳ ಹಸ್ತಕ್ಷೇಪ ಇರುವುದರಿಂದ ಯಾವುದೇ ಒತ್ತಡಕ್ಕೆ ಮಣಿಯದೆ ಗೃಹ ಇಲಾಖೆ ಪೊಲೀಸ್ ಇಲಾಖೆಗೆ ಸಂಪೂರ್ಣ ಸ್ವಾತಂತ್ರ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ರಾಜ್ಯ ಕಾರ್ಯ ಸಮಿತಿ ಸದಸ್ಯರಾದ ಭವ್ಯಶ್ರೀ, ನಗರ ಕಾರ್ಯದರ್ಶಿ ಇಟಗಿ ಆಕಾಶ್, ಕಾರ್ಯಕರ್ತರಾದ ಗಗನ್, ಅಮಿತ್, ಕಾರ್ತಿಕ್, ಸೃಜನ್ ಸೇರಿದಂತೆ ಇತರರು ಇದ್ದರು.

## ಸುದೀಪ್ ಹುಟ್ಟು ಹಬ್ಬ : ವೃದ್ಧಾಶ್ರಮಕ್ಕೆ ನೆರವು



ಚನ್ನಗಿರಿ, ಸೆ.3- ನಟ ಕಿಚ್ಚ ಸುದೀಪ್ ಹುಟ್ಟು ಹಬ್ಬದ ಅಂಗವಾಗಿ ದಾಗಿನಕಟ್ಟೆ ಗ್ರಾಮದ ಅಭಿನಯ ಚಕ್ರವರ್ತಿ ಸುದೀಪ್ ಅಭಿಮಾನಿ ಬಳಗ ಹಾಗೂ ಸೇನಾ ಸಮಿತಿಯವರು ಬಸವಾಪಟ್ಟಣದಲ್ಲಿರುವ ಶ್ರೀ ಸಿದ್ಧಾರೂಢ ವೃದ್ಧಾಶ್ರಮಕ್ಕೆ ಇಂಡಾಲಿಯಂ ಪಾತ್ರೆಗಳು, ಅಡುಗೆ ಬಡಿಸುವ ಪರಿಕರಗಳನ್ನು ಮತ್ತು ಹಣ್ಣುಗಳನ್ನು ವಿತರಿಸಿದರು.

## ರಾಜಕಾರಣಿಗಳು, ಪೊಲೀಸ್ ಇಲಾಖೆ ಭಾಗಿ

(3ನೇ ಪುಟದಿಂದ) ಹೇಳಿದರು.


ಬೆಳಗಾವಿಯಲ್ಲಿ ಶಿವಾಜಿ ಹಾಗೂ ರಾಯಣ್ಣ ಇಬ್ಬರ ಪ್ರತಿಮೆಯನ್ನೂ ನಿರ್ಮಿಸಿ ಸಮಾನತೆ ಸಾರುವ ಕೆಲಸ ಮಾಡಲಾಗಿದೆ. ಅಲ್ಲಿನ ಶಾಂತಿ, ಸೌಹಾರ್ದತೆಗೆ ಹುಳಿ ಹಿಂಡುವ ಕೆಲಸ ಯಾರೂ ಮಾಡಬಾರದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿನೋದ್ ರಾಜ್ ಡಿ.ಬಿ., ಶ್ರೀಧರ್, ಕರಾಟೆ ರಮೇಶ್, ಸಾಗರ್, ಮಾರ್ಕಂಡೇಯ, ರಾಜು ಮತ್ತಿತರರು ಉಪಸ್ಥಿತರಿದ್ದರು.

### ಸನಾವುಲ್ಲಾ ಬಂಧಿಸದಿದ್ದರೆ ಉಗ್ರ ಹೋರಾಟ

(1ನೇ ಪುಟದಿಂದ) ಬೀದಿಗಿಳಿಸಿ ಅವನನ್ನು ತಂದೊಪ್ಪಿಸುತ್ತೇವೆ ಎಂದ ಅವರು, ಆತನನ್ನು ಕೂಡಲೇ ಬಂಧಿಸಿ ಜೈಲಿಗೆ ಕಳುಹಿಸಬೇಕು ಎಂದು ಆಗ್ರಹಿಸಿದರು.

## ಸಂಸದರಿಂದ ಹಿಂದೂ ಮಹಾ ಗಣಪತಿ ದರ್ಶನ



ದಾವಣಗೆರೆ,ಸೆ.3- ನಗರದ ಬಾಲಕರ ಸರ್ಕಾರಿ ಪೌಢಶಾಲಾ ಮೈದಾನದಲ್ಲಿ ಹಿಂದೂ ಮಹಾ ಗಣಪತಿ ವತಿಯಿಂದ ಪ್ರತಿಷ್ಠಾಪಿಸಿರುವ ಗಣಪತಿಯ ದರ್ಶನವನ್ನು ಸಂಸದ ಜಿ.ಎಂ.ಸಿದ್ದೇಶ್ವರ ಅವರು ನಿನ್ನೆ ಪಡೆದರು.

ಈ ಸಂದರ್ಭದಲ್ಲಿ ಹಿಂದೂ ಮಹಾ ಗಣಪತಿ ಸಮಿತಿಯ ಅಧ್ಯಕ್ಷ ಜೊಳ್ಳಿ ಗುರು, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮಾಜಿ ಜಿಲ್ಲಾಧ್ಯಕ್ಷ ಯಶವಂತ್ ರಾವ್ ಜಾಧವ್, ಮುಖಂಡರಾದ ಜಗದೀಶ್, ಶ್ರೀನಿವಾಸ್ ದಾಸಕರಿಯಪ್ಪ, ಗೋಪಾಲ್ ರಾವ್ ಮಾನೆ, ರಾಘವೇಂದ್ರ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಡಿ.ಕೆ. ಕುಮಾರ್ ಮತ್ತು ಗಂಗಾಧರ್ ಉಪಸ್ಥಿತರಿದ್ದರು.

# ಶಿಕ್ಷಕರಿಗೆ ಉತ್ತಮ ಜಿಲ್ಲಾ ಪ್ರಶಸ್ತಿ

**(3ನೇ ಪುಟದಿಂದ)** ಚನ್ನಗಿರಿ ತಾಲ್ಲೂಕಿನ ಉಪ್ಪಾರಹಟ್ಟಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಬಿ.ಭಾಗ್ಯ, ದಾವಣಗೆರೆ ದಕ್ಷಿಣ ವಲಯದ ಜಂಪೇನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಹೆಚ್.ರೇವಣಸಿದ್ದಪ್ಪ, ದಾವಣಗೆರೆ ಉತ್ತರ ವಲಯ ಅರಸಾಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪದವೀಧರ ಮುಖ್ಯ ಶಿಕ್ಷಕ ಮೆಣಸಿನಕಾಯಿ ಮಹಾರುದ್ರಪ್ಪ, ಹರಿಹರ ತಾಲ್ಲೂಕಿನ ಬನ್ನಿಕೋಡಿನ ಕರ್ನಾಟಕ ಪಬ್ಲಿಕ್ ಶಾಲೆಯ ವಿಜ್ಞಾನ ಸಹ ಶಿಕ್ಷಕಿ ಶ್ರೀಮತಿ ಬಿ.ಸಿ. ಮೀನಾಕ್ಷಿ, ಹೊನ್ನಾಳಿ/ನ್ಯಾಮತಿ ತಾಲ್ಲೂಕುಗಳ ಸೋಮನಮಲ್ಲಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಸುರೇಶ್ ಜೆ. ಹೆಚ್.ಗೆಜ್ಜರಿ, ಸವಳಂಗ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಕೆ.ಪ್ರಭು, ಕೆಂಗಟ್ಟೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಜಿ.ಅನ್ನಪೂರ್ಣ, ಜಗಳೂರು ತಾಲ್ಲೂಕಿನ ಬಂಗಾರಕ್ಕನಗುಡ್ಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ (ನಲಿ-ಕಲಿ) ನಾಗರಾಜ್.

**ಹಿರಿಯ ಪ್ರಾಥಮಿಕ ಶಾಲಾ ವಿಭಾಗ :**

ಚನ್ನಗಿರಿ ತಾಲ್ಲೂಕು ಕಬ್ಬಳದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಹೆಚ್.ಎಂ.ಮಂಗಳ, ಹಿರೇಕೋಗಲೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಟಿ. ಪರಂಜ್ಯೋತಿ, ದಾವಣಗೆರೆ ದಕ್ಷಿಣ ವಲಯದ ಹೊಸಬೆಳವನೂರಿನ ಕುವೆಂಪು ಶತಮಾನೋತ್ಸವ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಎಂ. ಗದಿಗೆಪ್ಪ, ದಾವಣಗೆರೆ ಉತ್ತರ ವಲಯದ ಬಿ.ಕಲಪನಹಳ್ಳಿಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಡ್ತಿ ಮುಖ್ಯ ಶಿಕ್ಷಕ ಕೆ.ಸಿ.ಮಲ್ಲೇಶಪ್ಪ, ಹರಿಹರ ತಾಲ್ಲೂಕಿನ ಚಿಕ್ಕಬಿದರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಕೆ.ಆರ್.ಸತ್ಯನಾರಾಯಣ, ಹೊನ್ನಾಳಿ/ನ್ಯಾಮತಿ ತಾಲ್ಲೂಕುಗಳ ಕೋಣನತಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಎಸ್.ಷಹಜಾನ್, ಒಡೆಯರ ಹತ್ತೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಎಂ.ಆರ್. ಸಿದ್ದೇಶ್ವರ, ಜಗಳೂರು ತಾಲ್ಲೂಕಿನ ಮರೇನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಡ್ತಿ ಮುಖ್ಯ ಶಿಕ್ಷಕ ಟಿ.ಅಂಜನಪ್ಪ.

**ಪ್ರೌಢ ಶಾಲಾ ವಿಭಾಗ :**

ಹರಿಹರ ತಾಲ್ಲೂಕು ಬೂದಿಹಾಳ್‌ನ ಶ್ರೀ ಪಿ ಮತ್ತು ಬಿ ಬಸವನಗೌಡ ಪ್ರೌಢಶಾಲೆಯ ವೃತ್ತಿ ಶಿಕ್ಷಕ ಬಿ.ಎಸ್.ಪದ್ದಪ್ಪ, ದಾವಣಗೆರೆ ದಕ್ಷಿಣ ವಲಯದ ರಾಜನಹಳ್ಳಿ ಸೀತಮ್ಮ ಬಾಲಕಿಯರ ಪ.ಪೂ. ಕಾಲೇಜಿನ (ಪ್ರೌಢ ಶಾಲಾ ವಿಭಾಗ) ಸಹ ಶಿಕ್ಷಕ ಎಲ್.ಗಂಗಾಧರ್, ದಾವಣಗೆರೆ ಉತ್ತರ ವಲಯ ಕಕ್ಕರಗೊಳ್ಳದ ಸರ್ಕಾರಿ ಪದವಿ ಪೂರ್ವ ಕಾಲೇಜಿನ (ಪ್ರೌಢಶಾಲಾ ವಿಭಾಗ) ಸಹ ಶಿಕ್ಷಕಿ ಶ್ರೀಮತಿ ಎನ್.ಪ್ರೇಮಾ, ಚನ್ನಗಿರಿ ತಾಲ್ಲೂಕು ಕಂಚುಗಾರನಹಳ್ಳಿಯ ಸರ್ಕಾರಿ ಪ್ರೌಢಶಾಲೆ ಚಿತ್ರಕಲಾ ಶಿಕ್ಷಕ ಅಶೋಕ್, ಹೊನ್ನಾಳಿ/ನ್ಯಾಮತಿ ತಾಲ್ಲೂಕುಗಳ ಟಿ.ಗೋಪಗೊಂಡನಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಈರಪ್ಪ ಬಬಲೇಶ್ವರ, ಚಟ್ನಿಹಳ್ಳಿಯ ಸ.ಪ್ರೌ.ಶಾಲೆಯ ಸಹ ಶಿಕ್ಷಕಿ ಬೇಡ ದಾಕ್ಷಾಯಿಣಿ ಎನ್., ಜಗಳೂರು ತಾಲ್ಲೂಕಿನ ಹೊಸಕೆರೆಯ ಸ.ಪ.ಪೂ. ಕಾಲೇಜಿನ (ಪ್ರೌಢಶಾಲೆ) ದೈಹಿಕ ಶಿಕ್ಷಣ ಗ್ರೇ-1 ಬಿ.ಎಸ್. ಶಿವಕುಮಾರ್.

## ಡಿಸೆಂಬರ್‌ನೊಳಗೆ ಮಾಯಕೊಂಡ ತಾಲ್ಲೂಕು ಕೇಂದ್ರ : ಎಂ.ಎಸ್.ಕೆ. ಶಾಸ್ತ್ರಿ ವಿಶ್ವಾಸ

ದಾವಣಗೆರೆ, ಸೆ.3- ಕಳೆದ 30 ವರ್ಷಗಳಿಂದಲೂ ಜಿಲ್ಲೆಯನ್ನು ಆಳಿದ ಶಾಸಕರುಗಳ ಇಚ್ಛಾಶಕ್ತಿ ಕೊರತೆಯಿಂದ ನನೆಗುದಿಗೆ ಬಿದ್ದಿದ್ದ ಮಾಯಕೊಂಡ, ಡಿಸೆಂಬರ್ ತಿಂಗಳಿನಲ್ಲಿ ತಾಲ್ಲೂಕು ಕೇಂದ್ರವಾಗಿ ಘೋಷಣೆಯಾಗಲಿದೆ ಎಂದು ಮಾಯಕೊಂಡ ತಾಲ್ಲೂಕು ಕೇಂದ್ರ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ತಿಳಿಸಿದ್ದಾರೆ. ಕೊರೊನಾ ಕಾಟದಿಂದಾಗಿ ಸರ್ಕಾರ ಸೂಚನೆ ತಡೆ ಹಿಡಿದಿದ್ದು, ಇತ್ತೀಚೆಗೆ ತಾನೇ ಆದೇಶವನ್ನು ತೆರವುಗೊಳಿಸಿದ್ದು, ಇದೀಗ ಸಿದ್ಧತೆ ನಡೆಯುತ್ತಿದೆ. ಮುಖ್ಯಮಂತ್ರಿಗಳು ತಮ್ಮ ಭಾಷಣದ ವೇಳೆ ನುಡಿದ ಮಾತಿಗೆ ಮನ್ನಣೆ ದೊರಕುವ ದಿನಗಳು ಬರಲಿವೆ ಎಂದು ಶಾಸ್ತ್ರಿ ಹೇಳಿದ್ದಾರೆ.

## ಇಎಸ್‌ಡಿಎಂಗೆ ವಿಶೇಷ ವಿನಾಯಿತಿ

**(3ನೇ ಪುಟದಿಂದ)** ಮರುಪಾವತಿ ಸೇರಿದಂತೆ ಹಲವು ವಿನಾಯಿತಿಗಳನ್ನು ನೀಡಲಾಗಿದೆ.ವಿದ್ಯುತ್ ಶುಲ್ಕಕ್ಕೂ ಸಹ ವಿನಾಯಿತಿ ನೀಡಲಾಗಿದೆ. ಈ ವಲಯಕ್ಕೆ ವಿನಾಯಿತಿ ನೀಡುವುದರಿಂದ ಐದು ವರ್ಷದಲ್ಲಿ 43 ಸಾವಿರ ಹುದ್ದೆಗಳು ಸೃಷ್ಟಿಯಾಗಲಿವೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

## ಕಾರು, ಸೈಕಲ್ : ಮಾಸ್ಕ್ ವಿಧಿಸಿಲ್ಲ

**(3ನೇ ಪುಟದಿಂದ)** ಕಾರಿನಲ್ಲಿ ಒಬ್ಬರೇ ಇದ್ದಾಗಲೂ ಮಾಸ್ಕ್ ಧರಿಸಿಲ್ಲ ಎಂದು ದಂಡ ವಿಧಿಸಲಾಗುತ್ತಿದೆ ಎಂಬ ಸಾಕಷ್ಟು ದೂರುಗಳು ಬಂದಿದ್ದವು. ಈ ಬಗ್ಗೆ ಸ್ಪಷ್ಟನೆ ನೀಡಿರುವ ಭೂಷಣ್, ಕಾರಿನಲ್ಲಿ ಒಬ್ಬರೇ ಇದ್ದಾಗ ಇಲ್ಲವೇ ಒಂಟಿಯಾಗಿ ಸೈಕಲ್ ಮೇಲೆ ಹೋಗುತ್ತಿರುವಾಗ ಮಾಸ್ಕ್ ಧರಿಸಬೇಕು ಎಂಬ ಮಾರ್ಗಸೂಚಿ ಪ್ರಕಟಿಸಿಲ್ಲ ಎಂದಿದ್ದಾರೆ.

## ರಾಜ್ಯದಲ್ಲೇ ಹೆಚ್ಚು

**(1ನೇ ಪುಟದಿಂದ)** ಆಗಿದೆ. ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಿ. ಬೆಂಗಳೂರಿನಲ್ಲಿ ಜನವರಿಯಿಂದ ಜುಲೈ ಅವಧಿಯಲ್ಲಿ ಸಾವಿನ ಪ್ರಮಾಣ ಶೇ. 32 ರಷ್ಟು ಹೆಚ್ಚಾಗಿದೆ. ಜನರಿಗೆ ಸುಳ್ಳು ಮಾಹಿತಿ ನೀಡಿ, ಸಮರ್ಥನೆ ಮಾಡಿಕೊಳ್ಳುವ ಬದಲಾಗಿ, ಆಡಳಿತ ಯಂತ್ರವನ್ನು ಚುರುಕುಗೊಳಿಸಿ ಎಂದಿದ್ದಾರೆ.


**ಕರ್ನಾಟಕ ಗೃಹ ಮಂಡಳಿ (KHB)**
50x80 ಉತ್ತರ, 30x50 ಪೂರ್ವ, 50x80 ಪೂರ್ವ, ಡಬಲ್ ರೋಡ್ ಗೆ 50x80 South, 40x60 North, 40x60, 40x60 ಜೋಡಿ ಸೈಟು, 40x60 ಪೂರ್ವ, 30x40 ಉತ್ತರ, 30X50 ದಕ್ಷಿಣ, 40x60 ಪಶ್ಚಿಮ ಇನ್ನೂ ಅನೇಕ ಸೈಟು ಮಾರಾಟಕ್ಕಿವೆ.
ಬೂಸ್ನೂರ್ ಕಿರಣ್ (ಏಜೆಂಟ್)
97315-63409, 98440-63409

**ಮನೆ, ಸೈಟುಗಳು ಮಾರಾಟಕ್ಕೆ**
ಸಿದ್ದವೀರಪ್ಪ 40x50 ಸೈಟು, ಆಂಜನೇಯ 38x48 ಉತ್ತರ, ನೂತನ ಹಿಂಭಾಗ 30x50 ಉತ್ತರ, ಸರಸ್ವತಿ ಲೇಔಟ್ 30x40 ಉತ್ತರ, ಎಸ್.ಎಸ್. 'ಬಿ' ಬ್ಲಾಕ್ 30x50 ಉತ್ತರ, ಎಂ.ಸಿ.ಸಿ. 'ಬಿ' 44x60, 40x60, 28x60. ಸೈಟು, ಮನೆ ಬೇಕೇ ? ನಮ್ಮಲ್ಲಿ ವಿಚಾರಿಸಿ.
ಬೂಸ್ನೂರ್ ಕಿರಣ್ : 97315-63409

**ಹೊಸ ಹೊಸ ಮನೆಗಳು ಮಾರಾಟಕ್ಕಿವೆ**
30x55 East 40 ಅಡಿ ರೋಡಿಗಿದೆ, 30x40 East, ಕೆಳಗಡೆ 2 ಬೆಡ್‌ರೂಂ, ಮೇಲುಗಡೆ 2 ಬೆಡ್‌ರೂಂ ಮನೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್.
99166 12110
93410 14130

**ಬಾಡಿಗೆಗೆ ಇದೆ**
ಬಾರ್ ಅಂಡ್ ರೆಸ್ಟೋರೆಂಟ್ ಬಾಡಿಗೆಗೆ ಇದೆ.
ಸಂಪರ್ಕಿಸಿ:
94483 38709

**ಮನೆ, ಸೈಟ್ ಮಾರಾಟಕ್ಕೆ**
ಶಕ್ತಿ ನಗರ 30x45 ಉತ್ತರ, 30x40 ಪೂರ್ವ ಜಯನಗರ 3 ಅಂತಸ್ತಿನ ಮನೆ ಹಾಗೂ 20x30 ಮನೆಗಳು ಮಾರಾಟಕ್ಕೆ ಮತ್ತು 30x50 ಸರಸ್ವತಿ ನಗರ, 25x50, 50x50 ಸೈಟುಗಳು ಮಾರಾಟಕ್ಕಿವೆ.
ಏಜೆಂಟ್ : ಶಾಂತಪ್ಪ ಪೂಜಾರಿ
99647 29123

**ಮನೆ ಲೀಸ್‌ಗಿದೆ**
2 ಬೆಡ್ ರೂಂ (ಅಟ್ಯಾಚ್ಡ್), ಬೋರ್‌ವೆಲ್/ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಸುಸಜ್ಜಿತ ಉತ್ತರ ದಿಕ್ಕಿನ 1ನೇ ಮಹಡಿ ಮನೆ #29, 3ನೇ ಮೇನ್, 3ನೇ ಕ್ರಾಸ್, ವಿಜಯನಗರ ಬಡಾವಣೆ, ಹೊಸ ಆರ್.ಟಿ.ಓ. ಆಫೀಸ್ ಹತ್ತಿರ, ದಾವಣಗೆರೆ ಇಲ್ಲಿ ಲೀಸ್‌ಗಿದೆ.
ಸಂಪರ್ಕಿಸಿ: 9902855272
6361357595

**ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆ ಎರಡನೇ ಹಂತದಲ್ಲಿ (ಫಸ್ಟ್ ಫ್ಲೋರ್) ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
ಫೋ: 9916725141
9686744588

**ಮನೆ ಬಾಡಿಗೆಗೆ ಇದೆ**
ನಂ. 859/6, 1ನೇ ಮಹಡಿ, 1ನೇ ಸ್ಟೇಜ್, ಶಿವಕುಮಾರ ಸ್ವಾಮಿ ಬಡಾವಣೆ, ದಾವಣಗೆರೆ, 3 ಬೆಡ್ ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಬೋರ್/ಮುನ್ಸಿಪಲ್ ನೀರಿನ ಸೌಕರ್ಯವಿದೆ. ಸಂಪರ್ಕಿಸಿ :
94802 82894
88840 40911

**ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ, ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x50 East, 40 ಅಡಿ ರೋಡಿಗಿದೆ. 30x50 west, 30x36 west, 30x30 west
ಐನಳ್ಳಿ ಚನ್ನಬಸಪ್ಪ, ಏಜೆಂಟ್.
99166 12110
93410 14130

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್ ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಗಣೇಶ ಮೆಡಿಕಲ್ಸ್
ಪ್ರವಾಸಿ ಮಂದಿರ ರಸ್ತೆ, ಆರ್.ಹೆಚ್. ಛತ್ರದ ಎದುರು, ದಾವಣಗೆರೆ.

**FOR LEASE**
Fully Furnished 2 BHK flat in S.S.Layout, Ring road circle, Davnagere.
Contact
91645-46459

**House For Rent**
#5628/D-23 2nd Floor, 2BHK, 4th Main, 6th croos (left), Near Indoor Stadium, S.S layout 'B' Block.
House name: SHIVA RATNA.
Room for Rent : 14x16 attached Bath room, P.J Extenstion.
94489 29509

**House For Rent**
East Facing, 2BHK, Ground Floor, S.S. Layout 'B' Block 4th Main, 7th cross.
90084 18081

**ಬೇಕಾಗಿದ್ದಾರೆ**
ಆಟೋ ಡ್ರೈವರ್ - ಕಂ - ಸೇಲ್ಸ್ ಮ್ಯಾನ್.
ಸಂಪರ್ಕಿಸಿ:
ಪರಿಮಳ ಕಾಫಿ ಕಂಪನಿ
ಮಂಡಿಪೇಟೆ, ಎಸ್.ಬಿ.ಐ. ಮುಖ್ಯ ಶಾಖೆ ಎದುರು, ದಾವಣಗೆರೆ.
Mob : 94482-72734

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ. 'ಬಿ' ಬ್ಲಾಕ್ 5ನೇ ಮೇನ್, 5ನೇ ಕ್ರಾಸ್ ಸಿಲ್ವರ್ ಸ್ಕೈ ಮಾರ್ವೆಲ್ ಅಪಾರ್ಟ್‌ಮೆಂಟ್ ಹಿಂದಿನ ರೋಡ್‌ನಲ್ಲಿ 3 BHK ಮನೆ ಬಾಡಿಗೆಗೆ ಇದೆ.
95915 98446

**ಮಳಿಗೆಗಳು ಬಾಡಿಗೆಗೆ ಇವೆ**
ಎವಿಕೆ ಕಾಲೇಜು ರಸ್ತೆ, ಹಳೇ ಮನೆ ಹೋಟೆಲ್ ಎದುರು, 900 ಚ. ಅಡಿಯ ಮೂರು ಮಳಿಗೆಗಳು (Ground, First, Second) ಬಾಡಿಗೆಗೆ ದೊರೆಯುತ್ತವೆ.
ವಿವರಗಳಿಗಾಗಿ ಸಂಪರ್ಕಿಸಿ :
94816 89201, 98440 94100

**ಮನೆ ಮಾರಾಟಕ್ಕಿದೆ**
ಯರಗುಂಟೆ ವಾರ್ಡ್ ನಂ 45ರಲ್ಲಿ ಹೊಸದಾಗಿ ಕಟ್ಟಿಸಿರುವ 30x40 ಅಡಿ ಅಳತೆಯ 2 ಬೆಡ್ ರೂಂ, ಬೋರ್ ವೆಲ್/ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಪಶ್ಚಿಮ ದಿಕ್ಕಿನ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
9844958093, 9844779947

**ಮಾರಾಟಕ್ಕೆ**
S.S ಲೇಔಟ್ ಮನೆ-30×40(35 ಸಾವಿರ ಬಾಡಿಗೆ ಬರುವಂತಹ ಮನೆ) ಕೊಟ್ಟೂರೇಶ್ವರ ಬಡಾವಣೆ ಮನೆ-20×35, ಮೇಡಂ ಲೇಔಟ್ ಮನೆ 30×40, ಡಿಸಿಎಂ ಟೌನ್ ಮನೆ-40×50 ರವೀಂದ್ರನಾಥ ಬಡಾವಣೆ ಸೈಟ್-30×50, KHB ಸೈಟ್ - 30×40, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40, 30×42 (ಸೈಟ್ ದರ ಹಳೆಯ ಆರ್ ಸಿ ಸಿ ಮನೆ ನಿಟುವಳ್ಳಿ ಹೊಸ ಬಡಾವಣೆ)
ಸಂಪರ್ಕಿಸಿ: 7899636597
9916525828

**ಮೂಲಕ್ರಯ ಪತ್ರ ಕಳೆದಿದೆ**
ದಾವಣಗೆರೆ ಜಯನಗರ 'ಬಿ' ಬ್ಲಾಕ್ ವಾಸಿ ದೇವೇಂದ್ರಪ್ಪ ಇವರ ಹೆಸರಿನ ಸ್ಥಿರ ಸೊತ್ತಿನ ಮೂಲಕ್ರಯ ಪತ್ರ (ಕ್ರಯ ಪತ್ರದಲ್ಲಿರುವ ದಿನಾಂಕ 11.01.1985) ದಿನಾಂಕ 28.06.2020ರಂದು ಹೆಚ್.ಕೆ.ಆರ್ ಸರ್ಕಲ್ ಬಳಿ ಜೆರಾಕ್ಸ್ ಮಾಡಿಸಲು ಬೈಕ್‌ನಲ್ಲಿ ಹೋಗುವಾಗ ಕಳೆದಿದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ನಂಬರಿಗೆ ತಲುಪಿಸಲು ಕೋರಲಾಗಿದೆ.
ಮಂಜುನಾಥ್: 99722 57958

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸಂಪರ್ಕಿಸಿ:
ಸ್ಕಂದ ಚಿಟ್ ಫಂಡ್ಸ್ (ರಿ)
ದಾವಣಗೆರೆ-02
84531 61869

**ಅನುಭವವುಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.A, B.Ed, B.Sc. B.Ed, B.com, B.B.A, N.T.C
Address :-
Little champs Gurukulam
H.K.R circle, Near Shashank GYM, College Road, Nittavalli, Davanagere.
90609 06039, 83106 65780

**ಕಡಿಮೆ ದರದಲ್ಲಿ ತ್ಯಾಗದ ಮತ್ತು ತೆಂಗಿನ ಗಿಡಗಳು ದೊರೆಯುತ್ತವೆ.**
ಡೋರ್ ಡೆಲಿವರಿ ಕೊಡಲಾಗುವುದು.
ಸಂಪರ್ಕಿಸಿ: 98458 01330

**ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧ, ಬೆಡ್‌ರಿಡನ್, ಮಾನಸಿಕ, ಅಂಗವಿಕಲ, ಬುದ್ದಿ ಮಾಂದ್ಯರನ್ನು ನಮ್ಮಲ್ಲಿ ಊಟ ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು.
ನಿಟ್ಟುವಳ್ಳಿ, ಹೊಸ ಬಡಾವಣೆ, ದಾವಣಗೆರೆ.
89711 92936
76250 15036

**ನಮ್ಮಲ್ಲಿ ವಯೋ ವೃದ್ಧರಿಗೆ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು**
ಸಂಪರ್ಕಿಸಿ: ಜ್ಯೋತಿ ನಿರಂತರ ಸೇವಾ ಚಾರಿಟಬಲ್ ಟ್ರಸ್ಟ್ (ರಿ)
76250 15036
8971192936

**ಮನೆಗೇ ಬಂದು ಪಾಠ ಮಾಡಲು ಶಿಕ್ಷಕರು ಬೇಕಾಗಿದ್ದಾರೆ.**
ಸಿ.ಬಿ.ಎಸ್.ಇ. 4ನೇ ತರಗತಿ ಓದುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗೆ ಹಿಂದಿ ವಿಷಯ ಪಾಠ ಮಾಡಲು ಅನುಭವವುಳ್ಳ ಶಿಕ್ಷಕರು ಬೇಕಾಗಿದ್ದಾರೆ.
ಸಂಪರ್ಕಿಸಿ:
94819 09848

**Business for Sale**
Grocery (kirani) mobile app with store fully equipped for sale
Call :
78922 57110

**Mechnical Engineering**
Seats in Management Quota at CET Fee with installment in Davanagere. Offer ends on 07.09.2020
Contact
86181 82332

**WANTED**
Male Office Assistant
Andanur Chits (R)
Ram & Co Circle Davanagere.

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ಇಂದು 05.09.2020ರ ಶುಕ್ರವಾರದಂದು ಮಾತ್ರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ,
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
B.A, B.Ed.-Eng / SS -02
B.Sc, B.Ed.-PCM -02
Hindi, B.Ed -01, D.Ed -02 E/M
ಈ ಮೇಲ್ಕಂಡ ಅರ್ಹ ಶಿಕ್ಷಕ/ಕಿಯರು ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಬೇಕಾಗಿದ್ದಾರೆ.
Contact : SMS Convent
Near RTO Office, kondajji Road, Davanagere.
98447 35946, 96631 95531

**ಕೇವಲ 30 ದಿನಗಳಲ್ಲಿ**
ನುರಿತ ಶಿಕ್ಷಕರಿಂದ ಕಂಪ್ಯೂಟರ್ ಮತ್ತು ಮೊಬೈಲ್ ರಿಪೇರಿ ತರಬೇತಿಯೊಂದಿಗೆ ಉಚಿತ ವಸತಿ ಮತ್ತು Latest Problem solved DVD kit ನೀಡಲಾಗುವುದು.
ಫ್ಯೂಚರ್ ಕೇರ್
99029 99615
99025 45387

**ಬೇಕಾಗಿದ್ದಾರೆ**
1) Tele callers (Ladies (Unmarried)
Salary : 6000 Any Degree
2) Service Helper
Any Degree salary 7000
Contact: S.N Enterprises.
99642 22603, 85490 36776

**ಬೇಕಾಗಿದ್ದಾರೆ**
ದವಸ, ಧಾನ್ಯಗಳನ್ನು ಕ್ಲೀನ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ದಾವಣಗೆರೆ ಕೆ.ಬಿ. ಬಡಾವಣೆ ಹತ್ತಿರ ಇರುವವರಿಗೆ ಮೊದಲ ಆದ್ಯತೆ.
ಸಂಪರ್ಕಿಸಿ: 98864 39097

**ತಕ್ಷಣ ಬೇಕಾಗಿದ್ದಾರೆ**
ಆಲ್ ರೌಂಡ್ ಕುಕ್, ಅಸಿಸ್ಟೆಂಟ್ ಕುಕ್ ಸಪ್ಲೈಯರ್, ಕ್ಲೀನರ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ.
ಹೋಟೆಲ್ ಪೂಜಾ ಇಂಟರ್ ನ್ಯಾಷನಲ್
ಪಿ.ಬಿ.ರಸ್ತೆ, ದಾವಣಗೆರೆ
81972 45502, 96060 96695

**ತಕ್ಷಣ ಕೆಲಸ**
ನಮ್ಮ ಸಂಸ್ಥೆಯ ಮೂಲಕ ಮನೆಗಳಲ್ಲಿ ಉಳಿದುಕೊಂಡು ವೃದ್ಧರ, ರೋಗಿಗಳ ಆರೈಕೆ ಮಾಡಲು ಯುವಕ / ಯುವತಿಯರು / ಮಹಿಳೆಯರು / ಪುರುಷರು ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಹಾಗೂ ಹೋಂ ನರ್ಸಿಂಗ್ ಸೇವೆ ಬೇಕಾದಲ್ಲಿ ಸಂಪರ್ಕಿಸಿ. ಹೋಂ ನರ್ಸ್ ಗಳನ್ನು ಮೆಡಿಕಲ್ ಫಿಟ್ ನೆಸ್ ಸರ್ಟಿಫಿಕೇಟ್ ನೊಂದಿಗೆ ಕಳುಹಿಸಿಕೊಡಲಾಗುವುದು.
95139-17777, 98447-36868

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ಶ್ರೀ ದುರ್ಗಾಚಾಮುಂಡೇಶ್ವರಿ ಜ್ಯೋತಿಷ್ಯಂ**
ಕೊಳ್ಳೇಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್
ದೈವಜ್ಞ ಪಂ|| ಶ್ರೀ ಪ್ರಶಾಂತ್ ಗುರೂಜಿ
ಪ್ರೇಮ ವಿಚಾರ, ದಾಂಪತ್ಯದಲ್ಲಿ ತೊಂದರೆ, ಸಾಲದ ಬಾಧೆ, ಕೋರ್ಟ್ ಕೇಸ್, ಆರೋಗ್ಯ, ಬಿಸಿನೆಸ್, ಗುಪ್ತ ಸಮಸ್ಯೆ ಸೇರಿದಂತೆ ಕೇವಲ 3 ದಿನಗಳಲ್ಲಿ 100% ಗ್ಯಾರಂಟಿ ಪರಿಹಾರ ಶತಸಿದ್ಧ.
ಫೋನ್ ಮೂಲಕ ನಿಮ್ಮ ಸ್ವರ ಭವಿಷ್ಯದಿಂದ ಪರಿಹಾರ
90719 91136

**ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)**
ಹಿಂದೂ ವಧು-ವರರ ಮಾಹಿತಿ ಕೇಂದ್ರ,
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 32427
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ಎಜುಕೇಷನ್ ಟ್ರಸ್ಟ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

# ರಂಗಜಂಗಮರಿಗೊಂದು ನಮನ



## ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗೆ ಇಂದು 76ರ ಹುಟ್ಟುಹಬ್ಬದ ಸಂಭ್ರಮ

ಚಿತ್ರದುರ್ಗ ಜಿಲ್ಲೆ ಬುಡಕಟ್ಟು ಜನಾಂಗಗಳ ತವರು. ಕೋಟೆ ಕೊತ್ತಲುಗಳ ನಾಡು. ಬಯಲಾಟ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಎಲ್ಲಾ ಪ್ರಕಾರಗಳ ನಾಟಕಗಳು ಇಲ್ಲಿ ಪ್ರಚಲಿತದಲ್ಲಿವೆ. ಸಂಚಾರಿ ನಾಟಕಗಳ ತವರೂರೆಂದೇ ಹೆಸರಾದ ಜಿಲ್ಲೆಯಲ್ಲಿ 'ಶಿವ ಸಂಚಾರ' ಎಂಬ ರೆಪರ್ಟರಿಯನ್ನು ನಾಡಿನಾದ್ಯಂತ ನಡೆಸಿಕೊಂಡು ಬರುತ್ತಿರುವವರು ಡಾ॥ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು. ಶ್ರೀಗಳು ವೈಚಾರಿಕ ಬರಹಗಳನ್ನು, ವಚನ ಸಾಹಿತ್ಯ ಮತ್ತು ವಚನಕಾರರ ಜೀವನಾದರ್ಶಗಳನ್ನು ರಂಗಭೂಮಿಯ ಮೂಲಕ ಜನಮನಕ್ಕೆ ಮುಟ್ಟಿಸುವ ಮಹಾಮಣಿಹದ ನೇತಾರರಾಗಿ ಆಧುನಿಕ ಕನ್ನಡ ರಂಗಭೂಮಿಗೆ ಅಪೂರ್ವ ಕೊಡುಗೆ ನೀಡಿದ್ದಾರೆ. ರೆಪರ್ಟರಿಯ ಮೂಲಕ ಕಾರ್ಯಕ್ಷೇತ್ರವಾದ ಸಾಣೇಹಳ್ಳಿಯನ್ನು ಕರ್ನಾಟಕದ ರಂಗ ಕಾಶಿಯನ್ನಾಗಿಸಿದ್ದಾರೆ. 'ಶಿವ ಶರಣರ' ಕನ್ನಡ ನಾಟಕಗಳನ್ನು ಹಿಂದಿಗೆ ಅನುವಾದಿಸಿ, ಭಾರತದ ಪ್ರಸಿದ್ಧ ನಗರಗಳಲ್ಲಿ 'ಭಾರತ ಸಂಚಾರ' ಮತ್ತು 'ಶಿವದೇಶ ಸಂಚಾರ' ಎಂಬ ರಂಗಯಾತ್ರೆಯ ಮೂಲಕ ಹೊರನಾಡಿನಲ್ಲೂ ವಚನಕಾರರ ಪರಿಚಯ ಮಾಡಿಸಿದ್ದಾರೆ.

ಶ್ರೀಗಳು ಜವಾನನ ಕೆಲಸ ಬಯಸಿ, 1967ರಲ್ಲಿ ಸಿರಿಗೆರೆಗೆ ಬಂದವರು. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಕನಸಿನ ಬಳ್ಳಿ ಇವರು. ಪೂಜ್ಯರ ಆಶೀರ್ವಾದದಿಂದ ಸಿರಿಗೆರೆಯಲ್ಲೇ ಪಿ.ಯು.ಸಿ. ಸೇರಿದರು. ಪೂಜ್ಯರು ಜನಿಸಿದ್ದು, 04-09-1951 ರಲ್ಲಿ ಹೆಡಿಯಾಲದಲ್ಲಿ. (ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕು) ತಂದೆ ನಾಗಯ್ಯ, ತಾಯಿ ಶಿವನಮ್ಮ. ಪ್ರಾಥಮಿಕ ಶಿಕ್ಷಣ ಹೆಡಿಯಾಲದಲ್ಲಿಯಾದರೆ, ಪ್ರೌಢಶಿಕ್ಷಣ ಪಕ್ಕದ ಗ್ರಾಮ ಸುಣಕಲ್ಬಿದರಿಯಲ್ಲಿ. ಕಾಲೇಜು ಶಿಕ್ಷಣ ಸಿರಿಗೆರೆಯ ಎಂ.ಬಿ.ಆರ್. ಕಾಲೇಜಿನಲ್ಲಿ. ಬಿ.ಎ. ತತ್ವಶಾಸ್ತ್ರ ವಿಭಾಗದಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕದೊಂದಿಗೆ ಉತ್ತೀರ್ಣರಾದರು. 1974ರಲ್ಲಿ ಮೈಸೂರಲ್ಲಿ ಎಂ.ಎ. ಸ್ನಾತಕೋತ್ತರ ಪದವಿ ತತ್ವಶಾಸ್ತ್ರ ವಿಭಾಗದಲ್ಲೂ ಪ್ರಥಮ ರ್‍ಯಾಂಕ್ ಗಳಿಸಿ, ಚಿನ್ನದ ಪದಕ ಪಡೆದರು. ಆಗ ವಿಶ್ವವಿದ್ಯಾನಿಲಯ ಸ್ವಲ್ಪ ಹಣ ಕಟ್ಟಿ ಚಿನ್ನದ ಪದಕ ಪಡೆಯಲು ಸೂಚಿಸಿದಾಗ ಅಂತಹ ಪದಕವೇ ಬೇಡವೆಂದು ಪ್ರತಿಭಟಿಸಿದ ಬಂಡಾಯದ ಮನೋಧರ್ಮದವರು.

ಸಿರಿಗೆರೆಯ ತರಳಬಾಳು ಬೃಹನ್ಮಠದ ಶಾಖಾ ಮಠಗಳಲ್ಲಿ ಸಾಣೇಹಳ್ಳಿ ಶ್ರೀಮಠದ ಪಾತ್ರ ಪ್ರಮುಖವಾದುದು. 1977 ಡಿಸೆಂಬರ್ 25 ರಂದು ಪಟ್ಟಾಭಿಷಿಕ್ತರಾದ ಪಂಡಿತಾರಾಧ್ಯ ಶ್ರೀಗಳು, ಕೇವಲ ತಾಲ್ಲೂಕು, ಜಿಲ್ಲೆಗೆ ಪರಿಚಯವಿದ್ದ ಶ್ರೀಮಠದ ವ್ಯಾಪ್ತಿ ಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಪೂಜ್ಯರಿಗೆ ಪಟ್ಟವಾದಾಗ ಸಾಣೇಹಳ್ಳಿ ಶಾಖಾಮಠ ಪ್ರೌಢಶಾಲೆ ಮತ್ತು ಹಾಸ್ಟೆಲ್ ಮಾತ್ರ ಹೊಂದಿತ್ತು. ಭಕ್ತರೂ ಸಹ ಮಠದ ಕಡೆಗೆ ಅಷ್ಟೇನು ಆಸಕ್ತಿ ತೋರಿಸುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಧೃತಿಗೆಡದೆ, ಸಮಾಜದ ಭಕ್ತರ ಬೆಂಬಲ ಪಡೆದು ಹಗಲಿರುಳು ಶ್ರಮಿಸಿ, ಸಾಣೇಹಳ್ಳಿಯಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದರು. ಭಕ್ತರು ಮಠದ ಕಡೆಗೆ ಬರುವಂತೆ ಆಕರ್ಷಣೆ ಮಾಡಿದರು. ಇಲ್ಲಿ ಒಟ್ಟು ಐದು ರಂಗಮಂದಿರಗಳನ್ನು ನಿರ್ಮಾಣ ಮಾಡಿದ್ದಾರೆ. ಜಗತ್ತಿನ ಯಾವ ಹಳ್ಳಿಯಲ್ಲೂ ಒಂದೇ ಗ್ರಾಮದಲ್ಲಿ ಇಷ್ಟೊಂದು ರಂಗಮಂದಿರಗಳಿಲ್ಲವೆನಿ ಸುತ್ತದೆ. ಇಲ್ಲಿ ಭಕ್ತಿ, ಆರಾಧನೆ, ನಂಬಿಕೆ, ಉಸಿರು ಎಲ್ಲವೂ ಬರೀ ನಾಟಕ, ಕಲೆ, ಸಂಗೀತ, ವಿಚಾರ ಸಂಕಿರಣಗಳು, ಶಿಕ್ಷಣವೇ ಆಗಿದೆ.

ಜಗತ್ತಿನ ಯಾವುದೇ ಕಲೆ ಇರಲಿ ಅವುಗಳೆಲ್ಲವು ನೆಲ ಮೂಲದ ಸಂಬಂಧ ಹೊಂದಿವೆ. ಅವು ಹುಟ್ಟಿಕೊಂಡ ನೆಲದಲ್ಲಿ ಕೂತು ಅವುಗಳಿಂದ ಆಚೆ-ಈಚೆ ಸೇರಿದ ಮನಸ್ಸುಗಳು ಒಟ್ಟಾಗಿ ಮತ್ತೆ ಮುಖಾಮುಖಿಯಾಗುವುದು, ಅನುಭವಿಸುವುದು ಒಂದು ಆಂತರ್ಯದ ಸುಖವೆನ್ನಬಹುದು. ಆದರೆ, ಅದನ್ನೆಲ್ಲ ಹಳ್ಳಿ ನೆಲದಲ್ಲಿ ಕಟ್ಟಿಕೊಡುವವರು ಬೇಕಲ್ಲವೇ? ಅಂತಹದೊಂದು ಕಾಯಕ ಮಾಡುತ್ತಾ ಬಂದವರು ಪಂಡಿತಾರಾಧ್ಯ ಶ್ರೀಗಳು. ಪೂಜ್ಯರು 43 ವರ್ಷಗಳಿಂದ ಮಾಡುತ್ತಾ ಬಂದಿರುವ ಸಾಧನೆ ಅವಿಸ್ಮರಣೀಯ.

ಓದಿದ್ದು ತತ್ವಶಾಸ್ತ್ರ, ಒಪ್ಪಿದ್ದು ವಚನಶಾಸ್ತ್ರ, ಅಪ್ಪಿದ್ದು ರಂಗಭೂಮಿ. ಲೇಖಕರು, ನಾಟಕಕಾರರು, ಆಧುನಿಕ ವಚನಕಾರರು, ಅಂಕಣಕಾರರು ಆಗಿರುವ ಪೂಜ್ಯರಿಂದ ಇದುವರೆಗೆ 106ಕ್ಕೂ ಹೆಚ್ಚು ಸಾಹಿತ್ಯ ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಣೆಗೊಂಡಿವೆ. ಹಲವು ಪತ್ರಿಕೆಗಳಿಗೆ ಲೇಖನ ಬರೆಯುವ ಜೊತೆಗೆ ಪ್ರಜಾವಾಣಿಯಲ್ಲಿ 'ಬಾಳಬುತ್ತಿ'ಯ ಅಂಕಣಕಾರರಾಗಿದ್ದರು. ಲೆಕ್ಕವಿಲ್ಲದಷ್ಟು ಸರ್ವ ಶರಣರ ಸಮ್ಮೇಳನಗಳು ಸೇರಿದಂತೆ ಶ್ರಾವಣ ಸಂಜೆ, ಮತ್ತೆ ಕಲ್ಯಾಣದಂತಹ ಸಮಾಜಮುಖಿ, ಜನಪರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಿಲ್ಲೆಯಾದ್ಯಂತ ಕಳೆದೆರಡು ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಜಗತ್ತನ್ನು ಬಾಧಿಸುತ್ತಿರುವ ಬಹುತೇಕ ಸಮಸ್ಯೆಗಳಿಗೆ ಅರಿವು, ಅನ್ನದಾಸೋಹ ಮತ್ತು ಕಾಯಕಗಳು ಪರಿಹಾರವಾಗಬಲ್ಲವು. ಅಂತಹ ಚಿಂತನೆಗಳಿಂದ ಹುಟ್ಟಿದ ಕಾರ್ಯಕ್ರಮಗಳೇ ಇವುಗಳು.

ಹಳ್ಳಿಗಳ ಸ್ವಚ್ಛತೆ, ವೈಚಾರಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಜನಮನದಲ್ಲಿ ಉಪನ್ಯಾಸ, ಕಾರ್ಯಾಗಾರ, ವಿಚಾರ ಸಂಕಿರಣ, ವಚನ ಗಾಯನ, ನಾಟಕ ಪ್ರದರ್ಶನಗಳು ಪ್ರಮುಖ ಕಾರ್ಯಕ್ರಮದ ಉದ್ದೇಶಗಳಾಗಿದ್ದವು. ಜಡತ್ವಕ್ಕೆ ಸಂದ ಮನಸ್ಸುಗಳನ್ನು ಬಡಿದೆಚ್ಚರಿಸಿ, ಬದುಕಿನ ಸಾರ್ಥಕತೆಯ ಮಾರ್ಗ ತೋರಿಸಿದ್ದು, 12ನೇಯ ಶತಮಾನದ ಶರಣ ಚಳುವಳಿ. ಆ ಅರಿವಿನ ಮಾರ್ಗವನ್ನು 'ಮತ್ತೆ ಕಲ್ಯಾಣ'ವೆಂಬ ಆಂದೋಲನದ ಮೂಲಕ ಪೂಜ್ಯರು ನಡೆಸಿದ್ದಾರೆ. ಸಮಯಕ್ಕೆ ಹೆಚ್ಚು ಒತ್ತು ಕೊಡುವ ಶ್ರೀಗಳ ಸೇವಾ ಕ್ಷೇತ್ರಗಳು ಹಲವಾರು. ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತ ಸಮಿತಿಯ ಸದಸ್ಯರು, ತರಳಬಾಳು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಉಪಾಧ್ಯಕ್ಷರು, ಸಿರಿಗೆರೆ ಎಂ.ಬಿ.ಆರ್. ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ ಮಹಾ ಪೋಷಕರು, ವಚನ ಮಂಟಪದ ಅಧ್ಯಕ್ಷರು, ಶಿವ ಸಂಚಾರದ ರೂವಾರಿಗಳು. ಪರಿಸರ ರಕ್ಷಣೆ, ಪುಸ್ತಕ ಪ್ರೇಮ, ಸಾಹಿತ್ಯ ಕೃಷಿ, ರಂಗ ಚಟುವಟಿಕೆ, ವೈಚಾರಿಕ ಮುನ್ನೋಟ ನಿರಂತರ ಸಭೆ-ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಮೂಲಕ ಅಪಾರ ಜನ ಮನ್ನಣೆ ಗಳಿಸಿದ್ದಾರೆ. ಗ್ರಾಮೀಣ ಜನರ, ದೀನ-ದಲಿತರ ಬಗ್ಗೆ ವಿಶೇಷ ಕಾಳಜಿಯುಳ್ಳ ಶ್ರೀಗಳು ಅವರ ಯಾವುದೇ ಸಮಸ್ಯೆಗಳಿದ್ದರೂ ಸಹ ತಕ್ಷಣ ಪರಿಹರಿಸುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ.

ನೇರ, ನಿಷ್ಠೂರ, ನಡೆನುಡಿಯ ಶ್ರೀಗಳು ಸನ್ಯಾಸಿಗಳಲ್ಲೇ ಅಪರೂಪದ ವ್ಯಕ್ತಿತ್ವವುಳ್ಳವರು. ರಂಗಭೂಮಿ ಚರಿತ್ರೆಯಲ್ಲೇ ಧಾರ್ಮಿಕ, ಸಾಹಿತ್ಯಿಕ ಆಸಕ್ತಿಯನ್ನು ಮೊಟ್ಟ ಮೊದಲು ತೋರಿದ ಮಠಾಧಿಪತಿಗಳಾಗಿದ್ದಾರೆ. 'ಗುಬ್ಬಿ ವೀರಣ್ಣ ಪ್ರಶಸ್ತಿ' ಪುರಸ್ಕೃತರನ್ನೆಲ್ಲಾ ಒಂದೇ ವೇದಿಕೆಯಲ್ಲಿ ಸೇರಿಸಿ, ಅವರಿಗೆ ಬೆಳ್ಳಿಯ ಬೆತ್ತ, ಮೈಸೂರು ಪೇಟ ನೀಡಿ ಗೌರವಿಸಿದ್ದು, ರಂಗಭೂಮಿಯ ಇತಿಹಾಸದಲ್ಲೇ ಸ್ಮರಣೀಯ. ಹೊಸದುರ್ಗದಲ್ಲಿ 2004ರಲ್ಲಿ ನಡೆದ ಚಿತ್ರದುರ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದು, ಪೂಜ್ಯರ ಸಾಹಿತ್ಯ ಪ್ರೇಮಕ್ಕೆ ಹಿಡಿದ ಕನ್ನಡಿ. ಬಸವಣ್ಣನವರ ಬದುಕಿನ ಸುತ್ತ ಹೆಣೆದ ಮೂರು ಕನ್ನಡ ನಾಟಕಗಳನ್ನು ಹಿಂದಿಯಲ್ಲಿ ಕಲಿಸಿ, 'ಭಾರತ ರಂಗ ಸಂಚಾರ ಏರ್ಪಡಿಸಿದ್ದು' ಭಾರತೀಯ ರಂಗಭೂಮಿಯ ಇತಿಹಾಸದಲ್ಲೇ ದಾಖಲಾರ್ಹವಾದುದಾಗಿದೆ.

ಶ್ರೀಗಳು ಮಠ ಮತ್ತು ಮಠಾಧೀಶರನ್ನು ಅನುಮಾನದಿಂದ ನೋಡುವ ಈ ಕಾಲದಲ್ಲೂ ಇದಕ್ಕೆ ಅಪವಾದವಾಗಿದ್ದಾರೆ. ತಮ್ಮ ಪರಿಶ್ರಮ, ಜನಪರ ಕಾಳಜಿ, ವೈಚಾರಿಕತೆ, ರಂಗಾಸಕ್ತಿ, ಸಾಹಿತ್ಯಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಒಲವು, ಲೇಖನ, ಭಾಷಣಗಳ ಮೂಲಕ ಸಹೃದಯರ ಗಮನವನ್ನು ಸೆಳೆದಿದ್ದಾರೆ.

ಇಂದು ಸಾಣೇಹಳ್ಳಿ ನಾಡಿನ ಎಲ್ಲಾ ವರ್ಗದ ಜನರ ಗಮನ ಸೆಳೆಯಲು ಕಾರಣವಾದುದು ಶ್ರೀಗಳ ರಂಗಭೂಮಿಯ ಚಟುವಟಿಕೆಗಳು. ಹೀಗಾಗಿ ಅವರು ನಾಡಿನಾದ್ಯಂತ 'ರಂಗಜಂಗಮ'ರೆಂದೇ ಪ್ರಖ್ಯಾತರಾಗಿದ್ದಾರೆ. ಪೂಜ್ಯರ ರಂಗಸಾಧನೆ ಗಮನಿಸಿ, ಕುವೆಂಪು ವಿಶ್ವ ವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. 1998ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಗೌರವ ಫೆಲೋಷಿಪ್, 2004ರಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಅಂತರರಾಷ್ಟ್ರೀಯ ರೋಟರಿ ಸಂಸ್ಥೆ ಫಾಲ್ ಹ್ಯಾರಿಸ್ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಕೆ.ವಿ.ಶಂಕರಗೌಡ ಪ್ರಶಸ್ತಿ, ದುಬೈ ಕನ್ನಡಿಗರ ಧ್ವನಿ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರಶಸ್ತಿ-ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಪೂಜ್ಯರು, ಇಂದು 70ನೇಯ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ನಾಡು ಕಂಡರಿಯದ ಅಪರೂಪದ ಸಂತರಲ್ಲಿ ನಾಡಿನ ಪ್ರಗತಿಪರ ಚಿಂತಕರು, ವಿಚಾರವಾದಿಗಳು ನಮ್ಮ ಸಮಾಜಕ್ಕೆ ದೊರೆತಿರುವುದು ನಮ್ಮ ಸೌಭಾಗ್ಯ.

✍ ಉಷಾ ಕೆ.ಬಿ.
ಉಪನ್ಯಾಸಕರು, ಬಿ. ಪರಮೇಶ್ವರಪ್ಪ ಕಲಾ ಮತ್ತು ವಾಣಿಜ್ಯಶಾಸ್ತ್ರ ಕಾಲೇಜು, ಹೊಳಲ್ಕೆರೆ.

# ಪತ್ರಿಕೆ ಜೋಡಿಸಿಕೊಳ್ಳಲೊಂದು ಸೂರು ಕೊಡಿ

## ಇಂದು ಪತ್ರಿಕಾ ವಿತರಕರ ದಿನಾಚರಣೆ



**ಸ್ಮಾರ್ಟ್ ಸಿಟಿ ಯೋಜನೆಯಡಿ ನೂತನವಾಗಿ ನಿರ್ಮಿಸಲಾಗುತ್ತಿರುವ ಖಾಸಗಿ ಬಸ್ ನಿಲ್ದಾಣದಲ್ಲಿ ಬೆಳಿಗ್ಗೆ 3 ಗಂಟೆಯಿಂದ 7.30 ಗಂಟೆವರೆಗೆ ಪತ್ರಿಕೆ ಜೋಡಿಸಿಕೊಳ್ಳಲು ವ್ಯವಸ್ಥೆ ಕಲ್ಪಿಸಿಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದು, ಅಧಿಕಾರಿಗಳು ಸ್ಪಂದಿಸಬೇಕಿದೆ ಎಂದು ಹಿರಿಯ ಪತ್ರಿಕಾ ವಿತರಕ ಎ.ಎನ್. ಕೃಷ್ಣಮೂರ್ತಿ ಹೇಳಿದರು.**

ದಾವಣಗೆರೆ, ಸೆ.3- ಛಳಿ ಇದೆ ಎಂದು ಹೊದ್ದು ಮಲಗುವಂತಿಲ್ಲ, ಮಳೆ ಬಂತೆಂದು ತಡ ಮಾಡುವಂತಿಲ್ಲ, ಮುಂಜಾನೆ ಬೀಳುವ ಸವಿಗನಸಿನ ಮಾತೇ ಇಲ್ಲ.

ಹೌದು ಇವರು ಪತ್ರಿಕಾ ವಿತರಕರು. ಸಂವಿಧಾನದ ನಾಲ್ಕನೇ ಅಂಗ ಎಂದು ಮಾಧ್ಯಮವನ್ನು ಕರೆದರೆ, ಇವರು ಮಾಧ್ಯಮದ ನಾಲ್ಕನೇ ಅಂಗ ಎನ್ನಲಾಗುತ್ತದೆ.

ಕೈಯ್ಯಲ್ಲಿ ಮೊಬೈಲ್ ಇದ್ದರೆ, ಮನೆಯಲ್ಲಿ ಟಿವಿ ಇದ್ದರೂ ಬೆಳಿಗ್ಗೆ ಪತ್ರಿಕೆ ಓದದಿದ್ದರೆ ಬಹುಪಾಲು ಜನಕ್ಕೆ ಇಂದಿಗೂ ಸಮಾಧಾನವಿರುವುದಿಲ್ಲ. ತುಸು ತಡವಾದರೂ ಯಾಕಪ್ಪಾ ಲೇಟು? ಎಂದು ಪತ್ರಿಕೆ ಹಾಕುವವನ್ನು ಕೇಳುವಷ್ಟು ಪತ್ರಿಕೆ ಓದುವ ಗೀಳು. ಆದರೆ, ಅಷ್ಟೇ ಪ್ರಾಮಾಣಿಕ ಕೆಲಸ ಈ ಪತ್ರಿಕಾ ವಿತರಕರದ್ದು. ಬೆಳಿಗ್ಗೆ 4 ಗಂಟೆಯೊಳಗೆ ಕನಸಿನ ನಿದ್ರೆಗೆ ಬ್ರೇಕ್ ಹಾಕಿ ಹೊರಡಬೇಕು. ಪತ್ರಿಕೆಗಳನ್ನು ಜೋಡಿಸಿಕೊಂಡು ಸೈಕಲ್ ಅಥವಾ ಬೈಕ್‌ನಲ್ಲಿಟ್ಟುಕೊಂಡು ಓದುಗನಿಗೆ ತುಸು ತಡವಾಗದಂತೆ ಕೈ ಮುಟ್ಟಿಸುವ ಕಾಯಕವಿದು.

**ಪಾರ್ಟ್ ಟೈಂ ಜಾಬ್ :** ಹಲವಾರು ವಿದ್ಯಾರ್ಥಿಗಳಿಗೆ ಪತ್ರಿಕೆ ಹಂಚುವುದು ಪಾರ್ಟ್ ಟೈಂ ಕೆಲಸ. ಇದು ಅವರ ಓದಿಗೆ ಸಹಕಾರಿಯಾಗಿದೆ. ಬೆಳಿಗ್ಗೆ 4 ರಿಂದ 8ರ ಒಳಗೆ ಪತ್ರಿಕೆ ವಿತರಣೆ ಮುಗಿಸಿ ಸಾಧ್ಯವಾದರೆ ತುಸು ಹೊತ್ತು ವಿಶ್ರಾಂತಿ ಪಡೆದು ಶಾಲೆ ಅಥವಾ ಕಾಲೇಜುಗಳಿಗೆ ತೆರಳುವ ಹುಡುಗರೇ ಹೆಚ್ಚು.

ಇನ್ನು ಕೆಲವು ಏಜೆಂಟರು ಹಲವಾರು ವರ್ಷಗಳಿಂದ ಈ ವೃತ್ತಿ ನಡೆಸಿಕೊಂಡು ಬಂದಿದ್ದಾರೆ. ಕುಟುಂಬದವರು ಅನಾರೋಗ್ಯ ಪೀಡಿತರಾದರೂ, ಶುಭ ಕಾರ್ಯವಿದ್ದರೂ ಇವರು ತಮ್ಮ ಕಾಯಕ ಬಿಡುವಂತಿಲ್ಲ.

ಅಂದ ಹಾಗೆ ಇವರಿಗೆ ಸಿಗುವುದು ವರ್ಷದಲ್ಲಿ ನಾಲ್ಕು ರಜೆಗಳು ಮಾತ್ರ. ಯುಗಾದಿ, ಗಣೇಶನ ಹಬ್ಬ, ದಸರಾ ಹಾಗೂ ದೀಪಾವಳಿಯಲ್ಲಿ ಮಾತ್ರ ಇವರಿಗೆ ರಜೆ.

**ಈಡೇರಲೇ ಇಲ್ಲ ಕಟ್ಟಡದ ಬೇಡಿಕೆ:** ಪ್ರತಿ ದಿನ ವಿತರಿಸಬೇಕಾದ ಪತ್ರಿಕೆಗಳನ್ನು ಜೋಡಿಸಿಕೊಳ್ಳಲು ದಾವಣಗೆರೆಯಲ್ಲಿ ಒಂದು ಕಟ್ಟಡವಿಲ್ಲ. ಹಳೇ ಬಸ್ ನಿಲ್ದಾಣದ ಮುಂಭಾಗ ಹಾಗೂ ಸುತ್ತ ಮುತ್ತಲಿನ ಮಳಿಗೆಗಳ ಮುಂದೆ ಕುಳಿತು ಪತ್ರಿಕೆ ಜೋಡಿಸಿಕೊಳ್ಳುವ ಪರಿಸ್ಥಿತಿ ಇವರದ್ದು. ಈ ಬಗ್ಗೆ ವಿತರಕರು ಮಹಾನಗರ ಪಾಲಿಕೆ ಹಾಗೂ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಇನ್ನಾದರೂ ಅಧಿಕಾರಿಗಳು ಇವರಿಗೊಂದು ಜಾಗ ಕಲ್ಪಿಸಿಕೊಡಬೇಕಿದೆ.

ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ 2018ರ ಬಜೆಟ್‌ನಲ್ಲಿ ಪತ್ರಿಕಾ ವಿತರಕರ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ 2 ಕೋಟಿ ರೂ. ಘೋಷಣೆ ಮಾಡಿದ್ದರು. ಆದರೆ ಇನ್ನೂ ಯೋಜನೆ ರೂಪುಗೊಂಡು ಅನುಷ್ಠಾನಕ್ಕೆ ಬಂದಿಲ್ಲ ಎನ್ನುವುದು ವಿತರಕರ ಬೇಸರದ ನುಡಿ.

ಪತ್ರಿಕೆ ಹಂಚುವವರಿಗಾಗಿ ಕ್ಷೇಮ ನಿಧಿ ಸ್ಥಾಪಿಸಲು 2 ಕೋಟಿ ರೂ. ಮೀಸಲಿಟ್ಟಿದ್ದು, ಜಿಲ್ಲೆಯಲ್ಲಿನ ಪತ್ರಿಕಾ ಏಜೆಂಟರು ಹಾಗೂ ವಿತರಕರು ವಿವರ ಸಲ್ಲಿಸಲು ಕರ್ನಾಟಕ ಮಾಧ್ಯಮ ಅಕಾಡೆಮಿಯ ಕಾರ್ಯದರ್ಶಿ ಸಿ. ರೂಪಾ ವಾರ್ತಾಧಿಕಾರಿಗಳಿಗೆ 2018ರ ಅಕ್ಟೋಬರ್ 17 ರಂದು ಪತ್ರ ಬರೆದಿದ್ದರು.

ಇದರನ್ವಯ ಈಗಾಗಲೇ ವಿವರ ನೀಡಲಾಗಿದ್ದು, ಮುಂದಿನ ಪ್ರಕ್ರಿಯೆಗಳು ಇನ್ನೂ ನಡೆದಿಲ್ಲ. ಸರ್ಕಾರ ಮಾಧ್ಯಮ ಅಕಾಡೆಮಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸದೇ ಇರುವುದು ಪ್ರಕ್ರಿಯೆಯ ವಿಳಂಬಕ್ಕೆ ಕಾರಣವಾಗಿದೆ ಎಂದು ಕಾರ್ಯದರ್ಶಿಗಳು ಹೇಳಿದ್ದಾಗಿ ಕೃಷ್ಣಮೂರ್ತಿ ತಿಳಿಸಿದರು.

**ವಿಶೇಷ ಪ್ಯಾಕೇಜ್‌ಗೆ ಮನವಿ:** ಪತ್ರಿಕಾ ವಿತರಕರಿಗೆ ರಾಜ್ಯ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ನಗರದ ಹಿರಿಯ ಪತ್ರಿಕಾ ವಿತರಕರ ಎ.ಎನ್. ಕೃಷ್ಣಮೂರ್ತಿ ಒತ್ತಾಯಿಸಿದ್ದಾರೆ.

# ಕೆ.ಎಸ್.ಎಫ್.ಸಿ.ಗೆ 44.92 ಕೋಟಿ ರೂ. ಲಾಭ

ಬೆಂಗಳೂರು, ಸೆ.3- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಪ್ರಸಕ್ತ ವರ್ಷ 44.92 ಕೋಟಿ ರೂ.ಗಳಷ್ಟು ಲಾಭ ಗಳಿಸಿರುವುದಾಗಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಏಕರೂಪ್ ಕೌರ್ ತಿಳಿಸಿದ್ದಾರೆ.

ಸಂಸ್ಥೆಯ 61ನೇ ವಾರ್ಷಿಕ ಮಹಾಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಸಂಸ್ಥೆಯ ಷೇರುದಾರರನ್ನು ಉದ್ದೇಶಿಸಿ ಮಾತನಾಡಿದರು.

2019-20ರ ಆರ್ಥಿಕ ವರ್ಷದಲ್ಲಿ ವಿವಿಧ ಸಾಲ ಯೋಜನೆಗಳ ಮೂಲಕ 667.81 ಕೋಟಿ ರೂ.ಗಳ ಸಾಲ ಮಂಜೂರು ಮಾಡಲಾಗಿತ್ತು. 727.90 ಕೋಟಿ ರೂ.ಗಳನ್ನು ವಿತರಣೆ ಮಾಡಲಾಗಿದ್ದು, ಪ್ರಸ್ತುತ 2019-20ರ ವರ್ಷದಲ್ಲಿ ಒಟ್ಟು 720.85 ಕೋಟಿ ರೂ.ಗಳನ್ನು ವಸೂಲಾತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಶೇಕಡವಾರು ಅನುತ್ಪಾದಕ ನಿವ್ವಳ ಆಸ್ತಿಯು ಕಳೆದ ವರ್ಷದ ಶೇ 6.09 ರಿಂದ ಪ್ರಸ್ತುತ ವರ್ಷದಲ್ಲಿ ಶೇ 5.12 ಕ್ಕೆ ಇಳಿದಿರುತ್ತದೆ.

ಸಂಸ್ಥೆಯು 31.3.2020 ರವರೆಗಿನ ಸಂಚಿತ ಮಂಜೂರಾತಿಯು 1,74,217 ಕೈಗಾರಿಕಾ ಘಟಕಗಳಿಗೆ ರೂ. 17,884.72 ಕೋಟಿ ರೂ.ಗಳಷ್ಟಾಗಿದೆ.

ಸಂಸ್ಥೆಯು ಈಗಾಗಲೇ 21,700 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ 2000 ಕೋಟಿ ರೂ.ಗಳಿಗೂ ಅಧಿಕ ಸಾಲ ಮಂಜೂರಾತಿ ನೆರವನ್ನು ನೀಡಿದೆ. ಇಲ್ಲಿಯವರೆಗೆ 30,000 ಕ್ಕೂ ಹೆಚ್ಚಿನ ಮಹಿಳಾ ಉದ್ಯಮಿದಾರರಿಗೆ 4243.67 ಕೋಟಿ ರೂಗಳ ಅವಧಿ ಸಾಲ ಮಂಜೂರಾತಿ ಮಾಡಲಾಗಿದೆ. 41,000 ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಉದ್ಯಮಿಗಳಿಗೂ ಇದುವರೆಗೂ 1748.40 ಕೋಟಿ ರೂಗಳ ಸಾಲ ಮಂಜೂರಾತಿ ನೆರವು ಒದಗಿಸಿದೆ. ಮೊದಲ ಪೀಳಿಗೆ ಉದ್ಯಮಿದಾರರಿಗೆ 164.70 ಕೋಟಿ ರೂಗಳ ಸಾಲ ಮಂಜೂರು ಒದಗಿಸಲಾಗಿದೆ.

2020-21ರ ಹಣಕಾಸು ವರ್ಷವನ್ನು ಕೋವಿಡ್-19 ರ ಸವಾಲುಗಳ ವರ್ಷ ವೆಂದು ಪರಿಗಣಿಸಲಾಗಿದೆ. ರಾಜ್ಯದ ಆರ್ಥಿಕತೆಯಲ್ಲಾದ ಚಂಚಲತೆಯಿಂದಾಗಿ ಪ್ರಸ್ತುತ ವರ್ಷದಲ್ಲಿ ಸಂಸ್ಥೆಯೂ ಸಹಾ ಮಿಶ್ರ ಬೆಳವಣಿಗೆಯನ್ನೇ ನಿರೀಕ್ಷಿಸಲಿದೆ.

ಕೊರೊನಾ ಏಟಿನಿಂದ ಮಧ್ಯಮ, ಸಣ್ಣ ಹಾಗೂ ಸೂಕ್ಷ್ಮ ಘಟಕಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಪರಿಹಾರ ಹಾಗೂ ರಿಯಾಯಿತಿಗಳನ್ನು ನೀಡುವ ದಿಕ್ಕಿನಲ್ಲಿ ಕಾರ್ಯಗತವಾಗಿವೆ.

2020-21ರ ಆರ್ಥಿಕ ವರ್ಷದಲ್ಲಿ ಸಂಸ್ಥೆಯು ತಲಾ ರೂ. 600 ಕೋಟಿಗಳ ಮಂಜೂರಾತಿ ಗುರಿಯನ್ನು ಹೊಂದಿದ್ದು ಕರ್ನಾಟಕ ಸರ್ಕಾರದ ಬಡ್ಡಿ ಸಹಾಯ ಧನ ಯೋಜನೆಗಳ ಯಶಸ್ವೀ ಅನುಷ್ಠಾನದೊಂದಿಗೆ ಸಮಾಜದ ವಿವಿಧ ವರ್ಗಗಳಿಂದ ಸ್ಥಾಪಿಸಲ್ಪಡುವ ಎಂ.ಎಸ್.ಎಂ.ಇಗಳಿಗೆ ನೆರವು ನೀಡುವ ಕಡೆಗೆ ಹೆಚ್ಚಿನ ಗಮನ ಕೇಂದ್ರೀಕರಿಸಲಿದೆ ಎಂದವರು ಹೇಳಿದ್ದಾರೆ.

## ಜಿ.ಎಂ.ಐ.ಟಿ ಕಾಲೇಜಿಗೆ ಅತ್ಯುತ್ತಮ ಶ್ರೇಣಿ

ದಾವಣಗೆರೆ, ಸೆ.3- ದಿ ವೀಕ್ ಪತ್ರಿಕೆಯು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಗುಣಾತ್ಮಕ ಹಾಗೂ ಸಾಮರ್ಥ್ಯಗಳ ಮಾನದಂಡ ಅಳೆಯಲು ಪ್ರತಿ ವರ್ಷ ಭಾರತದಾದ್ಯಂತ ಸಮೀಕ್ಷೆ ನಡೆಸುತ್ತಿದ್ದು, ಪ್ರಸ್ತುತ 2020ರ ಸಮೀಕ್ಷೆಯ ಫಲಿತಾಂಶ ಪ್ರಕಟಿಸಿದ್ದು, ದಾವಣಗೆರೆ ಜಿ.ಎಂ.ಐ.ಟಿ. ಕಾಲೇಜಿಗೆ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಶ್ರೇಣಿ ಲಭಿಸಿದೆ.

ಭಾರತದಲ್ಲಿರುವ ಎಲ್ಲ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸಮೀಕ್ಷೆಯಲ್ಲಿ ಜಿ.ಎಂ.ಐ.ಟಿ.ಗೆ 136ನೇ ಸ್ಥಾನ, ದಕ್ಷಿಣ ಭಾರತಕ್ಕೆ 78ನೇ ಸ್ಥಾನ ಹಾಗೂ ಕರ್ನಾಟಕಕ್ಕೆ 21ನೇ ಸ್ಥಾನ ಲಭಿಸಿದೆ. ಉನ್ನತ ಶ್ರೇಣಿಗಳು ಬರಲು ಕಾರಣರಾದ ಕಾಲೇಜಿನ ಎಲ್ಲ ಸಿಬ್ಬಂದಿ ವರ್ಗಕ್ಕೆ, ಜಿ.ಎಂ.ಐ.ಟಿ. ಚೇರ್‌ಮನ್ ಜಿ.ಎಂ. ಲಿಂಗರಾಜು, ಆಡಳಿತಾಧಿಕಾರಿ ವೈ.ಯು. ಸುಭಾಷ್ಚಂದ್ರ ಹಾಗೂ ಕಾಲೇಜು ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಅಭಿನಂದಿಸಿ, ಹರ್ಷ ವ್ಯಕ್ತ ಪಡಿಸಿದ್ದಾರೆ.

## ಎನ್.ಪಿ.ಎ. ಘೋಷಣೆಗೆ ಸುಪ್ರೀಂ ಕೋರ್ಟ್ ತಡೆ

(1ನೇ ಪುಟದಿಂದ) ನಿಲುವನ್ನು ಪರಿಗಣಿಸಿದ ನಂತರ ನ್ಯಾಯಾಲಯ ಆದೇಶ ಹೊರಡಿಸಿದೆ. ಆದೇಶ ಹೊರಡಿಸಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಆರ್.ಎಸ್. ರೆಡ್ಡಿ ಹಾಗೂ ಎಂ.ಆರ್. ಷಾ ಅವರಿದ್ದಾರೆ.

ಕೇಂದ್ರ ಸರ್ಕಾರ ಹಾಗೂ ರಿಸರ್ವ್ ಬ್ಯಾಂಕ್ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತಾ, ಬ್ಯಾಂಕಿಂಗ್ ವಲಯ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದೆ. ಕೊರೊನಾ ಕಾರಣದಿಂದಾಗಿ ದೇಶದ ಪ್ರತಿಯೊಂದು ವಲಯ ಒತ್ತಡಕ್ಕೆ ಸಿಲುಕಿದೆ ಎಂದು ಹೇಳಿದರು. ಬಡ್ಡಿ ಮನ್ನಾ ಆರ್ಥಿಕ ಚೇತರಿಕೆಗೆ ಒಳ್ಳೆಯ ಆಯ್ಕೆ ಅಲ್ಲ ಎಂಬುದನ್ನು ವಿಶ್ವದಾದ್ಯಂತ ಒಪ್ಪಿಕೊಳ್ಳಲಾಗಿದೆ ಎಂದೂ ಅವರು ತಿಳಿಸಿದರು. ಅರ್ಜಿದಾರರ ಮನವಿಗಳನ್ನು ಪ್ರಸ್ತಾಪಿಸಿದ ನ್ಯಾಯಾಲಯ, ಬಡ್ಡಿಯ ಮೇಲೆ ಬಡ್ಡಿ ವಿಧಿಸುತ್ತಿರುವುದರ ಬಗ್ಗೆ ನಮ್ಮ ಕಳವಳ ಇದೆ ಎಂದು ಹೇಳಿತು.

## ಎಸ್ಸೆಸ್ಸೆಲ್ಸಿ : ರಚನಾಗೆ ಶೇ. 96



ದಾವಣಗೆರೆ, ಸೆ. 3- ನಗರದ ವಿದ್ಯಾನಗರ ಮಾಗನೂರು ಬಸಪ್ಪ ಪ್ರೌಢಶಾಲೆಯ ವಿದ್ಯಾರ್ಥಿನಿ ಸಿ. ರಚನಾ, 2020ನೇ ಸಾಲಿನಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 96 ಅಂಕ ಪಡೆದಿರುತ್ತಾರೆ. ರಚನಾ ಹೆಚ್.ಸಿ. ಚಂದ್ರಶೇಖರ್ ಮತ್ತು ಶ್ರೀಮತಿ ಚೇತನಾ ದಂಪತಿ ಪುತ್ರಿ.

## ಶ್ರೀ ಗುರುವೇ ಸದ್ಗುರುವೇ...



ಅಕ್ಷರವ ಅಕ್ಕರೆಯಿಂದ ಕಲಿಸಿದವರು
ಅಜ್ಞಾನವ ಜ್ಞಾನದಿಂದ ಕಳೆದವರು
ತಪ್ಪುಗಳನು ತಾಳ್ಮೆಯಿಂದ ತಿದ್ದಿದವರು
ಶಿಸ್ತನ್ನು ಶಿಕ್ಷೆಯಿಂದಲೇ ರೂಪಿಸಿದವರು.

ಬ್ರಹ್ಮನಾಗಿ ಬ್ರಹ್ಮಾಂಡವ ಪರಿಚಯಿಸಿದವರು
ವಿಷ್ಣುವಾಗಿ ಪೋಷಣೆಯ ಮಾಡಿದವರು
ಮಹೇಶ್ವರನಾಗಿ ಮಮತೆಯ ನೀಡಿದವರು
ತ್ರಿಮೂರ್ತಿಗಳ ಪ್ರತಿರೂಪದಿ ಕಂಡವರು.

ಕಪ್ಪು ಹಲಗೆ ಮೇಲೆ ಭವಿಷ್ಯ ಬರೆದವರು
ಬಳಪವ ಹಿಡಿದು ವರ್ಣಗಳ ತಿದ್ದಿದವರು
ಕೊಠಡಿ ಗೋಡೆಗಳ ಮಧ್ಯೆ ದೇವರಾದವರು.
ಕಲಿಸುತ್ತಾ ನಗಿಸುತ್ತಾ ನಮ್ಮ ಸ್ನೇಹಿತರಾದವರು.

ಮಾತೃಭಾಷೆಯ ಮನಮುಟ್ಟುವಂತೆ ಕಲಿಸಿದವರು
ಆಂಗ್ಲಭಾಷೆಯ ಅರ್ಥವಾಗುವಂತೆ ಕಲಿಸಿದವರು
ಹಿಂದಿಭಾಷೆಯ ಹಿಂಜರಿಕೆಯಾಗದಂತೆ ಕಲಿಸಿದವರು
ಅಗಣಿತವಾದ ಗಣಿತವನು ಗೆಲ್ಲುವಂತೆ ಕಲಿಸಿದವರು.


ವಿಜ್ಞಾನವ ಮನೋಜ್ಞವಾಗಿ ಕಲಿಸಿದವರು
ಸಮಾಜವಿಜ್ಞಾನವ ಸರಳವಾಗಿ ಕಲಿಸಿದವರು
ದೈಹಿಕ ಶಿಕ್ಷಣದಿ ಮನೋಸ್ಥೈರ್ಯ ಕಲಿಸಿದವರು
ಸಕಲ ವಿಷಯಗಳ ಮನಮುಟ್ಟುವಂತೆ ಕಲಿಸಿದವರು.

- ಶಿವಮೂರ್ತಿ ಹೆಚ್.,
ಕನ್ನಡ ಶಿಕ್ಷಕರು
ಶ್ರೀ ತರಳಬಾಳು ಜಗದ್ಗುರು ರೆಸಿಡೆನ್ಸಿಯಲ್ ಸ್ಕೂಲ್
ಅನುಭವಮಂಟಪ, ದಾವಣಗೆರೆ.

## ನ್ಯಾಮತಿ ಉಪವಿಭಾಗದಲ್ಲಿ ಇಂದಿನಿಂದ ವಿದ್ಯುತ್ ಇಲ್ಲ

ಬೆಸ್ಕಾಂ ನ್ಯಾಮತಿ ಉಪವಿಭಾಗದ ವ್ಯಾಪ್ತಿಗೆ ಬರುವ 66/11 ಕೆವಿ ನ್ಯಾಮತಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಎಲ್ಲಾ ಫೀಡರ್‌ಗಳ ದೋಷ ಪೂರಿತ ಬಸ್ ಬಾರ್‌ಗಳನ್ನು ಬದಲಾವಣೆ ಮಾಡುವ ಕೆಲಸ ವನ್ನು ಹಮ್ಮಿಕೊಂಡಿದ್ದು, ಸದರಿ ವಿವಿ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಫೀಡರ್‌ಗಳ ಸಂಪರ್ಕವನ್ನು ತಾತ್ಕಾಲಿಕವಾಗಿ ಸಮೀಪದ ಬೇರೆ ವಿವಿ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಆಗುವ ಫೀಡರ್‌ಗಳಿಗೆ ಸಂಪರ್ಕ ನೀಡಲಾಗುವುದು. ಇಂದಿನಿಂದ ಇದೇ ದಿನಾಂಕ 12 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸವಾಗಬಹುದು ಎಂದು ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬಿ.ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

## ಚಂದನಾಗೆ ಎಸ್ಸೆಸ್ಸೆಲ್ಸಿಯಲ್ಲಿ 615 ಅಂಕಗಳು



ಚನ್ನಗಿರಿ, ಸೆ.3- ತಾಲ್ಲೂಕಿನ ನಲ್ಲೂರು ಗ್ರಾಮದ ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಎಲ್.ಎಸ್. ಚಂದನಾ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625 ಕ್ಕೆ 615 ಅಂಕಗಳನ್ನು ಗಳಿಸಿ, ವಿಶಿಷ್ಟ ಸಾಧನೆ ಮಾಡಿದ್ದಾಳೆ. ತಾಲ್ಲೂಕಿನ ಕುಗ್ರಾಮ ಲಿಂಗದಹಳ್ಳಿ ಗ್ರಾಮ ಕೃಷಿ ಕುಟುಂಬದ ಎಲ್.ಬಿ. ಶಿವಕುಮಾರ್ ಮತ್ತು ಎಸ್. ಭಾರತಿ ಅವರ ಮಗಳಾದ ಚಂದನಾ ಕನ್ನಡ 125, ಹಿಂದಿ 100 ಹಾಗೂ ಸಮಾಜ ವಿಜ್ಞಾನದಲ್ಲಿ 100 ಅಂಕಗಳನ್ನು ಗಳಿಸಿದ್ದಾಳೆ.

## ಜೀವದ ಜೊತೆ ಹೊಟ್ಟೆಪಾಡೂ ಮುಖ್ಯ : ಕೇಂದ್ರ ಸರ್ಕಾರ

ನವದೆಹಲಿ, ಸೆ. 3 – ಕೊರೊನಾ ನಡುವೆಯೇ ಹಲವಾರು ಆರ್ಥಿಕ ಚಟುವಟಿಕೆಗಳಿಗೆ ಚಾಲನೆ ನೀಡಿರುವುದನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಜೀವದ ಜೊತೆಗೆ ಹೊಟ್ಟೆಪಾಡೂ ಮುಖ್ಯ ಎಂದು ತಿಳಿಸಿದೆ. ಗುರುವಾರ ಒಂದೇ ದಿನ ದಾಖಲೆಯ 83,883 ಸೋಂಕಿತರು ಪತ್ತೆಯಾಗಿದ್ದಾರೆ. ದೇಶದಲ್ಲಿ ಇದುವರೆಗೂ 38.53 ಲಕ್ಷ ಸೋಂಕಿತರು ಪತ್ತೆಯಾಗಿದ್ದು, 67,376 ಜನ ಮೃತಪಟ್ಟಿದ್ದಾರೆ.

ಕೇಂದ್ರ ಸರ್ಕಾರ ಹಂತ ಹಂತವಾಗಿ ಆರ್ಥಿಕತೆಯ ಹಲವಾರು ಚಟುವಟಿಕೆಗಳಿಗೆ ಚಾಲನೆ ನೀಡುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಇದುವರೆಗೂ ಕೇಂದ್ರ ಸರ್ಕಾರ ನಾಲ್ಕು ಹಂತಗಳಲ್ಲಿ ಅನ್‌ಲಾಕ್ ಕೈಗೊಂಡಿದೆ.

ಭಾರತ ವಿಶ್ವದಲ್ಲೇ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿದೆ. ಈ ಹಿನ್ನೆಲೆಯಲ್ಲಿ ಕೊರೊನಾ ಸೋಂಕಿತರ ಸಂಖ್ಯೆಯನ್ನು ಪರಿಗಣಿಸಬೇಕಿದೆ. ಅಲ್ಲದೇ ನಾವೇನೂ ಹಠಾತ್ತನೆ ಆರ್ಥಿಕತೆಗೆ ಚಾಲನೆ ನೀ ಡಿಲ್ಲ. ಟೆಸ್ಟಿಂಗ್ ಹೆಚ್ಚಳ, ಆಸ್ಪತ್ರೆ ಸೌಲಭ್ಯ ವಿಸ್ತರಣೆ, ಸಮರ್ಪಕ ಐಸಿಯು ಹಾಗೂ ಆಕ್ಸಿಜನ್ ಸೌಲಭ್ಯ ಹೊಂದಿರುವ ಬೆಡ್‌ಗಳನ್ನು ಹೊಂದಿಯೇ ಆರ್ಥಿಕ ಚಟುವಟಿಕೆ ಹೆಚ್ಚಿಸಲಾಗಿದೆ ಎಂದು ಭೂಷಣ್ ಹೇಳಿದ್ದಾರೆ.

## ಸಂಚಾರಿ ಪೊಲೀಸ್‌ನಿಂದ ಲಂಚ ಪಡೆಯುತ್ತಿದ್ದ ಎಎಸ್‌ಐ ಎಸಿಬಿ ವಶಕ್ಕೆ

ಅಹಮದಾಬಾದ್, ಸೆ. 3 – ಪೊಲೀಸ್ ಒಬ್ಬರಿಂದ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಒಬ್ಬರು 5,000 ರೂ. ಲಂಚ ಪಡೆಯುತ್ತಿರುವಾಗ ಭ್ರಷ್ಟಾಚಾರ ವಿರೋಧಿ ದಳದ ಕೈಗೆ ಸಿಕ್ಕಿ ಬಿದ್ದ ಘಟನೆ ನಡೆದಿದೆ.


ಎ.ಎಸ್.ಐ. ಬಲವಂತ್ ಸಿನ್ಹ ಜಡೇಜಾ ಅವರನ್ನು ರಾಜಕೋಟ್‌ನ ನಿಯಂತ್ರಣ ಕೇಂದ್ರದಲ್ಲಿ ನಿಯೋಜಿಸಲಾಗಿತ್ತು. ಅವರು ಸಂಚಾರಿ ಪೊಲೀಸ್ ಪೇದೆಯೊಬ್ಬರಿಂದ ಬುಧವಾರ ಲಂಚ ಪಡೆಯುತ್ತಿದ್ದರು ಎಂದು ಭ್ರಷ್ಟಾಚಾರ ವಿರೋಧಿ ದಳ ತಿಳಿಸಿದೆ. ಲಂಚ ಕೊಡದೇ ಇದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಸಂಚಾರಿ ಪೊಲೀಸ್‌ಗೆ ಜಡೇಜಾ ಬೆದರಿಸಿ ಹಣ ವಸೂಲಿ ಮಾಡಿದ್ದಾಗಿ ಎ.ಸಿ.ಬಿ. ಹೇಳಿದೆ.



# ಇದೋ! ಮುಗಿಸಿತಂದಿಹೆನ್ ನಿಮ್ಮಡಿಗಡಿಗರ್ಪಿಸಲ್ಕೆ ಗುರುವರ್ಯ

**'ಕಾಮ್ ಜ್ಞಾನ್ ನೇ ಕಿಯಾ ಜೋ ಕಾಮ್ ಆಂಧೀ ಕರ್‌ನಾ ಸಕ್ತೀ' :** 'ಬಿರುಗಾಳಿ ಎಸಗದಿಹ ಕಾರ್ಯವನು ಜ್ಞಾನ ತಾನೆಸಗಿಹುದು' ಎಂಬ ಉಕ್ತಿ ಎಂತಹ ವಿಷಮ ಸಮಯದಲ್ಲಿಯೂ ಜಾಗೃತಗೊಳಿಸಬಲ್ಲದು. ಸಾವಧಾನತೆಯೇ ಪರಾಕ್ರಮದ ಉತ್ತಮ ತರಹದ (Discration is the better part of valour) ಅಂಶವನ್ನು ಗಣನೆಗೆ ತರುವಲ್ಲಿ, ಮಾನವನ ಸಾಮರ್ಥ್ಯದ ಮಹಿಮೆಯನ್ನು ಮತ್ತು ಕ್ರಿಯಾಶೀಲತೆಗಳನ್ನು ಅವನ ಜ್ಞಾನ ಸ್ಥಳಗಳಲ್ಲಿ (The great end of life is not action but knowledge) ಮಾತ್ರ ಕಾಣುವ ಸಬಲತೆ, ಕಲ್ಪ ಕಲ್ಪಗಳಿಂದ ಸುತ್ತುತ್ತಿರುವ ಸೂರ್ಯನನುಭವ ಉರಿಯೆಡೆಗೆ ಚಿಟ್ಟೆಯನು ಸೆಳೆವ ಪ್ರೇಮದ ಆಯಸ್ಕಾಂತವೇ ಶಿಕ್ಷಕರದು. ಕಾಡು ಹಳ್ಳಿಯೊಂದರ ಮಣ್ಣಿನ ಮಕ್ಕಳ, ಅವರ ಹಬ್ಬ-ಹರಿದಿನಗಳ, ಅವರ ಒಡನಾಟ, ಅಲ್ಲಿನ ಕಾಡು, ಆ ಕಾಡಿನ ಪ್ರಾಣಿ ಪಕ್ಷಿಗಳ ಸಾಮೀಪ್ಯ ಇವು ಆ ಮಣ್ಣು ಹಡೆದ ಒಡಲಿಗೆ, ಭಾವಾಕೋಶವಾಗಿ ಪರಿಣಮಿಸಿದ ಪರಿಭಾವನೆಯ ಪರಿಜು ಪುತ್ಥಳಿಯೇ ಶಿಕ್ಷಕರು.

ಕರ್ನಾಟಕದ ರಾಜಕೀಯ ಇತಿಹಾಸ ಕ್ರಿ.ಪೂ. 3ನೇ ಶತಮಾನದ ಶಾತವಾಹನರ ಕಾಲದಿಂದ ಆರಂಭವಾದರೂ, ಶೈಕ್ಷಣಿಕ ಇತಿಹಾಸ 4ನೇ ಶತಮಾನದ ಹಿಂದೆ ಜ್ಞಾನಕ್ಕಾಗಿಯೇ ಜೀವನವನ್ನು ಮೀಸಲಾಗಿಟ್ಟಿದ್ದ ವಿದ್ವಜ್ಜನರು, ಸಾಧು-ಸಂತರು ತಮ್ಮ ಗುಡಿಗಳಲ್ಲೋ, ವನಾಂತರ ಪ್ರದೇಶದ ತಮ್ಮ ಆಶ್ರಮಗಳಲ್ಲೋ ಒಲಿದು ಬಂದ ಜ್ಞಾನದಾಹಿಗಳಿಗೆ ಉಚಿತವಾಗಿ ಶಿಕ್ಷಣವೀಯುತ್ತಿದ್ದರು. ಶಿಕ್ಷಣವನ್ನು ಸಾರ್ವತ್ರೀಕರಿಸಿ ಜಾತಿ ಪದ್ಧತಿ, ಮತ, ಲಿಂಗ, ಯಾವ ಭೇದವೂ ಇಲ್ಲದೇ ಎಲ್ಲರಿಗೂ ಜ್ಞಾನವನ್ನು ನೀಡುತ್ತಿದ್ದುದು ಇತಿಹಾಸ ಸಾಕ್ಷಿಯಾಗಿದೆ. ಶಿಕ್ಷಕರು ಅಂದು ಮಬ್ಬಿಗೆ ಸಾಣೆ ಇಟ್ಟು; ಹೃದಯಕ್ಕೆ ವಿಚಾರಧಾರೆಯನ್ನು ಅದು ಎಲ್ಲಿಯೇ ಇರಲಿ, ಯಾರಲ್ಲಿಯೇ ಇರಲಿ, ಕಾಣುವ ವಿಶಾಲ ಗ್ರಾಸವನ್ನು ಗುರುತಿಸುವ ಔದಾರ್ಯವನ್ನು ಹಾಗೂ ಯೋಗ್ಯತೆ, ಸಾಮರ್ಥ್ಯ, ದೌರ್ಬಲ್ಯಗಳನ್ನು ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದು ಪ್ರೀತಿ, ವಿನೋದ, ಸಹಾಯ, ಸೌಜನ್ಯಗಳಿಂದ ಒಲಿಸಿಕೊಂಡು ಬೋಧಿಸುವುದರಲ್ಲಿ ಶಿಕ್ಷಕರು ಶ್ರಮಿಕರಾಗಿದ್ದರು.



ಶಿಕ್ಷಕರು ಸಮಾಜದ ತರ್ಕ, ವ್ಯಾಜ್ಯ, ಪ್ರತಿಭಟನೆಗಳಲ್ಲಿ ಪ್ರವೇಶಿಸಿದರೂ ಪ್ರಶಾಂತ ಮನಸ್ಕರಾಗಿ, ಸತ್ಸಂಗ, ಆತ್ಮ ವಿಮರ್ಶೆ, ಅಂತರ್ಮುಖಗಳಿಂದ ಸುಸಂಸ್ಕೃತ (Introvert Culture) ರಾಗಿ, ಸಾಧು ಗಳಂತಿದ್ದು, ತಲಸ್ಪರ್ಶಿಯಾದ ಪಾಂಡಿತ್ಯಕ್ಕೆ ಸಾಕ್ಷಿಯಾ ದಂತೆ, ಸಾಕಾರ ಮೂರ್ತಿಗಳಾಗಿ, ಜಂಗಮಿಗಳಾಗಿ, ಕ್ಲುಪ್ತ ಕಾಲದಲ್ಲಿ ಉತ್ಸವ ಭರಿತರಾಗಿ, ನಿರ್ಬಂಧದ ಸಂಕೋಲೆಗಳಿಂದ ಕಳಚಿಕೊಂಡು, ಸರಳವಾಗಿ, ಔಚಿತ್ಯಗಳನ್ನರಿತುಕೊಂಡು ಜನನ-ಮರಣ ಯಮಳಗಳನ್ನು ಮೆಟ್ಟಿ ನಿಂತು, ಹೂವು-ಹೂವೇ, ಎಲೆಯೋ!-ಸೇರಿ, ಬೆಳಸಿ, ಪರಿಮಳ ತೂಕವನ್ನು ಮೋಡ-ಮೋಡವಾಗಿ; ತುಂಡು-ತುಂಡಾಗಿ ಗಾಳಿಗೆ ಹೋಗದಂತೆ ಸಮಸ್ಕ ಕ್ರಮದಲ್ಲಿ, ಶಿಕ್ಷಣ ಕ್ಷೇತ್ರದ ಅತ್ಯುತ್ಸಾಹ ಉಬ್ಬಿನಲ್ಲಿ ಮನೋವೃತ್ತಿಯನ್ನು ಬೆಳೆಸಿಕೊಂಡವರು.

ಶಿಕ್ಷಕರು ಶಿಷ್ಯನನ್ನು ಕುರಿತು ಏಳು! ಮನಸ್ಸನ್ನು ಗಟ್ಟಿ ಮಾಡಿಕೊಂಡು ಮುಂದಿನ ಕೆಲಸದಲ್ಲಿ ಪ್ರವೃತ್ತ ನಾಗು; ಯಾರ ಮನಸ್ಸನ್ನೂ ನೋಯಿಸಬಾರದು; ಎಲ್ಲರನ್ನೂ ಸಂತೋಷಪಡಿಸಬೇಕು ಎನ್ನುವುದು ಜೀವನದ ಮುಖ್ಯ ಸೂತ್ರವಾಗಬೇಕು; ಇದರ ಜೊತೆಗೆ ಗೌರವ, ಭಕ್ತಿ, ನಮ್ರತೆ, ವಿಶ್ವಾಸ, ಆದರ, ಸ್ನೇಹ, ವಾತ್ಸಲ್ಯ, ಮಮತೆ ಇವುಗಳನ್ನು ಸಂದರ್ಭ ಕ್ಕನುಗುಣವಾಗಿ ಸಾಧ್ಯವಾದಷ್ಟು ಹೆಚ್ಚು ಪ್ರಮಾಣದಲ್ಲಿ ಪ್ರಾಮಾಣಿಕವಾಗಿ ನಡತೆಯನ್ನು ನಿರ್ಮಿಸಿಕೊಂಡು, ಆತ್ಮೀಯತೆಯನ್ನು ಸಂಪಾದಿಸಬೇಕೆಂದು ತಿದ್ದಿ-ತೀಡಿ-ತೇದು ತೊಡವಾಗುವಂತೆ ಹೇಳುವ ಸ್ವಾತಂತ್ರ್ಯ ಇವರಿಗೆ ಮಾತ್ರ ಸಾಧ್ಯ. ಅನೇಕ ಶಿಕ್ಷಕರಿಗೆ ದುಷ್ಟ ನಿಗ್ರಹದಲ್ಲಿ ನಂಬಿಕೆ ಇರುವುದಿಲ್ಲ. 'ದುಷ್ಟಾನುಗ್ರಹ; ಶಿಷ್ಟಗೌರವ' ಅವರ ವ್ಯಕ್ತಿತ್ವ ಸಂವಿಧಾನಕ್ಕೆ ಮೂಲ ಮಂತ್ರವಾಗುತ್ತದೆ. ಸ್ನೇಹ-ಸಾಧುತ್ವ ಹೊಂದಿಕೆಗಳಿಂದ ಸರಿಹೋದರೆ ಹೋಗಲಿ, ಇಲ್ಲದಿದ್ದರೆ ಅಪ್ರಿಯವಾದ ರೀತಿಯಲ್ಲಿ ವರ್ತಿಸಿ, ದುಷ್ಟರನ್ನು ತಿದ್ದುವುದು ಅನಾವಶ್ಯಕವೆಂದು ತಿಳಿದವರು. ಕಾಲಿಗೆ ಮುಳ್ಳು ಚುಚ್ಚಿದರೆ ಅದು ಹಾಗೆಯೇ ಕೊಳೆತು, ಕೊರಗಿ ಹೋಗಲಿ, ಅದನ್ನು ಸೂಜಿಯಿಂದ ಚುಚ್ಚಿ ತೆಗೆದು ಕಾಲು ನೋಯಿಸಿಕೊಳ್ಳುವುದು ಸರಿಯಲ್ಲವೆಂದು ಹೇಳುವ ಪ್ರವೃತ್ತಿಯವರು. ಹಲವರಲ್ಲಿ ಏಕತೆ, (Units of multicity)ಯನ್ನು, ಏಕತೆಯಲ್ಲಿ ಹಲವತೆ (Multicity of unit)ಯನ್ನು ಮನೋಹರ ಬಿಳುಪು ಬಣ್ಣಗಳಿಂದ ಸುತ್ತುವರಿದ ವಿಭಾವಗಳ ಕ್ರಿಯಾ ವಿಧಾನವನ್ನು ನಿಷ್ಪಕ್ಷಪಾತ (Disinterestedness) ವಾಗಿ ಸ್ಪಷ್ಟಗೊಳಿಸುವಲ್ಲಿ ಪ್ರಮಥರು.

ಶಿಕ್ಷಕ ಬುದ್ದಿಜೀವಿ. ಈ ಜಗತ್ತಿನ ಮಿಕ್ಕೆಲ್ಲಾ ಜೀವಿಗಳಿಂದ ಈತನನ್ನು ಪ್ರತ್ಯೇಕಗೊಳಿಸಿರುವುದು ಅವನ ಬುದ್ದಿ-ಸತ್ಯ, ಬೌದ್ಧಿಕ ಶಕ್ತಿ, ತನ್ನ ಬುದ್ದಿ ಶಾಕ್ತತೆಯಿಂದ ಇಡೀ ಮನುಕುಲವನ್ನು ನೈತಿಕ ಸ್ಥಲದ ಮೇಲೆ ರೂಪಿಸುವ ಪ್ರಗಲ್ಭನೆಂಬ ಸಾಮರ್ಥ್ಯ (Competence) ದಿಂದ ಹಾಗೂ ಅಂತರ್‌ವಿನಿಮಯಕ್ಷಮತೆ (interchangeability) ವ್ಯಕ್ತಿತ್ವದ ವಿಶಿಷ್ಟತೆ (Personality in specelization) ಮತ್ತು ಸಾಂಸ್ಕೃತಿಕ ಪ್ರಸರಣ (Cultral Transmission) ರಕ್ತಗತವಾಗಿ, ಅನುವಂಶೀಯತೀಕರಣದಿಂದ ಸಮಾಜದ, ಸಂಸ್ಕೃತಿಯ ಹಾಗೂ ಮನುಷ್ಯನ ಸಕಲ ಚಿಂತನೆಗೂ, ವ್ಯವಹಾರಕ್ಕೂ ಅಗತ್ಯವಾದ ಭಾಗವಾಗಿರುತ್ತಾನೆ.

ಶಿಕ್ಷಕನಲ್ಲಿರುವ ಸ್ಮರಣೆ, ತಿಳುವಳಿಕೆಯ ಇರಾದೆ, ಸೂಕ್ತವಾದ ಉತ್ತರವನ್ನು ಕಂಡುಕೊಳ್ಳುವ ಪ್ರವೃತ್ತಿ ಮತ್ತು ಪರಸ್ಪರ ಸಂಬಂಧ ಮಾಹಿತಿಗಳನ್ನು ವಿಂಗಡಿಸಿ, ಅವುಗಳನ್ನು ವಿಶ್ಲೇಷಿಸಿ ಹೊಸ ವಿಚಾರಗಳಿಗೆ ನಾಂದಿ ಹಾಡುವ ' ಚಿಲಿಮಿಲಿಗ ಸತ್ಯಸ್ಯಸತ್ಯ.

ಶಿಕ್ಷಕನೊಬ್ಬ ಅನುಗಾಲ ಪ್ರವಾದಿ (Teacher is always prophet) ಎಂಬ ಹೆಗ್ಗಳಿಕೆಗೆ ಪಾತ್ರನಾದ್ದರಿಂದ ಪ್ರತಿವರ್ಷ ಸೆಪ್ಟಂಬರ್ 5ನೇ ತಾರೀಖು ರಾಷ್ಟ್ರದಾದ್ಯಂತ 'ಶಿಕ್ಷಕರ ದಿನ'ವೆಂದು ಆಚರಿಸುತ್ತಿರುವುದು ಇದಕ್ಕೆ ಸಾಕ್ಷಿಭೂತವಾಗಿದೆ.

ಗಮನಾರ್ಹ ವಿಷಯವೇನೆಂದರೆ, ಡಾ. ಸರ್ವಪಲ್ಲಿ ರಾಧಕೃಷ್ಣನ್‌ರವರ ಜನ್ಮ ದಿನವನ್ನೇ 'ಶಿಕ್ಷಕರ ದಿನ'ವೆಂದು ಆಚರಿಸುವಲ್ಲಿ ಸ್ಪಷ್ಟತೆ ತೋರುತ್ತಿಲ್ಲ. ಶ್ರೀಯುತರ ಜನ್ಮದಿನ 05-09-1888 ಎಂದಿರುವುದರಲ್ಲಿ ಇವರ ಮಗನಾದ ಡಾ. ಸರ್ವಪಲ್ಲಿ ಗೋಪಾಲ್‌ರವರು (Radhakrishnan-A Bigrophy, Oxford University, Press 1969, P-10) 20-09-1887 ಜನ್ಮದಿನ ವೆಂದು ದಾಖಲಿಸಿದ್ದಾರೆ. ಜೊತೆಗೆ ಅಕ್ಟೋಬರ್ 5 ಅಂತರರಾಷ್ಟ್ರೀಯ ಶಿಕ್ಷಕರ ದಿನವೆಂದು ಯುನೆಸ್ಕೋ ಘೋಷಿಸಿರುವುದನ್ನು ಗಮನಿಸಬೇಕಾಗಿದೆ. ಆದ್ದರಿಂದ 'ಶಿಕ್ಷಕರ ದಿನಾಚರಣೆ'ಯನ್ನು ಸಾಂಪ್ರದಾಯಿಕ ಉತ್ಸವದ ರೀತಿಯಲ್ಲಿ ಸೆಪ್ಟೆಂಬರ್ 5,ರಂದು ಆಚರಿಸುವುದು ಈಗಿರುವಂತೆಯೇ ಮುಂದುವರೆಸಿಕೊಂಡು ಸಾಗುವುದು ಸರಿಯೇ ಎನ್ನುವುದನ್ನು ವಿಚಾರಿಸಬೇಕಾಗಿದೆ.

"ವಿದ್ಯಯ ಅಮೃತಮಶ್ನುತೇ"– ವಿದ್ಯೆಯಿಂದ ವ್ಯಕ್ತಿಯು ಅಮರತ್ವವನ್ನು ಸಾಧಿಸಬಲ್ಲ. ಶಿಕ್ಷಕರ ದಿನಾಚರಣೆಯ ಮೂಲ ಆಶಯ ಆಚರಣೆಯಲ್ಲ; ಅನುಸರಣೆ-ಅನುರಣನೆಯಲ್ಲಿದೆ. ಶಿಕ್ಷಕರ ದಿನಾಚರಣೆ-ಆಚಾರಾಧಾರಿತವಲ್ಲ; ವಿಚಾರಾಧಾರಿತ ದಿನಾಚರಣೆಯಾಗಬೇಕಾಗಿದೆ

**- ಪ್ರೊ. ಬಾತಿ ಬಸವರಾಜ್**
ಶೈಕ್ಷಣಿಕ ಸಲಹೆಗಾರರು,
ದವನ ಕಾಲೇಜು, ದಾವಣಗೆರೆ. 8884527130

## ದೆಹಲಿಯ ಹಳಿಗಳ ಪಕ್ಕ ಇರುವ 48 ಸಾವಿರ ಕೊಳಚೆ ನಿವಾಸಿಗಳ ತೆರವಿಗೆ ಆದೇಶ

ನವದೆಹಲಿ, ಸೆ. 3 – ರಾಜಧಾನಿ ದೆಹಲಿಯಲ್ಲಿರುವ 140 ಕಿ.ಮೀ. ಉದ್ದದ ರೈಲು ಮಾರ್ಗಗಳ ಪಕ್ಕ ನೆಲೆಸಿರುವ 48 ಸಾವಿರ ಕೊಳಚೆ ನಿವಾಸಿಗಳನ್ನು ಮೂರು ತಿಂಗಳಲ್ಲಿ ತೆರವುಗೊಳಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಕೊಳಚೆ ನಿವಾಸಿಗಳನ್ನು ಹಂತ ಹಂತವಾಗಿ ತೆರವುಗೊಳಿಸುವಂತೆ ಆದೇಶಿಸಿರುವ ನ್ಯಾಯಾಲಯ, ಈ ಆದೇಶ ಜಾರಿಗೆ ತರುವಾಗ ಯಾವುದೇ ರಾಜಕೀಯ ಮಧ್ಯ ಪ್ರವೇಶ ಇರಬಾರದು ಎಂದು ತಿಳಿಸಿದೆ. ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಯಾವುದೇ ನ್ಯಾಯಾಲಯ ತಡೆಯಾಜ್ಞೆ ಹೊರಡಿಸಬಾರದು ಎಂದು ನ್ಯಾಯಮೂರ್ತಿಗಳಾದ ಅರುಣ್ ಮಿಶ್ರ, ಬಿ.ಆರ್. ಗವಾಯಿ ಹಾಗೂ ಕೃಷ್ಣ ಮುರಾರಿ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

## ಪ್ರಣಬ್ ಮುಖರ್ಜಿ ಅವರಿಗೆ ಸಂತಾಪ




ರಾಣೇಬೆನ್ನೂರು, ಸೆ. 3 - ತಾಲ್ಲೂಕಿನ ಅರೆಮಲ್ಲಾಪುರದ ಶ್ರೀ ಶರಣ ಬಸವೇಶ್ವರ ಮಠದಲ್ಲಿ ಪೀಠಾಧಿಪತಿ ಶ್ರೀ ಪ್ರಣವಾನಂದರಾಮ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆಯೊಂದಿಗೆ ಸಂತಾಪ ಸೂಚಿಸಲಾಯಿತು.

## ಮದುವೆಯಾಗಲು ಖಾಸಗಿ ವಿವರ ಬಹಿರಂಗ ಸಲ್ಲದು

### ವಿಶೇಷ ವಿವಾಹ ಕಾಯ್ದೆ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ

ನವದೆಹಲಿ, ಸೆ. 3 – ವಿಶೇಷ ವಿವಾಹ ಕಾಯ್ದೆಯಡಿ ಮದುವೆಯಾಗಲು ಬಯಸುವವರು ತಮ್ಮ ಖಾಸಗಿ ವಿವರಗಳನ್ನು ಸಾರ್ವಜನಿಕರಿಗೆ ಬಹಿರಂಗ ಪಡಿಸಬೇಕು ಎಂಬ ನಿಯಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ.

ಖಾಸಗಿ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವುದು ಮದುವೆ ಹಕ್ಕಿನ ಮೇಲೆ ಕರಾಳ ಪರಿಣಾಮ ಬೀರುತ್ತದೆ. ಮದುವೆಯಾಗುವ ಸಲುವಾಗಿ ಖಾಸಗಿತನದ ಹಕ್ಕು ಬಿಟ್ಟುಕೊಡಿ ಎಂದು ಹೇಳಿದಂತಾಗುತ್ತದೆ. ಇದು ಘನತೆ ಹಾಗೂ ಮದುವೆ ಹಕ್ಕಿಗೆ ವಿರುದ್ಧವಾಗಿದೆ ಎಂದು ಕೇರಳದ ಕಾನೂನು ವಿದ್ಯಾರ್ಥಿನಿ ನಂದಿನಿ ಪ್ರವೀಣ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದಾರೆ.

ವಿಶೇಷ ವಿವಾಹ ಕಾಯ್ದೆಯಡಿ ಮದುವೆ ಯಾಗಲು ಬಯಸುವವರು 30 ದಿನಗಳ ಮುಂಚೆ ತಮ್ಮ ಖಾಸಗಿ ವಿವರಗಳನ್ನು ಸಾರ್ವಜನಿಕರ ಪರಿಶೀಲನೆಗಾಗಿ ಪ್ರಕಟಿಸಬೇಕಿದೆ. ಇದಕ್ಕೆ ಯಾರು ಬೇಕಾದರೂ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಈ ಸಂದರ್ಭದಲ್ಲಿ ಮದುವೆ ಅಧಿಕಾರಿ ಆಕ್ಷೇಪಣೆಗಳ ಬಗ್ಗೆ ತನಿಖೆ ನಡೆಸಬಹುದಾಗಿದೆ ಎಂದು ಅರ್ಜಿದಾರರು ಹೇಳಿದ್ದಾರೆ.



ಈ ರೀತಿಯ ನಿಯಮಗಳು ಹಿಂದೂ ವಿವಾಹ ಕಾಯ್ದೆಯಲ್ಲಿ ಇಲ್ಲ. ಸಾಂಪ್ರದಾಯಿಕ ಇಸ್ಲಾಮ್ ಕಾನೂನಿನಲ್ಲೂ ಇಲ್ಲ. ಹೀಗಿರುವಾಗ ವಿಶೇಷ ವಿವಾಹ ಕಾಯ್ದೆಯಡಿ ಪಕ್ಷಪಾತ ಮಾಡುವುದು ಸಮಾನತೆ ಹಕ್ಕಿನ ಉಲ್ಲಂಘನೆ ಎಂದು ಅರ್ಜಿದಾರರು ಹೇಳಿದ್ದಾರೆ.

ಕಾಯ್ದೆಯ ಪ್ರಕಾರ ಮದುವೆಯಾಗಲು ಬಯಸುವವರು ತಮ್ಮ ಹೆಸರು, ಜನ್ಮ ದಿನಾಂಕ, ವಯಸ್ಸು, ವೃತ್ತಿ, ಪೋಷಕರ ಹೆಸರು ಹಾಗೂ ವಿವರ, ವಿಳಾಸ, ಪಿನ್ ಕೋಡ್, ಗುರುತಿನ ಮಾಹಿತಿ, ಫೋನ್ ಸಂಖ್ಯೆ ಇತ್ಯಾದಿ ಬಹಿರಂಗ ವಾಗಿ ಪ್ರಕಟಿಸ ಬೇಕಿದೆ. ಇದು ಕಾಯ್ದೆಯ ವಿಚಿತ್ರ ಅಗತ್ಯವಾಗಿದೆ ಎಂದು ಅರ್ಜಿದಾರರು ತಿಳಿಸಿದ್ದಾರೆ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 03.09.2020ರಂದು ನಿಧನರಾದ ಬಿ. ಚಿತ್ತಾನಹಳ್ಳಿಯ
ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್ ಮಾಲೀಕರಾದ

**ಶ್ರೀ ದೊಡ್ಡಗೌಡ್ರು ಕೆ.ಜಿ. ಪರಮೇಶ್ವರಗೌಡ್ರು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು
ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು
ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಕೆ.ಜಿ.ಕೆ. ಕರುಣಾಕರ್
✦ ಕೆ.ಜಿ.ಕೆ. ಚಿದಾನಂದ್ ✦ ಕೆ.ಜಿ.ಕೆ. ರಾಜಣ್ಣ
✦ ಉಮೇಶ್ ಎನ್. ಪಾಟೀಲ್
ನಿವೃತ್ತ ಕಾರ್ಯಪಾಲಕ ಅಭಿಯಂತರರು, ಕೆಆರ್‌ಐಡಿಎಲ್
✦ ಮುದೇಗೌಡ್ರು ಗಿರೀಶ್ ✦ ಆಲೂರು ಜ್ಯೋತಿರ್ಲಿಂಗ
✦ ಹೆಚ್.ಜಿ. ಬಸವರಾಜ್ (ಪುಟ್ಟು)
✦ ಎಬಿಸಿ ಚಂದ್ರಣ್ಣ ✦ ಬೇತೂರು ಬಿ. ಪ್ರಭಣ್ಣ
✦ ಮಾಳಿಗಿ ಕೊಟ್ರೇಶ್ ✦ ಡಾ. ಮಧುಚಂದ್ರ
✦ ಪ್ರವೀಣ್ ಜರೀಕಟ್ಟೆ ✦ ರಾಜು ರಾಜು ಏಜೆನ್ಸಿ
✦ ಶಿವಣ್ಣ ಕಲ್ಪನಹಳ್ಳಿ ✦ ಕಂಚಿಕೆರೆ ಪ್ರಸಾದ್
✦ ಬಿ.ಜಿ. ಪ್ರಸಾದ್ (ಗೌಡ್ರು) ✦ ಎಸ್.ಟಿ.ಪಿ. ತಿಪ್ಪಣ್ಣ

## ಶಿರಮನಳ್ಳಿಯಲ್ಲಿ ಗಾಂಜಾ : ಬಂಧನ

ದಾವಣಗೆರೆ, ಸೆ.3- ಶಿರಮಗೊಂಡನಹಳ್ಳಿಯ ಸಾರ್ವಜನಿಕ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಲ್ಲಿ ಮೂವರನ್ನು ಬಂಧಿಸಿರುವ ಪೊಲೀಸರು, ಸುಮಾರು 9,500 ರೂ. ಮೌಲ್ಯದ 920 ಗ್ರಾಂ ಗಾಂಜಾ ಸೊಪ್ಪು ಹಾಗೂ 1,400 ನಗದು ವಶಪಡಿಸಿಕೊಂಡಿದ್ದಾರೆ.

ಸ್ಥಳೀಯ ಜಯನಗರದ ಶಾರೂಕ್ ಖಾನ್, ಭದ್ರಾವತಿಯ ಮುಜೀಬುಲ್ಲಾ ಷರೀಫ್ ಅಲಿಯಾಸ್ ಬಾಬಾ, ಆಜಾದ್ ನಗರದ ಮುಬಾರಕ್ ಖಾನ್ ಬಂಧಿತರು. ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಮುಸ್ತಾಕ್ ಅಹಮ್ಮದ್ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿದ್ದಾರೆ.

## ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಜನನ : 31.08.1976
ಮರಣ : 04.09.2016

ಮನವೆಂಬ ಮಂದಿರದಲ್ಲಿ ಕನಸೆಂಬ ಸಾಗರದ ನೆನಪೆಂಬ ಅಲೆಗಳಲ್ಲಿ
ಚಿರಕಾಲ ಮಿನುಗುತ್ತಿರುವ...

**ಶ್ರೀ ಚಿಕ್ಕನಳ್ಳೇರ ಎಸ್. ನಟರಾಜ್**

ನೀವು ನಮ್ಮನ್ನು ಅಗಲಿ ನಾಲ್ಕು ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿ ಜೀವನ ನಡೆಸುತ್ತಿರುವ,
ಶ್ರೀಮತಿ ಸುನಂದಮ್ಮ ಹೆಚ್.ಜಿ. ಶಿವಮೂರ್ತೆಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು
ಮೃತರ ಧರ್ಮಪತ್ನಿ ಶ್ರೀಮತಿ ಹೆಚ್.ಎನ್. ರೂಪಾ
ಮಕ್ಕಳಾದ : ನಿಶ್ಚಿತಾ ಎನ್. ಮತ್ತು ಮಾನಸಿ ಎನ್.
ಹಾಗೂ ಚಿಕ್ಕನಳ್ಳೇರ ವಂಶಸ್ಥರು, ಹೆಚ್. ಕಲಪನಹಳ್ಳಿ.

## ಲಾಲು ಭೇಟಿ ಮಾಡಿದ ಶಾಸಕಿಗೆ ಕ್ವಾರಂಟೈನ್

ರಾಂಚಿ/ಪಾಟ್ನಾ, ಸೆ. 3 – ಜೈಲಿನಲ್ಲಿರುವ ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ಭೇಟಿ ಮಾಡಲು ತೆರಳಿದ್ದ ಪಕ್ಷದ ಶಾಸಕಿ ಸಮತಾ ದೇವಿ ಅವರನ್ನು ರಾಂಚಿಯಲ್ಲಿ ಕ್ವಾರಂಟೈನ್‌ನಲ್ಲಿರಿಸುವುದಕ್ಕೆ ಆಕ್ಷೇಪಿಸಿರುವ ಜೆಡಿ (ಯು), ಶಾಸಕಿ ದಲಿತೆಯಾಗಿರುವ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆರೋಪಿಸಿದೆ. ಆರ್.ಜೆ.ಡಿ. ಅಧ್ಯಕ್ಷ ಲಾಲು ಪುತ್ರ ತೇಜ್ ಪ್ರತಾಪ್ ಯಾದವ್ ಇತ್ತೀಚೆಗೆ ತಂದೆಯನ್ನು ಭೇಟಿ ಮಾಡಿದ್ದರು. ಅವರನ್ನು ಏಕೆ ಕ್ವಾರಂಟೈನ್‌ಗೆ ಒಳಪಡಿಸಲಿಲ್ಲ? ಎಂದು ಹೆಚ್.ಎಂ.ಎಂ.(ಎಸ್) ನಾಯಕ ಜಿತನ್ ರಾಮ್ ಮಾಂಝಿ ಪ್ರಶ್ನಿಸಿದ್ದಾರೆ.

ಆರೋಪಗಳನ್ನು ತಳ್ಳಿ ಹಾಕಿರುವ ಆರ್.ಜೆ.ಡಿ., ಎನ್.ಡಿ.ಎ. ನಾಯಕರಿಗೆ ಹಗಲೂ ರಾತ್ರಿ ಲಾಲು ಪ್ರಸಾದ್ ಚಿಂತೆ ಕಾಡುತ್ತಿದೆ ಎಂದು ಹೇಳಿದೆ.

ಬರಾಚಟ್ಟಿ ಕ್ಷೇತ್ರದ ಶಾಸಕಿಯಾಗಿರುವ ಸಮತಾ ದೇವಿ ಅವರಷ್ಟೇ ಅಲ್ಲದೇ, ಓರ್ವ ಸಹಚರ ಹಾಗೂ ಇಬ್ಬರು ಭದ್ರತಾ ಸಿಬ್ಬಂದಿಯನ್ನೂ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ. ಯಾವುದೇ ಮಾಹಿತಿ ನೀಡದೇ ಇವರು ಲಾಲು ಭೇಟಿ ಮಾಡಲು ತೆರಳಿದ್ದರು ಎಂದು ಜಾರ್ಖಂಡ್ ಅಧಿಕಾರಿಗಳು ಹೇಳಿದ್ದಾರೆ. ಬಿಹಾರದ ಶಾಸಕಿಯನ್ನು ಈಗ ಜಾರ್ಖಂಡ್‌ನ ರಾಜಧಾನಿಯಲ್ಲಿರುವ ಅತಿಥಿ ಗೃಹದಲ್ಲಿ ಕ್ವಾರಂಟೈನ್‌ನಲ್ಲಿ ಇರಿಸಲಾಗಿದೆ.

## ದಾವಣಗೆರೆ ವಿವಿ ಪ್ರವೇಶಾತಿಗೆ ಪೋಸ್ಟರ್




ದಾವಣಗೆರೆ, ಸೆ.3- ಕರ್ನಾಟಕ ರಾಜ್ಯ ಮುಕ್ತ ವಿದ್ಯಾನಿಲಯದ ದಾವಣಗೆರೆ ಪ್ರಾದೇಶಿಕ ಕೇಂದ್ರದ 2020-21ನೇ ಸಾಲಿನ ಪ್ರವೇಶಾತಿ ಪೋಸ್ಟರನ್ನು ಇಂದು ಮೇಯರ್ ಅಜಯ್ ಕುಮಾರ್ ಮೇಯರ್ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಟಿ. ವೀರೇಶ್, ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಸನ್ನ ಕುಮಾರ್, ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ ಗೋಪಿ ನಾಯಕ್ ಹಾಗೂ ಪ್ರಾದೇಶಿಕ ನಿರ್ದೇಶಕ ಡಾ. ಸುಧಾಕರ್ ಹೊಸಳ್ಳಿ ಮತ್ತು ಇತರರು ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ 222 ಪಾಸಿಟಿವ್, 3 ಸಾವು

**(3ನೇ ಪುಟದಿಂದ)** ದಾವಣಗೆರೆ ತಾಲ್ಲೂಕಿನಲ್ಲಿ 118, ಹರಿಹರ 38, ಜಗಳೂರು 10, ಚನ್ನಗಿರಿ 24, ಹೊನ್ನಾಳಿ 22 ಹಾಗೂ ಹೊರ ಜಿಲ್ಲೆಯ 10 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ದಾವಣಗೆರೆ ಕೆಟಿಜೆ ನಗರದ 45 ವರ್ಷದ ಪುರುಷ, ಅಣಜಿ ಗ್ರಾಮದ 75ರ ವೃದ್ಧ, ಹರಿಹರದ ಕಡ್ಲೇಗೊಂದಿ 70 ವರ್ಷದ ವೃದ್ಧೆ ಕೋವಿಡ್ ಸೋಂಕಿನಿಂದ ಮೃತಪಟ್ಟಿದ್ದಾರೆ.

## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 3-9-2020ರಂದು ನಿಧನರಾದ
ನಂದಿ ಸ್ಟೀಲ್ಸ್ & ಸಿಮೆಂಟ್ ಮಾಲೀಕರು, ನಮ್ಮ ಸಂಘದ ಅಧ್ಯಕ್ಷರು, ಆತ್ಮೀಯರಾಗಿದ್ದ

**ಶ್ರೀ ಬಿ.ಪಿ.ಮಾದೇವ್**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ
ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ
ಎಂದು ಪ್ರಾರ್ಥಿಸುತ್ತೇವೆ.

**ದಾವಣಗೆರೆ ಜಿಲ್ಲಾ ಕಬ್ಬಿಣ ಮತ್ತು ಉಕ್ಕು ಹಾಗೂ ಸಿಮೆಂಟ್ ವರ್ತಕರ ಸಂಘ (ರಿ) ದಾವಣಗೆರೆ.**

## 10ನೇ ವರ್ಷದ ಪುಣ್ಯಸ್ಮರಣೆ



ದಿ|| ಸಣ್ಣಗೌಡ್ರ ದ್ಯಾಮಪ್ಪನವರು
ಶಾಮನೂರು
ನಿಧನ : 04.09.2010

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ಎಸ್.ಜಿ.ಲಕ್ಕಮ್ಮ ಸಣ್ಣಗೌಡ್ರ ದ್ಯಾಮಪ್ಪ
ಶ್ರೀಮತಿ ಪುಷ್ಪ ಉಮೇಶ್ ಮತ್ತು ಶ್ರೀ ಬಿ. ಉಮೇಶ್
ಶ್ರೀಮತಿ ಶ್ರೀ ಉಲ್ಲಾಸ್ ಬಿ. ಯು., ಡಾ|| ಉಜ್ವಲ ಬಿ.ಯು.,
ಚಿ|| ಹರ್ಷ ಹಾಗೂ ಬಂಧು-ಮಿತ್ರರು.

## ಭಾವಪೂರ್ಣ ಶ್ರದ್ಧಾಂಜಲಿ



ನಿಧನ : 03-09.2020

**ಎಸ್.ಸಿದ್ದೇಶ್‌ರವರು ನಮ್ಮೆಲ್ಲರನ್ನು ಬಿಟ್ಟು ಅಗಲಿದ ಇವರ ಆತ್ಮಕ್ಕೆ ಚಿರಶಾಂತಿ ಸಿಗಲಿ.**

✦ ಶ್ರೀ ರೇವಣ್ಣಸಿದ್ದೇಶ್ವರ ಟ್ರೇಡರ್ಸ್
✦ ಶ್ರೀ ರೇವಣ್ಣಸಿದ್ದೇಶ್ವರ ಏಜೆನ್ಸೀಸ್, ಚಾಮರಾಜ ಪೇಟೆ, ದಾವಣಗೆರೆ.
✦ ಶ್ರೀ ಮರುಳ ಸಿದ್ದೇಶ್ವರ ಫ್ಯೂಯಲ್ ಸ್ಟೇಷನ್.
✦ ಎಸ್.ಚನ್ನಬಸಪ್ಪ ಮತ್ತು ಮಕ್ಕಳು, ಆನೆಕೊಂಡ.
✦ ಹೆಚ್.ಜೆ. ತಿಪ್ಪೇಸ್ವಾಮಿ, ಡಿ.ವೈ.ಎಸ್ಪಿ. ತುಮಕೂರು

## ಸಾವಿನಲ್ಲೂ ರಾಜ್ಯ ಮುಂಚೂಣಿ


**(3ನೇ ಪುಟದಿಂದ)** ಬಂದಿರುವ ಪ್ರಮಾಣ ಸಹ ಕರ್ನಾಟಕದಲ್ಲಿ ಹೆಚ್ಚಾಗಿದೆ. ದೇಶದ ಒಟ್ಟು ಕೊರೊನಾ ಸೋಂಕಿತ ಆರೋಗ್ಯ ಕಾರ್ಯಕರ್ತರಲ್ಲಿ ಕರ್ನಾಟಕದ ಪಾಲು ಶೇ.13ರಷ್ಟಾಗಿದೆ ಎಂದವರು ತಿಳಿಸಿದ್ದಾರೆ.

ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕರ್ನಾಟಕ, ಉತ್ತರ ಪ್ರದೇಶ ಹಾಗೂ ತಮಿಳುನಾಡು ಗಳಲ್ಲಿ ದೇಶದ ಒಟ್ಟು ಸಕ್ರಿಯ ಪ್ರಕರಣಗಳ ಶೇ.62ರಷ್ಟು ಪ್ರಕರಣಗಳಿವೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ. ಈ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಗುತ್ತಿರುವ ಸಾವುಗಳನ್ನು ಪರಿಗಣಿಸಿದಾಗ ದೇಶದ ಬೇರೆಯದೇ ಚಿತ್ರಣ ಸಿಗುತ್ತದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಹಾಗೂ ದೆಹಲಿ ಹೊರತು ಪಡಿಸಿದರೆ, ಆಂಧ್ರ ಪ್ರದೇಶ, ಮಹಾರಾಷ್ಟ್ರ ಹಾಗೂ ತಮಿಳುನಾಡುಗಳಲ್ಲಿ ದೈನಂದಿನ ಸಾವುಗಳ ಪ್ರಕರಣ ಇಳಿಕೆಯಾಗುತ್ತಿದೆ ಎಂದವರು ಹೇಳಿದ್ದಾರೆ.

ದೇಶದಲ್ಲಿ ಪ್ರತಿ ದಶಲಕ್ಷ ಜನಸಂಖ್ಯೆಗೆ 49 ಕೊರೊನಾ ಸಾವುಗಳು ಸಂಭವಿಸುತ್ತಿವೆ.ಇದು ವಿಶ್ವದಲ್ಲೇ ಅತಿ ಕಡಿಮೆ ದರ ಇರುವ ದೇಶಗಳಲ್ಲಿ ಒಂದಾಗಿದೆ ಎಂದು ಭೂಷಣ್ ಹೇಳಿದ್ದಾರೆ.

# ನನ್ನ ಆರೋಗ್ಯದ ಬಗ್ಗೆ ಆತಂಕ ಬೇಡ



ರಂಭಾಪುರಿ ಪೀಠ (ಬಾಳೆಹೊನ್ನೂರು), ಸೆ. 3- ಬಾಳೆಹೊನ್ನೂರು ಆರೋಗ್ಯ ಕೇಂದ್ರದಲ್ಲಿ ನಡೆಸಿದ ಕೋವಿಡ್-19 ರ್‍ಯಾಪಿಡ್ ಟೆಸ್ಟ್‌ನ ವರದಿ ಮತ್ತು ವೈದ್ಯರ ಸಲಹೆಯಂತೆ ವಿಶೇಷ ಚಿಕಿತ್ಸೆಗಾಗಿ ತಾವು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಬಂದಿದ್ದು, ಭಕ್ತರು ಆತಂಕ ಪಡುವ ಅಗತ್ಯವಿಲ್ಲ ಎಂದು ಶ್ರೀ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ತಿಳಿಸಿದ್ದಾರೆ.

ಭಯ ಪಡುವ, ಜೀವಕ್ಕೆ ತೊಂದರೆಯಾಗುವಂತಹ ಯಾವ ಆರೋಗ್ಯ ಸಮಸ್ಯೆಯೂ ಇರುವುದಿಲ್ಲ. ಕಾರಣ, ಯಾರೂ ಆತಂಕ ಅಥವಾ ಉದ್ವೇಗಕ್ಕೆ ಅವಕಾಶ ನೀಡಬಾರದು. ತಮ್ಮ ಆರೋಗ್ಯ ಚೆನ್ನಾಗಿಯೇ ಇದ್ದು ಯಾರೂ ಕಳವಳಪಡಬಾರದು. ಶ್ರೀ ಪೀಠದ ಪೂಜಾ ಕರ್ತೃತ್ವ ಶಕ್ತಿ ಬಹು ದೊಡ್ಡದು. ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳವರ ತಪೋಶಕ್ತಿ, ಶ್ರೀ ರಂಭಾಪುರಿ ವೀರ ಗಂಗಾಧರ ಜಗದ್ಗುರುಗಳವರ ಶಿವಪೂಜಾ ಶಕ್ತಿ, ಶ್ರೀ ರಂಭಾಪುರಿ ವೀರರುದ್ರಮುನಿದೇವ ಜಗದ್ಗುರುಗಳವರ ವಾತ್ಸಲ್ಯಪೂರಿತವಾದ ಅಂತಃಕರಣದ ಆಶೀರ್ವಾದ ಇರುವ ತನಕ ಪ್ರಸ್ತುತ ಜಗದ್ಗುರುಗಳವರಿಗೆ ಯಾವ ತೊಂದರೆಯಾಗುವುದಿಲ್ಲ ಎಂಬ ಆತ್ಮ ವಿಶ್ವಾಸವಿದೆ. ಶೀಘ್ರದಲ್ಲಿಯೇ ಗುಣಮುಖರಾಗಿ, ಎಂದಿನಂತೆ ಭಕ್ತರ ಮಧ್ಯದಲ್ಲಿರುತ್ತೇನೆ. ಸಮಾನ ಪೀಠಾಚಾರ್ಯರ ಹಾರೈಕೆ, ನಾಡಿನ ಶ್ರೀಗಳ ಪ್ರಾರ್ಥನೆ, ರಾಜ್ಯದ ಸಚಿವರಾದಿಯಾಗಿ ಭಕ್ತ ಗಣ ತೋರುತ್ತಿರುವ ಪ್ರೀತಿ, ವಿಶ್ವಾಸ ಮರೆಯುವಂತಿಲ್ಲ ಎಂದು ಜಗದ್ಗುರುಗಳು ತಿಳಿಸಿದ್ದಾರೆ.

## ಇಂದು ಕಟ್ಟಡ ಕಾರ್ಮಿಕರ ಸಂಘದ ಪ್ರತಿಭಟನೆ

ದಾವಣಗೆರೆ: ಕೇಂದ್ರ ಕಾರ್ಮಿಕ ಸಂಘಟನೆ ಎಐಯುಟಿಯುಸಿಗೆ ಸಂಯೋಜನೆಗೊಂಡಿರುವ ಕರ್ನಾಟಕ ರಾಜ್ಯ ಸಂಯುಕ್ತ ಕಟ್ಟಡ ಕಾರ್ಮಿಕರ ಸಂಘದ ವತಿಯಿಂದ ಕಟ್ಟಡ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಇಂದು ಬೆಳಿಗ್ಗೆ 11.30ಕ್ಕೆ ನಗರದ ಕಾರ್ಮಿಕ ಇಲಾಖೆ ಕಛೇರಿ ಮುಂಭಾಗ ಪ್ರತಿಭಟನೆ ನಡೆಸುವುದಾಗಿ ಸಂಘಟನೆಯ ತಿಪ್ಪೇಸ್ವಾಮಿ ಅಣಬೇರು ತಿಳಿಸಿದ್ದಾರೆ.

# ಶಿವಾಜಿಗೆ ಅವಮಾನಿಸಿದ ಕಿಡಿಗೇಡಿಗಳ ಬಂಧನಕ್ಕೆ ಆಗ್ರಹ



ಯಶವಂತರಾವ್ ಜಾಧವ್ ನೇತೃತ್ವದಲ್ಲಿ ಡಿಸಿಗೆ ಮನವಿ ಸಲ್ಲಿಕೆ

ದಾವಣಗೆರೆ, ಸೆ.3- ಫೇಸ್‌ಬುಕ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಅವಹೇಳನಕಾರಿ ಶಬ್ದಗಳನ್ನು ಬರೆದು ಮತ್ತು ಸ್ವತಂತ್ರ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮತ್ತು ವೀರರಾಣಿ ಕಿತ್ತೂರು ಚನ್ನಮ್ಮ ಅವರ ಭಾವಚಿತ್ರಕ್ಕೆ ಸೆಗಣಿ ಬಳಿದು ಅವಮಾನ ಮಾಡಿರುವ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ ಜಿಲ್ಲಾ ಬಿಜೆಪಿ ದಕ್ಷಿಣ ವಿಧಾನಸಭಾ ಕ್ಷೇತ್ರ ಮತ್ತು ಹಿಂದೂಪರ ಸಂಘಟನೆಗಳ ಪದಾಧಿಕಾರಿಗಳು ನಗರದಲ್ಲಿ ಇಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮೊನ್ನೆ ಕೆಲ ಕಿಡಿಗೇಡಿಗಳು ಫೇಸ್‌ಬುಕ್ ಪೇಜಿನಲ್ಲಿ ಕನ್ನಡ ನಾಡಿನ ಭಾವಚಿತ್ರ ಹಾಕಿ ವಲಸಿಗರನ್ನು ಓಡಿಸಿ ಕನ್ನಡ ನಾಡನ್ನು ಉಳಿಸಿ ಎಂದು ಮತ್ತು ಶಿವ ಛತ್ರಪತಿ ಮಹಾರಾಜರ ಭಾವಚಿತ್ರವನ್ನು ಹಾಕಿ ಶಿವಾಜಿ ಓರ್ವ ಕಾಮುಕ, 8 ಹೆಂಡತಿಯರನ್ನು ಹೊಂದಿದ ದೇಶದ ಏಕೈಕ ಕಾಮುಕ ಎಂದು ಬರೆಯಲಾಗಿದೆ ಎಂದು ಆರೋಪಿಸಲಾಗಿದೆ.

ಶಿವಾಜಿ ಮಹಾರಾಜರ ಇತಿಹಾಸ ತಿಳಿಯದ ಮೂರ್ಖರು ಈ ರೀತಿಯಾಗಿ ಬರೆದಿದ್ದಾರೆ.ಮೊಘಲರ ವಿರುದ್ಧ ಹೋರಾಡಿ ಹಿಂದೂಗಳನ್ನು ಉಳಿಸಿದ ಶಿವಾಜಿ ಮಹಾರಾಜರು ಮೊಘಲರ ವಿರುದ್ಧದ ಹೋರಾಟದ ಸಂದರ್ಭದಲ್ಲಿ ಸೆರೆಸಿಕ್ಕ ಅಬಲೆ ಹೆಣ್ಣು ಮಕ್ಕಳನ್ನು ತನ್ನ ತಾಯಿ ಸ್ವರೂಪವೆಂದು ಕಂಡ ಮಹಾನ್ ವ್ಯಕ್ತಿ. ಮತ್ತು ಸಂಗೊಳ್ಳಿ ರಾಯಣ್ಣ, ವೀರರಾಣಿ ಕಿತ್ತೂರು ಚೆನ್ನಮ್ಮ ಅವರ ಇತಿಹಾಸ ತಿಳಿಯದ ಕಿಡಿಗೇಡಿಗಳು ಈ ರೀತಿ ಪೋಸ್ಟ್ ಮಾಡಿ ಹಿಂದೂ ಸಮಾಜದ ಒಗ್ಗಟ್ಟನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಇಂತಹ ವ್ಯಕ್ತಿಗಳನ್ನು ಕೂಡಲೇ ಬಂಧಿಸಿ ಉಗ್ರ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತ ರಾವ್ ಜಾಧವ್, ದಕ್ಷಿಣ ವಿಧಾನಸಭಾ ಕ್ಷೇತ್ರದ ಮಂಡಲ ಅಧ್ಯಕ್ಷ ಆನಂದ್ ರಾವ್ ಶಿಂಧೆ, ನಗರ ಪಾಲಿಕೆ ಸದಸ್ಯರುಗಳಾದ ಗಾಯತ್ರಿ ಖಂಡೋಜಿರಾವ್, ಎಲ್.ಡಿ. ಗೋಣೆಪ್ಪ, ಸೋಗಿ ಶಾಂತಕುಮಾರ್, ತರಕಾರಿ ಶಿವು, ಶಿವನಗೌಡ ಪಾಟೀಲ್, ವೀರೇಶ್ ಪೈಲ್ವಾನ್, ಪ್ರಸನ್ನ ಕುಮಾರ್, ಆರ್.ಎಲ್. ಶಿವಪ್ರಕಾಶ್, ರಾಕೇಶ್ ಜಾಧವ್, ಜಿಲ್ಲಾ ಬಿಜೆಪಿ ಯುವ ಮೋರ್ಚಾ ಉತ್ತರ ವಲಯ ಅಧ್ಯಕ್ಷ ಸಚಿನ್ ವರ್ಣೇಕರ್, ಗೌತಮ್ ಜೈನ್, ಶ್ರೀಕಾಂತ್ ನೀಲಗುಂದ, ನೀಲಗುಂದ ರಾಜು, ಟಿಂಕರ್ ಮಂಜಣ್ಣ, ಬಾಲ್ ರಾಜ್, ಗೋಪಾಲ್ ರಾವ್ ಮಾನೆ, ಕುಮಾರ್ ಘಾಟ್ಗೆ, ಮಂಜು ಪೈ, ಗುರು ಸೋಗಿ, ಪ್ರವೀಣ್ ಜಾಧವ್ ಸೇರಿದಂತೆ ಇತರರು ಇದ್ದರು.

# ಮೆಕ್ಕೆಜೋಳ ಖರೀದಿ ಕೇಂದ್ರ ಪ್ರಾರಂಭಕ್ಕೆ ಆಗ್ರಹ



ದಾವಣಗೆರೆ, ಸೆ.3- ಸೆಪ್ಟೆಂಬರ್ ತಿಂಗಳ ಅಂತ್ಯದೊಳಗೆ ಜಿಲ್ಲೆಯಲ್ಲಿ ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿ ಕೇಂದ್ರ ಪ್ರಾರಂಭಿಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ನಗರದಲ್ಲಿ ಇಂದು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಜಿಲ್ಲೆಯಲ್ಲಿ ಈ ವರ್ಷ ಸುಮಾರು 1.25 ಲಕ್ಷ ಹೆಕ್ಟೇರ್ ನಿಂದ 1.30 ಲಕ್ಷ ಹೆಕ್ಟೇರ್ ಮೆಕ್ಕೆಜೋಳ ಬಿತ್ತನೆ ಮಾಡಲಾಗಿದೆ. ಪ್ರತಿ ಎಕರೆಗೆ 25 ರಿಂದ 30 ಕ್ವಿಂಟಾಲ್ ಇಳುವರಿ ನಿರೀಕ್ಷಿಸಲಾಗಿದೆ. ಈ ಬೃಹತ್ ಪ್ರದೇಶದಲ್ಲಿ ಈ ಮುಂಗಾರು ಹಂಗಾಮಿನಲ್ಲಿ ಒಟ್ಟಾರೆ 2 ಲಕ್ಷ ಮೆಟ್ರಿಕ್ ಟನ್ ಇಳುವರಿ ಬರುವ ಸಾಧ್ಯತೆ ಇದೆ. ಈಗಾಗಲೇ ನೀರಾವರಿ ಪ್ರದೇಶಗಳಲ್ಲಿ ಬೆಳೆದಿರುವ ಮೆಕ್ಕೆಜೋಳ ಮಾರುಕಟ್ಟೆಗೆ ಬರಲು ಆರಂಭಿಸಿದ್ದು, ಪ್ರತಿ ಕ್ವಿಂಟಾಲ್ ಜೋಳ ಕೇವಲ 840 ರೂ.ಗೆ ಮಾರಾಟವಾಗುತ್ತಿದೆ ಎಂದು ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ತಿಳಿಸಿದ್ದಾರೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕೃಷಿ ಬೆಲೆ ಆಯೋಗ 1 ಕ್ವಿಂಟಾಲ್ ಮೆಕ್ಕೆಜೋಳ ಬೆಳೆಯಲು 2100 ರೂ. ವೆಚ್ಚ ಬರುತ್ತದೆ ಎಂದು ಹೇಳಿದೆ. ಆದರೆ ಸರ್ಕಾರಗಳು 1740 ರಿಂದ 1780 ರೂಪಾಯಿ ಒಳಗೆ ಖರೀದಿ ಮಾಡಬಾರದೆಂದು ಹೇಳುತ್ತಿವೆ. ಆದರೆ ಮಾರುಕಟ್ಟೆಯಲ್ಲಿ ಕೇವಲ 840 ರಿಂದ 900 ರೂ.ಗೆ ಮಾತ್ರ ಖರೀದಿ ಮಾಡಲಾಗುತ್ತದೆ. ಇದರಿಂದ ರೈತನಿಗೆ ಪ್ರತಿ ಕ್ವಿಂಟಾಲ್‌ಗೆ 880 ರೂ. ನಷ್ಟವಾಗುತ್ತಿದೆ ಎಂದು ಸರ್ಕಾರದ ಗಮನ ಸೆಳೆಯಲಾಗಿದೆ.

ಈ ಎಲ್ಲ ಅಂಶಗಳನ್ನು ಗಮನಿಸಿ ರಾಜ್ಯ ಸರ್ಕಾರ ಕೂಡಲೇ ಟಾಸ್ಕ್ ಫೋರ್ಸ್ ಕಮಿಟಿ ಸಭೆ ಕರೆದು ತೀರ್ಮಾನಿಸಿ ಆವರ್ತ ನಿಧಿಯೊಂದಿಗೆ ಸೆಪ್ಟೆಂಬರ್ 30ರೊಳಗೆ ಜಿಲ್ಲೆಯಲ್ಲಿ ಖರೀದಿ ಕೇಂದ್ರ ಆರಂಭಿಸಬೇಕು. ಇಲ್ಲವಾದಲ್ಲಿ ಅಕ್ಟೋಬರ್ 1ರಿಂದ ಅನಿರ್ದಿಷ್ಟ ಧರಣಿ ನಡೆಸಲಾಗುವುದು. ಈ ಸಂಬಂಧ ಪ್ರತಿ ಹಳ್ಳಿ ಹಳ್ಳಿಗೆ ತೆರಳಿ ಧರಣಿ ವಿಚಾರ ಟಾಂ ಟಾಂ ಹಾಕಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಪಾಮೇನಹಳ್ಳಿ ಲಿಂಗರಾಜ್, ಹಿರಿಯ ಉಪಾಧ್ಯಕ್ಷ ಆವರಗೆರೆ ಬಸವರಾಜಪ್ಪ, ರಾಂಪುರ ಆರ್.ಜಿ. ಬಸವರಾಜ್, ಮಾಯಕೊಂಡದ ನಿಂಗಣ್ಣ, ನಾಗರಕಟ್ಟೆ ಜಯಾನಾಯ್ಕ, ಅಶೋಕ್, ಬಲ್ಲೂರು ಪರಶುರಾಮರೆಡ್ಡಿ, ಆಲೂರು ಆರ್. ಪರಮೇಶ್ವರಪ್ಪ, ಕುಕ್ಕುವಾಡ ಬಸವನಗೌಡ, ಬಲ್ಲೂರು ಅಣ್ಣಪ್ಪ, ಆವರಗೆರೆ ಜಯ್ಯಪ್ಪ, ಆಲೂರು ಬಿ.ಜಿ. ಮಂಜಪ್ಪ ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಬೂತ್ ಮಟ್ಟದಿಂದ ಪಕ್ಷ ಸಂಘಟಿಸಬೇಕು

## ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಗೀತಾ ವಿವೇಕಾನಂದ ಕರೆ



ದಾವಣಗೆರೆ, ಸೆ.3- ಜಿಲ್ಲೆಯಲ್ಲಿ ಬೂತ್ ಮಟ್ಟದಿಂದ ಪಕ್ಷವನ್ನು ಸಂಘಟಿಸುವ ಕೆಲಸ ಮಾಡಬೇಕಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಯೋಜನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷರಾದ ಗೀತಾ ವಿವೇಕಾನಂದ ಪಕ್ಷದ ಮಹಿಳಾ ಕಾರ್ಯಕರ್ತೆಯರಿಗೆ ಕರೆ ನೀಡಿದರು.

ಅವರು, ಇಂದು ನಗರದ ಪಕ್ಷದ ಕಾರ್ಯಾಲಯದಲ್ಲಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾದ ಸಮಿತಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ನಮ್ಮದೇ ಸರ್ಕಾರಗಳು ರಾಜ್ಯ, ಕೇಂದ್ರದಲ್ಲಿ ಆಡಳಿತದಲ್ಲಿದ್ದು, ಅವುಗಳ ಯೋಜನೆಗಳನ್ನು ಜನರಿಗೆ ಅದರಲ್ಲೂ ಮಹಿಳೆಯರಿಗೆ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಇದರಿಂದ ಪಕ್ಷ ಮತ್ತಷ್ಟು ಪ್ರಬಲವಾಗಲು ಸಾಧ್ಯ ಎಂದು ಸಲಹೆ ನೀಡಿದರು.

ಜಿಲ್ಲಾಧ್ಯಕ್ಷರಾದ ಮಂಜುಳಾ ಮಹೇಶ್ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್ ಮಾತನಾಡಿದರು.

ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷರಾದ ಸುನೀತ ಜಗದೀಶ್, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ದೀಪ ಜಗದೀಶ್, ತಾಲ್ಲೂಕು ಪಂಚಾಯತ್ ಅಧ್ಯಕ್ಷರಾದ ಮಮತಾ ಮಲ್ಲೇಶ್ ಸೇರಿದಂತೆ ಇತರರು ಇದ್ದರು.

ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸವಿತಾ ರವಿಕುಮಾರ ಸ್ವಾಗತಿಸಿದರು. ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪುಷ್ಪಾ ವಾಲಿ ನಿರೂಪಿಸಿದರು. ದಾವಣಗೆರೆ ಉತ್ತರ ಮಂಡಲದ ಅಧ್ಯಕ್ಷರಾದ ಸರ್ವಮಂಗಳ ವಂದಿಸಿದರು.

## ಹಿಂದೂ ಯುವಶಕ್ತಿಯ ಗಣೇಶೋತ್ಸವದ ಮಹಾಗಣಹೋಮದಲ್ಲಿ ಎಸ್ಸೆಸ್ಸೆಂ ಭಾಗಿ



ದಾವಣಗೆರೆ, ಸೆ.3- ಹಿಂದೂ ಯುವ ಶಕ್ತಿ ಮಹಾಗಣಪತಿ ಸಮಿತಿ ವತಿಯಿಂದ 29ನೇ ವರ್ಷದ ವಿನಾಯಕ ಮಹೋತ್ಸವದ ಅಂಗವಾಗಿ ನಗರದ ತೋಗಟವೀರ ಸಮುದಾಯ ಭವನದಲ್ಲಿ ಸರಳವಾಗಿ ಗಣೇಶ ಪ್ರತಿಷ್ಠಾಪಿಸಲಾಗಿದ್ದು, ಗಣಹೋಮವನ್ನು ಹಮ್ಮಿಕೊಳ್ಳಲಾಗಿತ್ತು. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಗಣಹೋಮದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸಂಪನ್ನ ಮುತಾಲಿಕ್, ಮಹಾನಗರ ಪಾಲಿಕೆ ಸದಸ್ಯ ದೇವರಮನಿ ಶಿವಕುಮಾರ್, ಹಿಂದೂ ಯುಶಕ್ತಿ ಮಹಾಗಣಪತಿ ಸಮಿತಿಯ ಪಿ.ಸಿ.ರಾಮನಾಥ್, ಗುರುರಾಜ್, ರುದ್ರೇಶ್, ವೆಂಕಟೇಶ್ (ಲಂಕಾ), ಶ್ರೀನಿವಾಸ್ ಪಿ.ಸಿ., ಸಂಜಯ್ ಮನಗೊಳಿ, ಕಿರಣ್, ಶಂಕರ್, ಅನಿಲ್, ಮಾಧವ ಪದಕಿ, ಶಿವಕುಮಾರ್ ಕುರುಡಿಮಠ ಮತ್ತಿತರರು ಉಪಸ್ಥಿತರಿದ್ದರು.

## ಜಿಲ್ಲಾ ಬಿಜೆಪಿ ಯುವ ಮೋರ್ಚಾ ಸಮಿತಿಗೆ ಪದಾಧಿಕಾರಿಗಳ ನೇಮಕ

ದಾವಣಗೆರೆ, ಸೆ.3- ಜಿಲ್ಲಾ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳನ್ನು ಹಾಗೂ ಸದಸ್ಯರುಗಳನ್ನು ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಆದೇಶದ ಮೇರೆಗೆ ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷರಾದ ಆರ್.ಎಲ್.ಶಿವಪ್ರಕಾಶ್ ನೇಮಕ ಮಾಡಿದ್ದಾರೆ.

ಅಧ್ಯಕ್ಷರಾಗಿ ಆರ್.ಎಲ್.ಶಿವಪ್ರಕಾಶ್ (ದಾವಣಗೆರೆ ದಕ್ಷಿಣ), ಉಪಾಧ್ಯಕ್ಷರುಗಳಾಗಿ ವಿಕ್ರಮ ಎಂ.ಪಾಟೀಲ್ (ಚನ್ನಗಿರಿ), ಚೇತನ್ ಕುಮಾರ್ (ಹೊನ್ನಾಳಿ), ಕೆ.ವಿ.ಗುರುರಾಜ್ (ದಾವಣಗೆರೆ ಉತ್ತರ), ಶ್ರೀಕಾಂತ ನೀಲಗುಂದ (ದಾವಣಗೆರೆ ದಕ್ಷಿಣ), ವಿ.ಎನ್.ಸಿದ್ದೇಶ್ (ಹರಿಹರ ಗ್ರಾಮಾಂತರ)ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀಧರ.ಹೆಚ್.ಜೆ (ಮಾಯಕೊಂಡ), ಜಿ.ಯಲ್ಲೇಶ್ (ದಾವಣಗೆರೆ ದಕ್ಷಿಣ) ಅವರುಗಳನ್ನು ನೇಮಕ ಮಾಡಲಾಗಿದೆ.

ಕಾರ್ಯದರ್ಶಿಗಳು : ಪ್ರವೀಣ ಹೆಚ್. (ಹೊನ್ನಾಳಿ), ಪ್ರಶಾಂತ. ಬಿ.ಎಸ್ (ದಾವಣಗೆರೆ ಉತ್ತರ), ಹರೀಶ್ ಕಜ್ಜರಿ (ಹರಿಹರ), ಕೆ.ಎಸ್. ಯೋಗಾನಂದ (ಜಗಳೂರು), ಸಿ.ಆರ್.ದಿಲೀಪ್ (ಚನ್ನಗಿರಿ) ಹಾಗೂ ಕೋಶಾಧ್ಯಕ್ಷರಾಗಿ ಶಶಿಕುಮಾರ್(ದಾವಣಗೆರೆ ಉತ್ತರ) ನೇಮಕಗೊಂಡಿದ್ದಾರೆ.

ಸದಸ್ಯರುಗಳು : ಬಿ.ಜಿ.ಕನಕದಾಸ (ಚನ್ನಗಿರಿ), ವೀರೇಶ್.ಎನ್ (ಹರಿಹರ), ಅಭಿಲಾಷ್.ಡಿ.ಎಸ್ (ಚನ್ನಗಿರಿ), ಎಸ್.ಸಿ.ಶ್ರೀನಿವಾಸ (ಹರಿಹರ), ಬಿ.ಗಣೇಶ್ (ದಾವಣಗೆರೆ ದಕ್ಷಿಣ), ವಿಜಯಕುಮಾರ್ (ಜಗಳೂರು), ಟಿ.ಸಂತೋಷ (ದಾವಣಗೆರೆ ಉತ್ತರ), ಅದ್ವತ (ಹರಿಹರ), ಮಹೇಶ್.ಎನ್ (ಹರಿಹರ ನಗರ), ಕೆ. ಮಂಜುನಾಥ (ದಾವಣಗೆರೆ ದಕ್ಷಿಣ), ಎಸ್.ಮಾರುತಿ (ಜಗಳೂರು).

# ಜಿಲ್ಲೆಯಲ್ಲಿ 23.0 ಮಿಮೀ ಮಳೆ : 9 ಲಕ್ಷ ನಷ್ಟ

ದಾವಣಗೆರೆ, ಸೆ.3- ಜಿಲ್ಲೆಯಲ್ಲಿ ಸೆ.02 ರಂದು 23.0 ಮಿ.ಮೀ ಸರಾಸರಿ ಮಳೆಯಾಗಿದ್ದು, ತಾಲ್ಲೂಕುವಾರು ಮಳೆ ಹಾಗೂ ಹಾನಿ ವಿವರ ಈ ಕೆಳಕಂಡಂತಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 3.0 ವಾಡಿಕೆಗೆ 22.0 ಮಿ.ಮೀ. ವಾಸ್ತವ ಮಳೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 1.0 ವಾಡಿಕೆಗೆ 22.0 ಮಿ.ಮೀ. ವಾಸ್ತವ ಮಳೆಯಾಗಿದೆ. ಹರಿಹರ ತಾಲ್ಲೂಕಿನಲ್ಲಿ 2.0 ವಾಡಿಕೆಗೆ 17.0 ಮಿ.ಮೀ. ವಾಸ್ತವ ಮಳೆಯಾಗಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ 2.0 ವಾಡಿಕೆಗೆ 29.0 ಮಿ.ಮೀ. ವಾಸ್ತವ ಮಳೆಯಾಗಿದೆ. ಜಗಳೂರು ತಾಲ್ಲೂಕಿನಲ್ಲಿ 1.0 ವಾಡಿಕೆಗೆ 17.0 ಮಿ.ಮೀ. ವಾಸ್ತವ ಮಳೆಯಾಗಿದೆ. ನ್ಯಾಮತಿ ತಾಲ್ಲೂಕಿನಲ್ಲಿ 2.0 ವಾಡಿಕೆಗೆ 36.0 ಮಿ.ಮೀ. ವಾಸ್ತವ ಮಳೆಯಾಗಿದೆ. ಜಿಲ್ಲೆಯಲ್ಲಿ ಸರಾಸರಿ 2.0 ವಾಡಿಕೆಗೆ 23.0 ಮಿ.ಮೀ ವಾಸ್ತವ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 3 ಕಚ್ಚಾ ಮನೆ ಭಾಗಶಃ ಹಾನಿಯಾಗಿದ್ದು ರೂ. 30 ಸಾವಿರ ಅಂದಾಜು ನಷ್ಟ ಸಂಭವಿಸಿರುತ್ತದೆ ಹಾಗೂ 2 ಎಕರೆ ಬೆಳೆ ಹಾನಿಯಾಗಿದ್ದು, ರೂ. 25 ಸಾವಿರ ಸೇರಿದಂತೆ ಒಟ್ಟು ರೂ.55 ಸಾವಿರ ನಷ್ಟ ಸಂಭವಿಸಿರುತ್ತದೆ. ಹರಿಹರ ತಾಲ್ಲೂಕಿನಲ್ಲಿ 2 ಪಕ್ಕಾ ಮನೆಗಳು ಭಾಗಶಃ ಹಾನಿಯಾಗಿದ್ದು, ರೂ. 90 ಸಾವಿರ ಅಂದಾಜು ನಷ್ಟ ಸಂಭವಿಸಿರುತ್ತದೆ. ಹೊನ್ನಾಳಿ ತಾಲ್ಲೂಕಿನಲ್ಲಿ 9 ಪಕ್ಕಾ ಮನೆಗಳಿಗೆ ಭಾಗಶಃ ಹಾನಿಯಾಗಿದ್ದು 4.50 ಲಕ್ಷ ನಷ್ಟ ಸಂಭವಿಸಿರುತ್ತದೆ. ಚನ್ನಗಿರಿ ತಾಲ್ಲೂಕಿನಲ್ಲಿ 3 ಪಕ್ಕಾ ಮನೆಗಳಿಗೆ ಭಾಗಶಃ ಹಾನಿಯಾಗಿದ್ದು 1.10 ಲಕ್ಷ ನಷ್ಟ ಹಾಗೂ 3 ಕಚ್ಚಾ ಮನೆಗಳಿಗೆ ಹಾನಿಯಾಗಿದ್ದು ರೂ. 75 ಸಾವಿರ ಹಾಗೂ 6 ಎಕರೆ ಮೆಕ್ಕೆಜೋಳ ಹಾನಿಯಾಗಿದ್ದು ರೂ. 80 ಸಾವಿರ ಸೇರಿದಂತೆ ಒಟ್ಟು ರೂ. 2.65 ಲಕ್ಷ ನಷ್ಟ ಸಂಭವಿಸಿರುತ್ತದೆ.

ಜಗಳೂರು ತಾಲ್ಲೂಕಿನಲ್ಲಿ 5 ಪಕ್ಕಾ ಮನೆಗಳು ಭಾಗಶಃ ಹಾನಿಯಾಗಿದ್ದು ರೂ. 15 ಸಾವಿರ ನಷ್ಟ ಹಾಗೂ 14 ಎಕರೆ ಮೆಕ್ಕೆಜೋಳ ಹಾಗೂ 36 ಎಕರೆ ಈರುಳ್ಳಿ ಬೆಳೆ ಹಾನಿಯಾಗಿದ್ದು ಒಟ್ಟು ರೂ. 55 ಸಾವಿರ ನಷ್ಟ ಸಂಭವಿಸಿರುತ್ತದೆ. ಜಿಲ್ಲೆಯಲ್ಲಿ ಒಟ್ಟಾರೆ ರೂ. 9.15 ಲಕ್ಷ ನಷ್ಟ ಸಂಭವಿಸಿರುತ್ತದೆ.

## ಕರುಣಾದಿಂದ ಸ್ಕಾಲರ್ ಶಿಪ್

ದಾವಣಗೆರೆ, ಸೆ.3- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಸ್ಕಾಲರ್ ಶಿಪ್‌ಗೆ ಅರ್ಜಿ ಆಹ್ವಾನಿಸಲಾಗಿದ್ದು, ತಂದೆ ಇಲ್ಲದೆ, ಆರ್ಥಿಕವಾಗಿ ದುರ್ಬಲರಾದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ. 80 ಅಂಕ ಗಳಿಸಿ ತಮ್ಮ ಮುಂದಿನ ಶಿಕ್ಷಣವನ್ನು ಸರ್ಕಾರಿ ಕಾಲೇಜಿನಲ್ಲಿ ಮುಂದುವರೆಸುವ ವಿದ್ಯಾರ್ಥಿನಿಯರು ಮಾತ್ರ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್, ಮಾಮಾಸ್ ಜಾಯಿಂಟ್ ರಸ್ತೆ, 3ನೇ ಮುಖ್ಯರಸ್ತೆ, 3ನೇ ಅಡ್ಡ ರಸ್ತೆ, ಶಂಕರ್ ಪ್ಲಾಜಾ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ, ಇಲ್ಲಿ ಸಂಪರ್ಕಿಸುವುದು.

## ಜಿಲ್ಲಾ ಆರ್ಯ ಈಡಿಗರ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಸೆ.2- ಜಿಲ್ಲಾ ಆರ್ಯ ಈಡಿಗರ ಸಂಘದಿಂದ ನಡೆಯುತ್ತಿರುವ ಉಚಿತ ವಿದ್ಯಾರ್ಥಿ ನಿಲಯಕ್ಕೆ ಸೇರಬಯಸುವ ಅರ್ಹ ಆರ್ಯ ಈಡಿಗ ಸಮಾಜದ ಬಡ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಆರ್ಯ ಈಡಿಗರ ಸಂಘದ ಕಾರ್ಯದರ್ಶಿ ಎ. ನಾಗರಾಜ್ ತಿಳಿಸಿದ್ದಾರೆ. ಪಿಯುಸಿ ಸೈನ್ಸ್, ಬಿ.ಎಸ್ಸಿ, ಬಿ.ಕಾಂ, ಬಿಸಿಎ, ಬಿಬಿಎಂ, ಎಂಎಸ್ಸಿ, ಎಂ.ಕಾಂ ಹಾಗೂ ತಾಂತ್ರಿಕ ಕೋರ್ಸುಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಇದೇ ದಿನಾಂಕ 20ರೊಳಗಾಗಿ ಅರ್ಜಿ ಸಲ್ಲಿಸಬಹುದು. ದಾವಣಗೆರೆ ಜಿಲ್ಲೆಗೆ ಮೊದಲ ಆದ್ಯತೆ ನೀಡಲಾಗುವುದು. ವಿವರಕ್ಕೆ ಸಂಪರ್ಕಿಸಿ : ದೂರವಾಣಿ : 08192-254261, 97404 38397, 98453 55008.

### ಓದುಗರ ಪತ್ರ

## ಜೈನ ಸಮುದಾಯದಿಂದ ಕೋವಿಡ್ ಕೇರ್ ಸೆಂಟರ್: ಶ್ಲಾಘನೀಯ ಕಾರ್ಯ

ಮಾನ್ಯರೇ,

ಜೈನ ಸಮುದಾಯದವರು ಆವರಗೆರೆ ಬಳಿ ಸುಸಜ್ಜಿತವಾದ ಕೋವಿಡ್ ಕೇರ್ ಸೆಂಟರ್ ತೆರೆದಿರುವುದು ನಿಜಕ್ಕೂ ಪ್ರಶಂಸನೀಯವಾಗಿದ್ದು, ಇತರೆ ಸಮುದಾಯದವರಿಗೆ ಪ್ರೇರಣೆಯಾಗಲಿ.

ಇದೇ ರೀತಿ ಬಹಳಷ್ಟು ಸಮುದಾಯದವರು ತಮ್ಮ ಸಮಾಜದ ಸದಸ್ಯರಿಗೆ ಈ ರೀತಿಯ ಸೌಲಭ್ಯ ಒದಗಿಸುವುದು ಇಂದಿನ ಅತ್ಯವಶ್ಯಕ ಸೇವೆಯಾಗಿದೆ. ಬೇರೆ ಯಾವುದೋ ಅನವಶ್ಯಕ ಕಾರ್ಯಗಳನ್ನು ಮಾಡುವ ಬದಲು ಈ ರೀತಿಯ ಸೇವಾ ಕಾರ್ಯವನ್ನು ಮಾಡಿದಲ್ಲಿ ಜನರ ಆರೋಗ್ಯ ಮತ್ತು ಜೀವವನ್ನು ಕಾಪಾಡಿದಂತಾಗುತ್ತದೆ.

ಆಸ್ಪತ್ರೆಗಳಲ್ಲಿ ಬೆಡ್ ಸಿಗದೇ ಇರುವ ಈ ಸಂದರ್ಭದಲ್ಲಿ ಆಸ್ಪತ್ರೆಗಳ ಒತ್ತಡವನ್ನು ಕಡಿಮೆ ಮಾಡಿದಂತಾಗುತ್ತದೆ. ಎಲ್ಲ ಸಮುದಾಯದ ಸದಸ್ಯರು ಮತ್ತು ಮುಖಂಡರು ಈ ರೀತಿಯ ಕಾರ್ಯವನ್ನು ಅತಿ ಶೀಘ್ರದಲ್ಲೇ ಪ್ರಾರಂಭಿಸುವರೆಂದು ಆಶಿಸೋಣ.

- ಐಗೂರು ಸಿ. ಪ್ರಭು, ದಾವಣಗೆರೆ.


# ಅಮೃತ ಮಹೋತ್ಸವದಲ್ಲಿ ಸಂತ ಪೌಲರ ಶಿಕ್ಷಣ ಸಂಸ್ಥೆ

ಒಂದು ಸಂಸ್ಥೆಯ ಜೀವಿತದಲ್ಲಿ ಅಮೃತ ಮಹೋತ್ಸವ ಒಂದು ಮೈಲಿಗಲ್ಲು. 75 ಸಂವತ್ಸರಗಳನ್ನು ಸಫಲವಾಗಿ ಪೂರೈಸಿರುವ ಸಂಭ್ರಮದಾಚರಣೆ ಅಮೃತ ಮಹೋತ್ಸವ.

***ಸೂರ್ಯನು ಬೆಳಕು ಚೆಲ್ಲಿದಾಗ***
***ಭೂಮಂಡಲವೇ ಪ್ರಕಾಶಿಸುತ್ತದೆ***
***ಮೊಗ್ಗೆಲ್ಲಾ ಅರಳಿ ಹೂವಾಗುತ್ತದೆ***
***ಹೂ ಬನಗಳು ನಲಿದಾಡುತ್ತವೆ.***
***ಇರುಳು ದೂರವಾಗುತ್ತದೆ.***

ಗಿಡವೊಂದಕ್ಕೆ ಗೊಬ್ಬರ ನೀಡಿ, ನೀರುಣಿಸಿ, ಬೆಳೆಸಿ, ಹೂ ಬಿಟ್ಟಾಗ ಸಂತೋಷವಾಗುತ್ತದೆ. ಕರ್ನಾಟಕದ ಶೈಕ್ಷಣಿಕ ಕ್ಷೇತ್ರಕ್ಕೆ ಕ್ರೈಸ್ತ ಮಿಷನರಿಗಳ ಕೊಡುಗೆ ಅಪಾರವಾದದ್ದು, ಪ್ರಾತಃಸ್ಮರಣೀಯ ವಾದದ್ದು ಎಂಬುವುದರಲ್ಲಿ ಎರಡು ಮಾತಿಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿ, ಪ್ರತಿಕೂಲ ಪರಿಸ್ಥಿತಿಯಲ್ಲಿ ಅನೇಕ ಕಷ್ಟ ಕಾರ್ಪಣ್ಯಗಳ ನಡುವೆ, ದೈವಕರೆಗೆ ಓಗೊಟ್ಟು, ಸರ್ವವನ್ನು ಪರಿತ್ಯಜಿಸಿ, ಸುವಾರ್ತೆಗೆಂದು, ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟ ಪೂಜ್ಯ ಧರ್ಮಭಗಿನಿಯರ ಸೇವೆ ಅಪಾರ. ನಲ್ಮೆಯೊಂದಿಗೆ ಯಾರನ್ನೂ ತಿರಸ್ಕರಿಸದೆ, ಸರ್ವರನ್ನೂ ಅಂಗೀಕರಿಸಿ, ಸುಮಾರು 75 ವರ್ಷಗಳಿಂದ ದಾವಣಗೆರೆಯ ಹೆಣ್ಣು ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ನಿಸ್ವಾರ್ಥ, ಕಾಯಾ, ವಾಚಾ, ಮನಸಾ ಸೇವೆ ಸಲ್ಲಿಸಿ ನಮ್ಮ CSST ಸಂಸ್ಥೆಯ ಧರ್ಮಭಗಿನಿಯರು ಬಿತ್ತಿದ ಜ್ಞಾನದ ಚಿಕ್ಕ ಬೀಜ ಮಣ್ಣಲ್ಲಿ ಮೊಳಕೆಯೊಡೆದು, ಗಿಡವಾಗಿ ಚಿಗುರಿ ಮರವಾಗಿ ಬೆಳೆದು ಇಂದು ಹೆಮ್ಮರವಾಗಿ ತನ್ನ ರೆಂಬೆ ಕೊಂಬೆಗಳಲ್ಲಿ ಸಾವಿರಾರು ಮಕ್ಕಳ ಭವ್ಯ ಜೀವನವನ್ನು ರೂಪಿಸುತ್ತಿರುವ ಸಂತ ಪೌಲರ ಶಿಕ್ಷಣ ಸಂಸ್ಥೆ ಇಂದು ಅಮೃತ ಮಹೋತ್ಸವದ ಕಳಸ ಹೊತ್ತು ಸಂಭ್ರಮಿಸುತ್ತಿದೆ.




ಸಂತ ಪೌಲರ ಶಿಕ್ಷಣ ಸಂಸ್ಥೆ, ದಾವಣಗೆರೆಯ ಇತಿಹಾಸದಲ್ಲಿ ವಿಶಿಷ್ಟ ಛಾಪು ಮೂಡಿಸಿದೆ. ಶಿಸ್ತು, ಶುಚಿತ್ವ, ಸಂಸ್ಕೃತಿ ಸಂಸ್ಕಾರಗಳೊಂದಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ಅಚ್ಚುಕಟ್ಟಾಗಿ ಭವಿಷ್ಯದ ಪ್ರಜೆಗಳಿಗೆ ನೀಡಿ ಜನಸಾಮಾನ್ಯರ ಹೃನ್ಮನಗಳಲ್ಲಿ ಸದಾ ಹಚ್ಚ ಹಸಿರಾಗಿರುವ ಸಂಸ್ಥೆ ನಮ್ಮದು ಎಂದು ಹೇಳಲು ನಮಗೆ ಪರಮಾನಂದವಾಗುತ್ತದೆ.

ಪರರ ಸೇವೆಯಲ್ಲಿಯೇ ಪರಮಾತ್ಮನನ್ನು ಕಾಣುತ್ತಿರುವ CSST ಸಂಸ್ಥೆಯ ಕನ್ಯಾಭಗಿನಿಯರು, ಶಾಲೆಯ ಮುಖ್ಯ ಧ್ಯೇಯವಾದ ಪ್ರೀತಿ, ಪ್ರಾರ್ಥನೆ, ಕೆಲಸ ಎಂಬ ತ್ರೈಮಾಣಿಕ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸಾರ್ಥಕತೆಯ, ಸಾತ್ವಿಕ ಜೀವನ ನಡೆಸುತ್ತಿದ್ದಾರೆ. ಅನೇಕ ಬಡ ಮಕ್ಕಳಿಗೆ, ನಿರ್ಗತಿಕರಿಗೆ ಆಶ್ರಯ ತಾಣವಾಗಿ ಜಾತಿ, ಮತ, ಪಂಥಗಳನ್ನು ನೋಡದೆ, ಜೀವನ ಮೌಲ್ಯಗಳನ್ನು ಸಾರುತ್ತಿರುವುದು ಗಮನಾರ್ಹ.

ಪ್ರಸ್ತುತ ಮೂರು ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ಶಿಶುವಿಹಾರದಿಂದ ಪದವಿ ಪೂರ್ವಕಾಲೇಜಿನವರೆಗೆ ಶಿಕ್ಷಣ ನೀಡುವ ಮಹತ್ತರ ಜವಾಬ್ದಾರಿಯನ್ನು ಸಂತ ಪೌಲರ ಶಿಕ್ಷಣ ಸಂಸ್ಥೆಯು ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಬಂದಿದೆ.

'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ನಮ್ಮ ಸಂತ ಪೌಲರ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿಯರು ಸಾಧನೆಗೈಯ್ಯದ ಕ್ಷೇತ್ರವಿಲ್ಲ ಎನ್ನಬಹುದು.

'ಸ್ತ್ರೀ ಅಬಲೆಯಲ್ಲ, ಸಬಲೆ', 'ತೊಟ್ಟಿಲು ತೂಗುವ ಕೈಗಳೇ ನಾಡನ್ನಾಳುತ್ತವೆ' ಎನ್ನುವ ನುಡಿಯಂತೆ, ನಮ್ಮ ಸಂಸ್ಥೆಯ ಸಾವಿರಾರು ವಿದ್ಯಾರ್ಥಿನಿಯರು, ತಮ್ಮ ಪ್ರತಿಭೆಯನ್ನು ಶಿಕ್ಷಣ, ಕ್ರೀಡೆ, N.C.C. Guides, I.T. ವಿಜ್ಞಾನ, ಸಮಾಜ ಸೇವೆ, ಕರಕುಶಲ, ನಾಟ್ಯ ಮತ್ತು ಸಂಗೀತ ಹೀಗೆ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಹತ್ತು ಹಲವಾರು ಸಾಧನೆಗಳನ್ನು ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅನಾವರಣಗೊಳಿಸಿದ್ದಾರೆ.

ಸಂತ ಪೌಲರ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ಸಾವಿರಾರು ವಿದ್ಯಾರ್ಥಿನಿಯರು ಪ್ರಸ್ತುತ ವಿಶ್ವದಾದ್ಯಂತ ಡಾಕ್ಟರ್, ಎಂಜಿನಿಯರ್, ನರ್ಸ್, ನ್ಯಾಯವಾದಿಗಳು, ಭಾರತೀಯ ನಾಗರಿಕ ಸೇವೆ (IAS) ಧರ್ಮಭಗಿನಿಯರಾಗಿ, ಸಮಾಜ ಸೇವಕರಾಗಿ ತಮ್ಮ ಸೇವೆ ಸಲ್ಲಿಸುತ್ತಿರುವುದು ನಮ್ಮೆಲ್ಲರ ಸಂತೋಷವನ್ನು ಇಮ್ಮಡಿಗೊಳಿಸುತ್ತಿದೆ. ಅಮೃತ ಮಹೋತ್ಸವದ ಸಂಭ್ರಮದಲ್ಲಿರುವ ಈ ನಮ್ಮ ಸಂತ ಪೌಲರ ಶಿಕ್ಷಣ ಸಂಸ್ಥೆ ತನ್ನ ಸೇವೆಯನ್ನು ಮುಂದುವರೆಸಿ ಶತಮಾನೋತ್ಸವ ಕಾಣಲಿ ಎಂದು ಹಾರೈಸುತ್ತೇವೆ.

- ಸಂತ ಪೌಲರ ಶಿಕ್ಷಣ ಸಂಸ್ಥೆ

## ಬೆಳೆ ವಿಮೆಗೆ ಬ್ಯಾಂಕ್ ಖಾತೆಗೆ ಆಧಾರ್ ಕಡ್ಡಾಯ

ದಾವಣಗೆರೆ, ಸೆ.3- ರೈತರು ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಸದೇ ಇದ್ದರೆ ಬೆಳೆ ವಿಮೆ ಪರಿಹಾರ ಇತ್ಯರ್ಥಪಡಿಸುವಲ್ಲಿ ಅನಗತ್ಯ ವಿಳಂಬವಾಗಲಿದ್ದು, ಕೂಡಲೇ ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮಾಡಿಸಿಕೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಮ್‌ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿ ಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್ ಲೈನ್ ರಸ್ತೆ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂನ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಎಂ.ಎಸ್. ಪ್ರಭಾಕರ್ ಕೋರಿದ್ದಾರೆ.

## ಆಕಾಶವಾಣಿಯಲ್ಲಿ ನಾಳೆ ಎಚ್‌ಬಿಎಂ



ದಾವಣಗೆರೆ, ಸೆ.3- ಆಕಾಶವಾಣಿ ಭದ್ರಾವತಿ ಕೇಂದ್ರದಿಂದ ಪ್ರಸಾರವಾಗುವ 'ಚಿಂತನ'ದಲ್ಲಿ ನಾಡಿದ್ದು ದಿನಾಂಕ 5 ರ ಶನಿವಾರ ಬೆಳಿಗ್ಗೆ 6.30 ಕ್ಕೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಅವರು 'ಶಿಕ್ಷಕರ ದಿನಾಚರಣೆ' ಕುರಿತು ಮಾತನಾಡಲಿದ್ದಾರೆ.

## ನಗರಕ್ಕಿಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ನಗರಾಭಿವೃದ್ಧಿ ಹಾಗೂ ದಾವಣಗೆರೆ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಅವರು ಇಂದು ಸಂಜೆ 5 ಗಂಟೆಗೆ ನಗರಕ್ಕೆ ಆಗಮಿಸಿ, ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು.

ನಾಳೆ ಶನಿವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಶಿಕ್ಷಕರ ಸಂಘದಿಂದ ಸರ್ಕಾರಿ ನೌಕರರ ಭವನದಲ್ಲಿ ಏರ್ಪಾಡಾಗಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವರು ಭಾಗವಹಿಸುವರು.

ನಂತರ ಮಧ್ಯಾಹ್ನ 12 ರಿಂದ 1 ವರೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸ್ಥಳೀಯ ಜನಪ್ರತಿನಿಧಿಗಳನ್ನು ಹಾಗೂ ಸಾರ್ವಜನಿಕರನ್ನು ಭೇಟಿ ಮಾಡುವರು. ನಂತರ ಮಧ್ಯಾಹ್ನ 2.30ಕ್ಕೆ ನಗರದಿಂದ ಹುಬ್ಬಳ್ಳಿಗೆ ಪ್ರಯಾಣಿಸುವರು.

॥ಶ್ರೀಮರುಳಸಿದ್ದೇಶ್ವರ ಪ್ರಸನ್ನ ॥

# ಕೈಲಾಸ ಶಿವಗಣಾರಾಧನೆ ಆಹ್ವಾನ



ಹೊನ್ನಾಳಿ ತಾಲ್ಲೂಕು ತಿಮ್ಲಾಪುರ ಗ್ರಾಮದ ವಾಸಿ

ಶ್ರೀಮತಿ ಯಶೋಧಮ್ಮ ಕೋಂ ಜಿ.ಎಂ. ಜಯಪ್ಪ

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 27.8.2020ನೇ ಗುರುವಾರ ಬೆಳಗ್ಗೆ 10.30 ಗಂಟೆಗೆ ನನ್ನ ಅಣ್ಣನವರಾದ

**ಶ್ರೀ ಜಿ.ಎಂ.ಈಶ್ವರಪ್ಪಗೌಡ್ರು**

ಮಾಜಿ ಚೇರ್ಮನ್, ತಿಮ್ಲಾಪುರ

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 4.9.2020ರ ಶುಕ್ರವಾರ ಬೆಳಗ್ಗೆ 10.30ಕ್ಕೆ ತಿಮ್ಲಾಪುರ ಗ್ರಾಮದ ಮೃತರ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ :

- ಶ್ರೀಮತಿ ಪಾರ್ವತಮ್ಮ ಕೋಂ ಜೆ.ಇ. ಬಸವರಾಜಪ್ಪ ಮತ್ತು ಮಕ್ಕಳು.
- ಶ್ರೀಮತಿ ಹೇಮಾವತಿ ಕೋಂ ಜೆ.ಇ. ಗಣೇಶ ಉಪನ್ಯಾಸಕರು, ಎವಿಕೆ ಕಾಲೇಜ್, ದಾವಣಗೆರೆ ಮತ್ತು ಮಕ್ಕಳು.
- ಶ್ರೀಮತಿ ರತ್ನಮ್ಮ ಕೋಂ ಜೆ.ಇ. ಮುರುಗೇಶ ಟಿ.ಎ.ಪಿ.ಸಿ.ಎಂ.ಎಸ್ ಮುಖ್ಯ ಕಾರ್ಯನಿರ್ವಾಹಕರು ಮತ್ತು ಮಕ್ಕಳು
- ಶ್ರೀಮತಿ ದಿ. ಸಾವಮ್ಮ ದಿ. ಜಿ.ಎಂ. ಹನುಮಂತಪ್ಪ, ಮಾಜಿ ಚೇರ್ಮನ್ ಮತ್ತು ಮಕ್ಕಳು
- ಸಾವಿತ್ರಮ್ಮ ಶ್ರೀ ದಿ. ರೇವಣಸಿದ್ದಯ್ಯ ಮತ್ತು ಮಕ್ಕಳು ಹಳೇಬಾತಿ.
- ಶ್ರೀಮತಿ ಅನುಸೂಯಮ್ಮ ಶ್ರೀ ದಿ. ವಿಶ್ವನಾಥ ಮತ್ತು ಮಕ್ಕಳು ಚನ್ನಗಿರಿ.
- ಶ್ರೀಮತಿ ಸುಶೀಲ ಎಂ.ಜಿ. ವೀರೇಶ್ ಮತ್ತು ಮಕ್ಕಳು ನೇರಲಗುಂಡಿ.
- ಮೃತರ ಪುತ್ರಿ ಕುಮಾರಿ ಜೆ.ಇ. ಶಶಿಕಲಾ ಹಾಗೂ ಪಾಲದಾರಗೌಡ್ರ ದೊಡ್ಡಬಸಪ್ಪ ವಂಶಸ್ಥರು ಮತ್ತು ತಿಮ್ಲಾಪುರ ಗ್ರಾಮಸ್ಥರು ಹಾಗೂ ಬಂಧುಮಿತ್ರರು.

# ಮೂರನೇ ವರ್ಷದ ಪುಣ್ಯಸ್ಮರಣೆ



**ದಿ॥ ಶ್ರೀ ಜೈ ಸಿಂಗ್ (ಜಯಣ್ಣ)**

ಜನನ : 01.06.1954, ಮರಣ 04.09.2017

ಮಾಲೀಕರು : ಶ್ರಮಜೀವಿ ಇಂಡಸ್ಟ್ರೀಸ್, ಶ್ರಮಜೀವಿ ಡೀಲಕ್ಸ್ ಲಾಡ್ಜ್ ಆದಿತ್ಯ ಇಂಡಸ್ಟ್ರೀಸ್ ದಾವಣಗೆರೆ.

ದುಃಖತಪ್ತರು : ತಾವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ....

ಶ್ರೀಮತಿ ಶಶಿಕಲಾ ಜೈ ಸಿಂಗ್, ಶ್ರೀಮತಿ ಸೌಮ್ಯ ಮತ್ತು ವಿವೇಕ್ ಸಿಂಗ್ (ಗಣೇಶ್)
ಶ್ರೀಮತಿ ನಂದಿನಿ ಮತ್ತು ಶ್ರೀ ಭಗವಾನ್ ಸಿಂಗ್
ಶ್ರೀಮತಿ ನವ್ಯ ಸಿಂಗ್ ಮತ್ತು ವಿಶಾಲ್ ಸಿಂಗ್, ದಿ॥ ಶ್ರೀ ಗಂಗಾರಾಮ್ ಸಿಂಗ್,
ಮಕ್ಕಳಾದ : ಶ್ರೀ ಪ್ರತಾಪ್ ಸಿಂಗ್, ಶ್ರೀ ಮಹೇಂದ್ರ ಸಿಂಗ್
ಶ್ರೀ ಅನಿಲ್ ಕುಮಾರ್ ಸಿಂಗ್, ದಾವಣಗೆರೆ. ಮೊ. : 98866 50977, 94497 74461
ಮತ್ತು ಇಂಡಸ್ಟ್ರೀಗಳ ಆಡಳಿತ ಮಂಡಳಿ, ಕಾರ್ಮಿಕ ವರ್ಗ
ಬಂಧುಗಳು-ಹಿತೈಷಿಗಳು.

## ಹರಪನಹಳ್ಳಿ ತಾ.ನ ಇಬ್ಬರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ





ಹರಪನಹಳ್ಳಿ, ಸೆ.3- ತಾಲ್ಲೂಕಿನ ಇಬ್ಬರು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಈ ಬಾರಿಯ ಬಳ್ಳಾರಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ. ಯಲ್ಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಕಬ್ಬಳಿ ಗೀತಾ ಅವರಿಗೆ ಹಾಗೂ ಬೆಂಡಿಗೇರಿ ಸಣ್ಣ ತಾಂಡಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿ.ಬಸವರಾಜ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ. ಶಿಕ್ಷಕಿ ಗೀತಾ ಅವರು 22 ವರ್ಷ ಹಾಗೂ ಶಿಕ್ಷಕ ಬಸವರಾಜ ಅವರು 14 ವರ್ಷಗಳಿಂದ ಶಿಕ್ಷಕರಾಗಿ ಮಕ್ಕಳಿಗೆ ಉತ್ತಮ ಮಟ್ಟದಲ್ಲಿ ಬೋಧಿಸುತ್ತಿದ್ದಾರೆ ಎಂದು ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಸವರಾಜ ಸಂಗಪ್ಪನವರ್ ತಿಳಿಸಿದ್ದಾರೆ.


# ಶಿವ ಸಹಕಾರಿ ಬ್ಯಾಂಕ್ ನಿಯಮಿತ

ಆಡಳಿತ ಕಚೇರಿ ಮತ್ತು ಪ್ರಧಾನ ಕಚೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.

ದೂರವಾಣಿ : 08192-256107, ಮೊ. : 94498 19322, 99644 34634, 94804 47320

## ಸಾಲಗಳ ಮೇಲಿನ ಬಡ್ಡಿ ದರದಲ್ಲಿ ಭಾರೀ ಇಳಿಕೆ

- ಗೃಹ ನಿರ್ಮಾಣ ಸಾಲ – 8.75%*
- ಚಿನ್ನಾಭರಣ ಸಾಲ – 9.00% *
- ವಾಹನ ಸಾಲ – (ಕಾರುಗಳಿಗೆ) – 9.75%*

ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ಅನುಕೂಲ ಮಾಡುವ ಉದ್ದೇಶದಿಂದ ಮೇಲಿನಂತೆ ಬಡ್ಡಿ ದರಗಳನ್ನು ಭಾರೀ ಕಡಿತಗೊಳಿಸಿ ಪರಿಷ್ಕರಿಸಲಾಗಿದೆ ಹಾಗೂ ಅನುಭವ ಮಂಟಪ ಶಾಖೆಯನ್ನು ಹೊರತುಪಡಿಸಿ ಪ್ರಧಾನ ಕಚೇರಿ ಶಾಖೆ, ಬೆಳ್ಳಿಹಬ್ಬ ಶಾಖೆ, ಎ.ಪಿ.ಎಂ.ಸಿ. ಯಾರ್ಡ್ ಶಾಖೆ, ಶಿವಕುಮಾರಸ್ವಾಮಿ ಬಡಾವಣೆ ಶಾಖೆ, ಹರಿಹರ ಶಾಖೆ ಮತ್ತು ಚಿತ್ರದುರ್ಗ ಶಾಖೆಗಳಲ್ಲಿ ಲಾಕರ್ ವ್ಯವಸ್ಥೆ ಇದ್ದು, ಮಾನ್ಯ ಸದಸ್ಯ ಗ್ರಾಹಕರು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಲು ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

* ಷರತ್ತುಗಳು ಅನ್ವಯ

ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು




# ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 03.09.2020ರಂದು ನಿಧನರಾದ ನಂದೀಶ್ ಸ್ಟೀಲ್ಸ್ ಅಂಡ್ ಸಿಮೆಂಟ್ ಮಾಲೀಕರು, ಜಿಲ್ಲಾ ಸ್ಟೀಲ್ ಅಂಡ್ ಸಿಮೆಂಟ್ ವರ್ತಕರ ಸಂಘದ ಅಧ್ಯಕ್ಷರೂ ಆದ

**ಶ್ರೀ ಬಿ.ಪಿ. ಮಾದೇವ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

◆ ಸಂಕೋಳ್ ಚಂದ್ರಶೇಖರ್ ◆ ಸಂಕೋಳ್ ಲಿಂಗರಾಜ್
◆ ಸಂಕೋಳ್ ಎಂಟರ್‌ಪ್ರೈಸಸ್ ◆ ಶ್ರೀ ನಾರದಮುನಿ ಟ್ರೇಡರ್ಸ್
ಶಾಮನೂರು.



# ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

ನನ್ನ ಪೂಜ್ಯ ಪತಿಯವರಾದ

**ಶ್ರೀ ಬಿ.ರಾಜಪ್ಪ**

ನಿವೃತ್ತ ಆಹಾರ ನಿರೀಕ್ಷಕರು, ದಾವಣಗೆರೆ ಇವರು ದಿನಾಂಕ : 16-08-2020ನೇ ಭಾನುವಾರ ಬೆಳಗಿನ ಜಾವ 2-00 ಘಂಟೆಗೆ ದೈವಾಧೀನರಾಗಿದ್ದು, ತತ್ಸಂಬಂಧ

ಕೈಲಾಸ ಸಮಾರಾಧನೆಯನ್ನು

ದಿನಾಂಕ : 05-09-2020 ರಂದು ಶನಿವಾರ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ನಮ್ಮ ಸ್ವಗ್ರಾಮ ಹಟ್ಟಿ ಬುಳಸಾಗರ ಗ್ರಾಮದ ಸ್ವಗೃಹದಲ್ಲಿ ನೆರವೇರಿಸಲು ಗುರುಹಿರಿಯರು ತೀರ್ಮಾನಿಸಿದ್ದು, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು

ಶ್ರೀಮತಿ ಗಂಗಮ್ಮ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು

# ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥ ॥ ಶ್ರೀ ಉಚ್ಚಂಗೆಮ್ಮದೇವಿ ಪ್ರಸನ್ನ ॥

ದಿ॥ ಶ್ರೀಮತಿ ಲಕ್ಷ್ಮಮ್ಮ, ದಿ॥ ಹುಲ್ಲುಮನೆ ಹನುಮಪ್ಪ ಇವರ ಮಕ್ಕಳಾದ ಶ್ರೀ ಹೆಚ್. ಹೆಚ್. ಚಂದ್ರಶೇಖರಪ್ಪ ಮತ್ತು ಸಹೋದರರು ಹಾಗೂ ಮೃತರ ಧರ್ಮಪತ್ನಿ ಶ್ರೀಮತಿ ಹನುಮಮ್ಮ ಮತ್ತು ಮಕ್ಕಳು, ನಿಟುವಳ್ಳಿ, ದಾವಣಗೆರೆ. ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 9-8-2020ನೇ ಭಾನುವಾರ ಬೆಳಿಗ್ಗೆ 9-30 ಗಂಟೆಗೆ ನಮ್ಮ ಅಣ್ಣನವರಾದ

**ಶ್ರೀ ಹುಲ್ಲುಮನೆ ಹನುಮಂತಪ್ಪ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 4-9-2020ನೇ ನೇ ಶುಕ್ರವಾರ ಬೆಳಿಗ್ಗೆ 11-30 ಗಂಟೆಗೆ, ಶ್ರೀ ಚೌಡೇಶ್ವರಿ ದೇವಸ್ಥಾನ, ಐ.ಟಿ.ಐ. ಕಾಲೇಜು ಆವರಣ ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ಹೆಚ್. ಹೆಚ್. ಚಂದ್ರಶೇಖರಪ್ಪ ಮತ್ತು ಸಹೋದರರು, ಮೃತರ ಧರ್ಮಪತ್ನಿ ಶ್ರೀಮತಿ ಹನುಮಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಹುಲ್ಲುಮನೆ ವಂಶಸ್ಥರು, ನಿಟುವಳ್ಳಿ ಹಾಗೂ ಬಂಧು-ಮಿತ್ರರು. ಮೊ. : 9620463350, 9448820121

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte